'ನನ್ನ ಕ್ಷೇತ್ರದಲ್ಲಿ ಬಾಣಸವಾಡಿ ಕೆರೆಯನ್ನು ಹಳಬರು, ಹೊಸಬರು ಎಂದೆಲ್ಲ ಕಬಳಿಸಿದ್ದಾರೆ. ಬಿಡಿಎ ಎಚ್‌ಆರ್‌ಬಿಆರ್ ಬಡಾವಣೆ ಮಾಡಿದೆ. ಒತ್ತುವರಿ- ದಾರರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಬಳಿಸಿದ್ದಾರೆ ಎಂದು ತಾಲ್ಲೂಕು, ಜಿಲ್ಲಾಡಳಿತ ಹೇಳಿದೆ. ಇದು ಸುಮಾರು ₹1,200 ಕೋಟಿಯಿಂದ ₹1,500 ಕೋಟಿ ಬೆಲೆಬಾಳುವ ಸಾರ್ವಜನಿಕರ ಆಸ್ತಿ. ಕಾನೂನು ಇಲಾಖೆಯ ಕೆಲವರು ಇದರಲ್ಲಿ ಸೇರಿಕೊಂಡಿದ್ದಾರೆ. ಈ ಕಬಳಿಕೆ ತೆರವುಗೊಳಿಸಲು ಕಂದಾಯ ಸಚಿವರು ಕ್ರಮ ಕೈಗೊಳ್ಳಬೇಕು' ಎಂದು ವಿಧಾನಸಭೆಯಲ್ಲಿ ಕೆ.ಜೆ. ಜಾರ್ಜ್ ಅವರು ಅಂದಿನ ಕಂದಾಯ ಸಚಿವ ಆರ್. ಅಶೋಕ ಅವರಲ್ಲಿ ಮನವಿ ಮಾಡಿದ್ದರು. ಇದೀಗ ಸಚಿವರಾಗಿರುವ ಜಾರ್ಜ್ ಅವರಿಗೆ ಸ್ಥಳೀಯರು ಒತ್ತುವರಿ ತೆರವಿಗೆ ಮನವಿ ನೀಡಿದ್ದಾರೆ. ಆದರೆ, ಕ್ರಮವಾಗಿಲ್ಲ ಎಂಬುದು ಅವರ ಅಳಲು. ಈ ಬಗ್ಗೆ ಪ್ರತಿಕ್ರಿಯೆಗೆ ಜಾರ್ಜ್ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಬಿಬಿಎಂಪಿ: ಪ್ರಹ್ಲಾದ್‌ಗೆ ರಾಜಕಾಲುವೆ ವಿಭಾಗದ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಬೃಹತ್ ನೀರುಗಾಲುವೆ (ರಾಜಕಾಲುವೆ) ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನು ಪ್ರಧಾನ ಎಂಜಿನಿಯರ್ (ಇಐಸಿ) ಬಿ.ಎಸ್. ಪ್ರಹ್ಲಾದ್ ಅವರಿಗೆ ಹೆಚ್ಚುವರಿಯಾಗಿ ವಹಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ, ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯಿಂದ ಬಸವರಾಜ ಕಬಾಡೆ ಅವರನ್ನು ಮುಕ್ತಗೊಳಿಸಲಾಗಿದೆ. ಇವರು ಸಾರ್ವಜನಿಕರೊಂದಿಗೆ ಸರಿಯಾಗಿ ಸ್ಪಂದಿಸದ ಕಾರಣ ಇವರನ್ನು ವರ್ಗಾಯಿಸಿ ಎಂದು ಮುಖ್ಯಮಂತ್ರಿ ಅವರು ಜೂನ್ 21ರಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಟಿಪ್ಪಣಿ ಕಳುಹಿಸಿದ್ದರು.

ಇದಲ್ಲದೆ, ಜೂನ್ 28ರಂದು ಮತ್ತೊಂದು ಟಿಪ್ಪಣಿ ಕಳುಹಿಸಿದ್ದ ಮುಖ್ಯಮಂತ್ರಿ ಅವರು, ಬೃಹತ್ ನೀರುಗಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನು ಬಿ.ಎಸ್. ಪ್ರಹ್ಲಾದ್ ಅವರಿಗೆ ವಹಿಸಬೇಕೆಂದು ಆದೇಶಿಸಿದ್ದರು. ಇದರಂತೆ ನಗರಾಭಿವೃದ್ಧಿ ಇಲಾಖೆಯಿಂದ ಜೂನ್ 28ರ ರಾತ್ರಿ ಅಧಿಸೂಚನೆ ಹೊರಬಿದ್ದಿದೆ.

'ಮಳೆಗಾಲದ ಸಂದರ್ಭವಾಗಿರು- ವುದರಿಂದ ರಾಜಕಾಲುವೆ ನಿರ್ವಹಣೆ ಕಾರ್ಯ ಅತ್ಯಂತ ಕಠಿಣವಾದದ್ದು. ಜನರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಕಾರ್ಯ ನಿರ್ವಹಿಸಬೇಕಿದೆ. ಶುಕ್ರವಾರದಿಂದ ಬೃಹತ್ ನೀರುಗಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನು ವಹಿಸಿಕೊಳ್ಳುವೆ' ಎಂದು ಪ್ರಹ್ಲಾದ್ ತಿಳಿಸಿದರು. ಇವರು ಈಗಾಗಲೇ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನೂ ಹೆಚ್ಚುವರಿಯಾಗಿ ಹೊಂದಿದ್ದಾರೆ.

ಬಸವರಾಜ ಕಬಾಡೆ ಅವರು ಘನತ್ಯಾಜ್ಯ ನಿರ್ವಹಣೆ ವಿಭಾಗದ ಮುಖ್ಯ ಎಂಜಿನಿಯರ್ ಆಗಿ ಮುಂದುವರಿದಿದ್ದಾರೆ.

ವಂಚನೆ: ಮಾಯಣ್ಣ ವಿರುದ್ಧ ದೋಷಾರೋಪ ಪಟ್ಟಿ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಹಾಗೂ ನೌಕರರ ಸಂಘದ ಹೆಸರಿನಲ್ಲಿ ಲೆಟರ್ ಹೆಡ್ ಸೃಷ್ಟಿಸಿ ವಂಚಿಸಿದ್ದ ಆರೋಪದಡಿ ಪ್ರಥಮ ದರ್ಜೆ ಸಹಾಯಕ ಮಾಯಣ್ಣ ವಿರುದ್ಧ ಪೊಲೀಸರು ದೋಷಾರೋಪ ಪಟ್ಟಿ ಸಿದ್ಧಪಡಿಸಿದ್ದಾರೆ.

ಬಿಬಿಎಂಪಿ ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಕೆ. ನರಸಿಂಹ ಅವರು ಮಾಯಣ್ಣ ವಿರುದ್ಧ 2022ರಲ್ಲಿ ದೂರು ನೀಡಿದ್ದರು. ವಂಚನೆ, ಸಹಿ ನಕಲು, ನಕಲಿ ದಾಖಲೆಗಳನ್ನು ಅಸಲಿ ಎಂದು ಬಳಸಿದ ಆರೋಪದಡಿ ಎಫ್‌ಐಆರ್ ದಾಖಲಾಗಿತ್ತು. 'ಪ್ರಕರಣದ ತನಿಖೆ ನಡೆಸಿ, ದೋಷಾರೋಪ ಪಟ್ಟಿ ಸಿದ್ಧಪಡಿಸಲಾಗಿದೆ. ಕಾನೂನು ತಜ್ಞರು ಸಹ ಪರಿಶೀಲನೆ ನಡೆಸಿ, ಒಪ್ಪಿಗೆ ನೀಡಿದ್ದಾರೆ. ಸದ್ಯದಲ್ಲೇ ನ್ಯಾಯಾಲಯಕ್ಕೆ ಪಟ್ಟಿ ಸಲ್ಲಿಸಲಾಗುವುದು' ಎಂದು ಮೂಲಗಳು ಹೇಳಿವೆ.`

ಸಂಕ್ಷಿಪ್ತ ಸುದ್ದಿ

ನಾಳೆ ರಾಷ್ಟ್ರ ಮಟ್ಟದ ಡ್ರೋನ್ ಎಕ್ಸ್‌ಪೋ

ಬೆಂಗಳೂರು: ರಾಷ್ಟ್ರೀಯ ಮಟ್ಟದ ಡ್ರೋನ್ ಟೆಕ್ ಎಕ್ಸ್‌ಪೋ ಮತ್ತು ಶೃಂಗಸಭೆ ಡಾ. ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ (ಜುಲೈ 1) ನಡೆಯಲಿದೆ.

ರಾಷ್ಟ್ರೀಯ ಸಂಶೋಧನೆ ಮತ್ತು ಅಭಿವೃದ್ಧಿ ನಿಗಮ (ಎನ್‌ಆರ್‌ಡಿಸಿ), ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಸಹಯೋಗದಲ್ಲಿ ಮಹಾವಿದ್ಯಾ- ಲಯದ ಆವರಣದಲ್ಲಿ ಬೆಳಿಗ್ಗೆ 10 ಗಂಟೆಗೆ ನಡೆಯಲಿರುವ ಈ ಪ್ರದರ್ಶನದಲ್ಲಿ ವಿವಿಧ ಸುಧಾರಿತ, ಆಧುನಿಕ ಡ್ರೋನ್‌ಗಳ ಹಾರಾಟವನ್ನು ವೀಕ್ಷಿಸಬಹುದು.

ಕಾರ್ಯಕ್ರಮದಲ್ಲಿ ಎನ್‌ಆರ್‌ಡಿಸಿ ಪ್ರಾದೇಶಿಕ ಘಟಕದ ಹಿರಿಯ ವ್ಯವಸ್ಥಾಪಕ ಬಿಜಯ್ ಕುಮಾರ್ ಸಾಹು, ಕೇಂದ್ರ ಕಂದಾಯ ಇಲಾಖೆಯ ಉಪ ಆಯುಕ್ತ ಪಿ.ವಿ. ಬೈರಪ್ಪ, ಮಂಡ್ಯ ವಿಶ್ವವಿದ್ಯಾಲಯದ ಕುಲಪತಿ ಪುಟ್ಟರಾಜು ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ಸಂಸ್ಥೆಯ ಕಾರ್ಯದರ್ಶಿ ಬಿ.ಎನ್. ಉಮೇಶ್ ತಿಳಿಸಿದ್ದಾರೆ.

ಸಾಹಿತ್ಯ ಪರೀಕ್ಷೆಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 2023-24ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಹಾಗೂ ರತ್ನ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

2023ರ ಡಿಸೆಂಬರ್ ಕೊನೆಯ ವಾರದಲ್ಲಿ ನಡೆಯುವ ಈ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನಾಂಕ. ಸೆ.15ರ ವರೆಗೆ ₹ 50 ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬಹುದು. ಪರಿಷತ್ತಿನ ಮಾರಾಟ ಮಳಿಗೆಯಲ್ಲಿ ₹ 25 ಪಾವತಿಸಿ, ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿ ನಮೂನೆಯನ್ನು ಜುಲೈ 1ರಿಂದ ಪಡೆಯಬಹುದು. ಪರಿಷತ್ತಿನ ಹೆಸರಿಗೆ ₹ 30 ಮನಿಯಾರ್ಡರ್ ಮಾಡಿದರೆ ಅರ್ಜಿ ನಮೂನೆಯನ್ನು ಅಂಚೆ ಮೂಲಕ ಕಳುಹಿಸಲಾಗುತ್ತದೆ.

ಅರ್ಜಿಗಳನ್ನು ಅಂತರ್ಜಾಲ ತಾಣ www.kasapa.in ಮೂಲಕವೂ ಪಡೆದುಕೊಳ್ಳಬಹುದು. ಪರೀಕ್ಷಾ ಶುಲ್ಕದೊಂದಿಗೆ ₹25 ಅರ್ಜಿ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 080 26623584 ಅಥವಾ 26612991

'ಸಭೆ-ಸಮಾರಂಭ ಸರಳವಾಗಿರಲಿ'

ಯಲಹಂಕ: ಕಂದಾಯ ಇಲಾಖೆಯಡಿ ವಿವಿಧ ಹಂತಗಳಲ್ಲಿ ಆಯೋಜಿಸುವ ಸಭೆ-ಸಮಾರಂಭಗಳಲ್ಲಿ ಆಡಂಬರ ಮತ್ತು ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಬೇಕು. ಸರಳವಾಗಿ ನಡೆಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೂಚಿಸಿದ್ದಾರೆ.

ಹಾರ, ನೆನಪಿನ ಕಾಣಿಕೆ ನೀಡಬಾರದು. ಅಗತ್ಯವಿದ್ದಲ್ಲಿ ತ್ರಿವರ್ಣ ಖಾದಿ ಹತ್ತಿಯ ಹಾರವನ್ನು ಮಾತ್ರ ಬಳಸಬೇಕು. ಆತಿಥ್ಯ, ಔಪಚಾರಿಕತೆಗೆ ಹೆಚ್ಚು ಸಮಯ ವ್ಯರ್ಥ ಮಾಡಬಾರದು. ಸಭೆಯ ಉದ್ದೇಶ, ವಿಷಯಕ್ಕೆ ಹೆಚ್ಚು ಸಮಯ ಒದಗಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಕುಡಿಯುವ ನೀರಿಗೆ ಏಕಬಳಕೆಯ ಪ್ಲಾಸ್ಟಿಕ್ ಬಾಟಲ್-ಕಪ್‌ಗಳನ್ನು ಕಡ್ಡಾಯವಾಗಿ ನಿಷೇಧಿಸಬೇಕು. ಮರುಬಳಕೆ ಮಾಡುವ ಬಾಟಲ್ ಮತ್ತು ಕಪ್‌ಗಳನ್ನು ಉಪಯೋಗಿಸಬೇಕು. 20 ಲೀಟರ್ ನೀರಿನ ಕ್ಯಾನ್ ಖರೀದಿಸಿ, ಮರುಬಳಕೆ ಮಾಡಲಾಗುವ ಬಾಟಲ್‌ಗಳಲ್ಲಿ ನೀಡಬೇಕು ಎಂದು ಅವರು ಸೂಚಿಸಿದ್ದಾರೆ.

CONNECT ಕ್ಲಾಸಿಫೈಡ್ಸ್

FOR RENT COMMMERCIAL PROPERTY

IN PRIME LOCATION B.T.M. MAIN ROAD
SOUTH EAST CORNER BUILDING, EAST FACING
27TH MAIN, BTM LAYOUT
- GROUND FLOOR PRERANA MOTORS.
- THREE FLOORS AVAILABLE.
- EACH FLOOR .
- MEASURING 5400 SQ.FT.
- TOTAL AREA 18800 SQ.FT.
- BASEMENT FREE CAR PARKING.

PLUG AND PLAY (90 WORK STATIONS EACH FLOOR) SUITABLE FOR SOFT WARE COMPANIES.
Contact : 9845049418/ 8884848978

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Part-Time Jobs

LIMITED MNC COMPANY Lost Job, Provide Work From Home Earn 30K to 35K: 9886641282/ 7019215243

General

Yelahanka

30x40 Converted Plot @ 1,65,000/-
133/- per sq.ft, 90 minutes Journey from Yelahanka
Ready for Registration
9343510635, 9010559539

Housewife | Retired Employee
Defence Veterans | Salesman
Self Employed | Insurance Agent
Benefits:
• Unlimited Income • Welfare of Society
Earn an assured reward on every project*
JOIN NOW
or on 6352981579/ 6353361406 FOR MORE details
CONTRIBUTE TO YOUR FAMILY'S INCOME
*T&C applied

REAL ESTATE SELLING

Agricultural Land Converted

Multiple Locations

SALE INDUSTRIAL/ Commercial/ Residential vacant land Bannerghatta Road 17000 to 70000sft, Hulimavu 3600 to 19700sft, Bidadi 17000to 87000sft. Visit vernadevelopers.com MG Road, Bangalore. 9353128035/ 9620253180

General

Multiple Locations

BUY, SELL, Rent Residential, industrial and farm land, office space available for rent. Contact. 9380586105.

Sites

Mysore

CORNER SITE For Sale, with Old House, 71.5'x46', Saraswathipuram, Mysuru. Brokers Excuse. Contact: 9632418363

Nelamangala

NELAMANGALA SITE For sale at E.K. Enclave just opp. to RTO Nelamangala. Contact Raju:- 9448082402.

Villas/Bunglows

Rajarajeshwari Nagar

RR.NAGAR 50X80 VIJAYNAGAR 60x90 Basaveswarnagar Sadashivnagar Malleswaram Kumara Park RMV 2nd Stage 2years Old Architect BUNGLOW 5Carparks Generator Modern Office Terrace Garden 5BHK A/C, Basement Remote Car Garage Door Modern Pooja Room: 9845057822/ 9980830798

Thanisandra

SOBHA CITY Tanisandra Main Road, 5 BHK Row House villa for sale. Contact: Chandan: 9900665081

RENTAL PROPERTIES

Accommodation Available

Industrial And Factory

FOR RENT: Peenya 2nd Stage, 10000 sqft industrial facility, 65 HP power, corner site. Suitable for CNC machining, manufacturing, and assembly operations. Contact: 9148833730

REAL ESTATE BUYING

Agricultural Land Converted

Sarjapur Road

SALE 21 Guntas residentially converted land for sale at Sarjapura Road, Sixty feet inside from Main Road. Contact: 8310818291.

DH ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
For more information Contact: 9845114560 : 9731810277
9901641752 : 9886213331
080 - 45557163 / 164
*conditions apply

GURU PURNIMA
Three Layers of Reality
Discourse in English
All are Welcome

Sunday, 2nd July 2023
10:30 - 11.30 am
NMKRV College for Women
Shashwathi Auditorium
Jayanagar 3rd Block
Near Jayanagar Metro Station
Shri. Eswaran
Senior Disciple of Swami A. Parthasarathy
Sponsored by JGi JAIN DEEMED-TO-BE UNIVERSITY

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

General

General

DC CONVERSION/ Change of land use, Phodi Durasti, NOC,Approvals, Khata, RERA Work,Para Legal Services.Barton Centre MG Road. 9916310226/ 9353128035. vernadevelopers.com

BUSINESS

Business Offers

Finance

NRI'S Investment And Finance Available On Low Interest Against Properties,Land & Building,Sites,Flats,Converted & Agriculture Lands Call:7204995189

EDUCATIONAL

Diploma Courses

DIPLOMA IN Student Counselling, 6-months, ONLINE, Starts:11-July WhatsApp: 9886044221 www.darwinpsychologycentre.com

PERSONAL

Change of Name

CHANGE OF NAME
I, **TESSY THOMAS,** W/o **THOMAS JOSEPH,** previously known as **TESSYMOL CHERIAN,** R/at T-2,ROYAL NEST, 5M-613, 5th MAIN RD, OMBR LAYOUT, BANASWADI, BANGALORE-560043, declare that I have changed my name to **TESSY THOMAS** vide affidavit dated 28-06-2023 before Notary C.V. Earappa, Bangalore.

I, M. MANJUNATHA, Residing at Ward #03, Kelagina Pete, Near Kalamma Temple, Kurugodu, Bellary- 583116, have changed my name to M MANJUNATHA GOUDA, affidavit dated 23/06/2023 notary B.M. Chandarashekar Bengaluru

I KARAN BAFNA R/a, #22, 23, Flat No.201, 2nd floor, Arihant Apartment, Subramanya Swamy Temple Street, Bangalore- 560004 Have Changed my Minor Daughter's Name From EVA K. SANGHVI To EVA BAFNA Vide Affidavit Dated 26/06/2023 before Notary L. Shankaranarayana Bangalore

Lost

LOSS OF DOCUMENTS
I, NR Subrahmanyam have lost the Following documents Citibank sb acct statments Vcb sb pass book Loan agreement between NR Subrahmanyam Sasidharan and Pushpa latha pertaining to CCL 4026/2020 has gone missing since 26.06.2023 on my way to. Visvesvaraya Co operative bank, shankarpuram. Police complaint has been lodged at Shankarpuram Police station. Finder please handover the documents to Shankarpuram Police station OR call me on 8861486618
NR Subrahmanyam

TOURS & TRAVEL

Travel

CONTACT ORCHID Travel and Tours, Basavanagudi to Book 20 Days Australia and Newzealand Group Tour, Package cost Includes Air Tickets, visa Accommodation in 4 Star Hotel, Indian Meal, Tour Manager from Bangalore, Call: 9900080796 9880100099

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಐಐಎಚ್‌ಆರ್: ಅಣಬೆಗಳ ವಾಣಿಜ್ಯ ಉತ್ಪಾದನಾ ತಂತ್ರಜ್ಞಾನ ಅಭಿವೃದ್ಧಿ

ಹೆಚ್ಚು ಪೋಷಕಾಂಶವುಳ್ಳ ಆಯ್‌ಸ್ಟರ್, ಮ್ಯಾಕ್ರೋಸೈಬೆ

• ಖಲೀಲಅಹ್ಮದ ಶೇಖ

ಟ್ಯೂಬರ್ ಆಯ್‌ಸ್ಟರ್ ಅಣಬೆ (ಎಡಚಿತ್ರ) ಮ್ಯಾಕ್ರೋಸೈಬೆ ಅಣಬೆ

ಬೆಂಗಳೂರು: ಅಧಿಕ ತಾಪಮಾನದಲ್ಲಿ ಬೆಳೆಯುವ ಮತ್ತು ಹೆಚ್ಚು ಪೋಷ-ಕಾಂಶಗಳನ್ನು ಹೊಂದಿರುವ ಅಣಬೆ ತಳಿಗಳನ್ನು ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯು (ಐಐಎಚ್‌ಆರ್) ಅಭಿವೃದ್ಧಿಪಡಿಸಿದೆ.

ಮ್ಯಾಕ್ರೋಸೈಬೆ ತಳಿ ಹೆಸರಿನ ಅಣಬೆಯನ್ನು ಬೆಂಗಳೂರಿನ ಸಿದ್ದಾಪುರದಿಂದ ಸಂಗ್ರಹಿಸಲಾಗಿದ್ದು, ಟ್ಯೂಬರ್ ಆಯ್‌ಸ್ಟರ್ ಅಣಬೆಯನ್ನು ತ್ರಿಪುರಾದ ಮಾರುಕಟ್ಟೆಯಿಂದ ಸಂಗ್ರಹಿಸಲಾಗಿದೆ. ಭಾರತದಲ್ಲಿಯೇ ಮೊದಲ ಬಾರಿಗೆ ಈ ಎರಡು ಅಣಬೆಗಳ ವಾಣಿಜ್ಯ ಉತ್ಪಾದನಾ ತಂತ್ರ-ಜ್ಞಾನವನ್ನು ಐಐಎಚ್‌ಆರ್ ಅಭಿವೃದ್ಧಿಪಡಿಸಿದೆ.

‘ಭಾರತದಲ್ಲಿ ಇದುವರೆಗೂ ಹಾಲು ಅಣಬೆಯನ್ನು (ಮಿಲ್ಕಿ) ಮಾತ್ರ ಹೆಚ್ಚಿನ ತಾಪಮಾನದಲ್ಲಿ ಬೆಳೆಯಲಾಗುತ್ತಿತ್ತು. ಈಗ ಮ್ಯಾಕ್ರೋಸೈಬೆ ಅಣಬೆಯು ಹೆಚ್ಚಿನ ತಾಪಮಾನದಲ್ಲಿ ಬೆಳೆಯುವ ಮತ್ತೊಂದು ಅಣಬೆಯಾಗಿದೆ. ಹಾಲು ಅಣಬೆಗಿಂತ ಅಧಿಕ ಪ್ರೋಟೀನ್, ಪೋಷಕಾಂಶ, ಹೆಚ್ಚು ರುಚಿಕರವಾಗಿದೆ’ ಎಂದು ಐಐಎಚ್‌ಆರ್‌ನ ಅಣಬೆ ವಿಭಾಗದ ಪ್ರಧಾನ ವಿಜ್ಞಾನಿ ಡಾ. ಚಂದ್ರಶೇಖರ ತಿಳಿಸಿದರು.

‘ಮ್ಯಾಕ್ರೋಸೈಬೆ ಅಣಬೆಯನ್ನು 30-40 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹಾಗೂ ಶೇ 85ರಷ್ಟು ಆರ್ದ್ರತೆಯಲ್ಲಿ ಬೆಳೆಯಬಹುದು. ಕೇವಲ ಕಡಿಮೆ ತಾಪಮಾನದಲ್ಲಿ ಬೆಳೆಯಲಾಗುತ್ತಿದ್ದ ಅಣಬೆಯನ್ನು ಈಗ, ದಕ್ಷಿಣ ಭಾರತದ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕೇರಳ ರಾಜ್ಯಗಳು ಸೇರಿ ಅಧಿಕ ತಾಪಮಾನವಿರುವ ಪ್ರದೇಶಗಳಲ್ಲಿ ಸುಲಭವಾಗಿ ಬೆಳೆಯಬಹುದು’ ಎಂದು ವಿವರಿಸಿದರು.

ಪ್ರಜಾವಾಣಿ ವಿಶೇಷ

‘ಟ್ಯೂಬರ್ ಆಯ್‌ಸ್ಟರ್ ಅಣಬೆಯನ್ನು ಈಶಾನ್ಯ ರಾಜ್ಯಗಳಲ್ಲಿ ಮಳೆಗಾಲದಲ್ಲಿ ಮಾತ್ರ ಸಂಗ್ರಹಿಸಿ ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ಐಐಎಚ್‌ಆರ್ ಈ ಅಣಬೆಯನ್ನು ಸಂಗ್ರಹಿಸಿ ಸತತ ನಾಲ್ಕು ವರ್ಷಗಳ ಸಂಶೋಧನೆ ಮಾಡುವುದರ ಮೂಲಕ ಅಭಿವೃದ್ಧಿ-ಪಡಿಸಿದೆ. ಈಗ ಟ್ಯೂಬರ್ ಆಯ್‌ಸ್ಟರ್ ಅಣಬೆಯನ್ನು ಈಶಾನ್ಯ ರಾಜ್ಯಗಳಲ್ಲಿ ವರ್ಷದ ಯಾವುದೇ ಋತುಮಾನದಲ್ಲಿ ಸುಲಭವಾಗಿ ಬೆಳೆಯಬಹುದು. ಈ ಅಣಬೆಯಲ್ಲಿ ಶೇ 40.34 ರಷ್ಟು ಪೌಷ್ಟಿಕಾಂಶ ಇದೆ. ಇದರಲ್ಲಿ ಮಕ್ಕಳ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಬಹುದು. ಈ ಅಣಬೆಯು ಶೇ 28-32 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹಾಗೂ ಶೇ 85 ರಷ್ಟು ಆರ್ದ್ರತೆಯಲ್ಲಿ ಬೆಳೆಯಬಹುದು’ ಎಂದು ಅವರು ತಿಳಿಸಿದರು.

‘ಬಹುತೇಕ ಜನ ಅಣಬೆಯನ್ನು ಮಾಂಸಾಹಾರವೆಂದು ಭಾವಿಸುತ್ತಾರೆ. ವಾಸನೆ ಇರುತ್ತದೆ ಎಂದು ತಾಜಾ ಅಣಬೆ ತಿನ್ನಲು ಹಲವು ಜನ ಇಷ್ಟಪಡುವುದಿಲ್ಲ. ಆದರೆ, ಐಐಎಚ್‌ಆರ್ ಅಣಬೆಯಿಂದ ಚಟ್ನಿಪುಡಿ, ರಸಂ ಪುಡಿ ತಯಾರಿಸಿದ್ದು, ಈ ಪುಡಿಗಳನ್ನು ಆಹಾರದಲ್ಲಿ ಸೇರಿಸುವುದರಿಂದ ಯಾವುದೇ ತರಹದ ವಾಸನೆ ಬರುವುದಿಲ್ಲ. ಮಾಮೂಲಿ ರಸಂ, ಚಟ್ನಿಯಂತೆಯೇ ಇರುತ್ತದೆ’ ಎಂದರು.

‘ಭತ್ತದ ಹುಲ್ಲಿನಲ್ಲಿ ಅಧಿಕ ಇಳುವರಿ’

‘ಈ ಎರಡು ತಳಿಯ ಅಣಬೆಗಳನ್ನು ಸಂರಕ್ಷಿಸುವುದರ ಜತೆಗೆ ಪ್ರಯೋಗಾಲಯದ ಸ್ಥಿತಿಗೆ ಒಗ್ಗಿಕೊಳ್ಳುವುದಕ್ಕಾಗಿಯೇ ನಾಲ್ಕು ವರ್ಷಗಳ ಕಾಲ ನಿರಂತರವಾಗಿ ಬೇರೆ-ಬೇರೆ ಕೃಷಿ ತ್ಯಾಜ್ಯಗಳ ಮೇಲೆ ಅಣಬೆಗಳನ್ನು ಬೆಳೆಯಲಾಗಿದೆ. ಅಂತಿಮವಾಗಿ ಭತ್ತದ ಹುಲ್ಲಿನ ಮೇಲೆಯೇ ಅಧಿಕ ಇಳುವರಿ ಪಡೆಯಬಹುದು’ ಎಂದು ಐಐಎಚ್‌ಆರ್ ಅಣಬೆ ವಿಭಾಗದ ಪ್ರಧಾನ ವಿಜ್ಞಾನಿ ಡಾ. ಚಂದ್ರಶೇಖರ ಮಾಹಿತಿ ನೀಡಿದರು.

ಅಣಬೆಯಲ್ಲಿ ಮಕ್ಕಳ ಬೆಳವಣಿಗೆಗೆ ಪೂರಕವಾದ ಸಾಕಷ್ಟು ನ್ಯೂಟ್ರಿಷನ್ಸ್, ಐರನ್, ಕ್ಯಾಲ್ಷಿಯಂ, ಮಿನರಲ್ಸ್‌ಗಳಿರುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಫೈಬರ್ (ನಾರಿನಾಂಶ) ಹೆಚ್ಚಾಗಿದ್ದು, ಕೊಬ್ಬಿನಾಂಶ ಕಡಿಮೆಯಿರುತ್ತದೆ. ಹೀಗಾಗಿ, ಅಣಬೆ ದೇಹದ ಆರೋಗ್ಯಕ್ಕೆ ಉತ್ತಮವಾದುದು’ ಎಂದರು.

ಡಿಸಿಪಿ ಕಾರಿನಲ್ಲಿದ್ದ ಡಿಎಸ್‌ಸಿ ಕೀ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ವಿಭಾಗದ (ಪಶ್ಚಿಮ) ಡಿಸಿಪಿ ಸುಮನ್ ಡಿ. ಪೆನ್ನೇಕರ್ ಅವರ ಕಾರಿನಲ್ಲಿದ್ದ ಡಿಎಸ್‌ಸಿ ಕೀ ಕಳ್ಳತನವಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಸುಮನ್ ಪೆನ್ನೇಕರ್ ಅವರು ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ಕಚೇರಿ ಉಪಯೋಗಕ್ಕೆ ಹಾಗೂ ಇ-ತಂತ್ರಾಂಶದಲ್ಲಿ ಸಹಿ ಮಾಡಲು ರಾಜ್ಯ ಸರ್ಕಾರದಿಂದ ಡಿಜಿಟಲ್ ಸಿಗ್ನೇಚರ್ ಸರ್ಟಿಫಿಕೇಟ್ (ಡಿಎಸ್‌ಸಿ) ಕೀಗಳನ್ನು ನೀಡಲಾಗುತ್ತದೆ. ಸಂಚಾರ ವಿಭಾಗದಲ್ಲಿ (ಪಶ್ಚಿಮ) ಕೆಲಸ ಮಾಡುತ್ತಿರುವ ಸುಮನ್ ಅವರ ಬಳಿಯೂ ಡಿಎಸ್‌ಸಿ ಕೀ ಇತ್ತು. ಅದೇ ಕೀ ಕಳ್ಳತನವಾಗಿದೆ’ ಎಂದು ತಿಳಿಸಿವೆ.

ಬಿಬಿಎಂಪಿ ಪಾರ್ಕಿಂಗ್ ಜಾಗದಲ್ಲಿ ಕಳ್ಳತನ: ‘ಸುಮನ್ ಅವರು ತಮ್ಮ ಸ್ವಂತ ಇಕೋ ಸ್ಪೋರ್ಟ್ಸ್ ಐಟಾನಿಯಂ (ಫೋರ್ಡ್) ಕಾರಿನಲ್ಲಿ ಜೂನ್ 26ರಂದು ಕರ್ತವ್ಯಕ್ಕೆ ಬಂದಿದ್ದರು. ಬೆಳಿಗ್ಗೆ 10 ಗಂಟೆಗೆ ಉಪ್ಪಾರಪೇಟೆ ಠಾಣೆ ಪಕ್ಕದಲ್ಲಿರುವ ಬಿಬಿಎಂಪಿ ಕಚೇರಿಯ ಪಾರ್ಕಿಂಗ್ ಜಾಗದಲ್ಲಿ ಕಾರು ನಿಲ್ಲಿಸಿದ್ದರು. ನಂತರ, ಸರ್ಕಾರಿ ಕಾರಿನಲ್ಲಿ ಕಚೇರಿಗೆ ಹೋಗಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕಚೇರಿಯಲ್ಲಿ ಇ-ಆಫೀಸ್ ತಂತ್ರಾಂಶದಲ್ಲಿ ಸಹಿ ಮಾಡಲು ಮುಂದಾಗಿದ್ದರು. ಆದರೆ, ಅವರ ಬಳಿ ಡಿಎಸ್‌ಸಿ ಕೀ ಇರಲಿಲ್ಲ. ಕಾರಿನಲ್ಲಿ ಕೀ ಮರೆತಿರುವುದು ನೆನಪಾಗುತ್ತಿದ್ದಂತೆ, ಪಾರ್ಕಿಂಗ್ ಜಾಗದಲ್ಲಿದ್ದ ಕಾರಿನ ಬಳಿ ಬಂದಿದ್ದರು. ಆದರೆ, ಕಾರಿನ ಸೀಟಿನಲ್ಲಿದ್ದ ಕೀ ಇರಲಿಲ್ಲ.’

‘ಕಚೇರಿಗೆ ತೆರಳುವ ವೇಳೆಯಲ್ಲಿ ಕಾರಿನ ಬಾಗಿಲುಗಳನ್ನು ಲಾಕ್ ಮಾಡುವುದನ್ನು ಡಿಸಿಪಿ ಮರೆತಿದ್ದರು. ಯಾರೋ ಕಳ್ಳರು, ಕಾರಿನ ಬಾಗಿಲು ತೆರೆದು ಡಿಎಸ್‌ಸಿ ಕೀ ಕದ್ದುಕೊಂಡು ಹೋಗಿದ್ದಾರೆ. ಕೀ ದುರುಪಯೋಗವಾಗುವ ಸಾಧ್ಯತೆ ಇದೆ. ಹೀಗಾಗಿ, ಡಿಸಿಪಿ ದೂರು ನೀಡಿದ್ದಾರೆ. ಆರೋಪಿಗಳನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

₹ 52.10 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ಅಪರಾಧ ಸುದ್ದಿ

ಬೆಂಗಳೂರು: ಡ್ರಗ್ಸ್ ವಿರುದ್ಧ ಪ್ರತ್ಯೇಕ ಕಾರ್ಯಾಚರಣೆ ನಡೆಸಿರುವ ಗಿರಿನಗರ ಹಾಗೂ ಕೋಣನಕುಂಟೆ ಠಾಣೆ ಪೊಲೀಸರು, ₹ 52.10 ಲಕ್ಷ ಮೌಲ್ಯದ 100 ಕೆ.ಜಿ ಗಾಂಜಾ ಜಪ್ತಿ ಮಾಡಿದ್ದಾರೆ.

‘ಮಹಾರಾಷ್ಟ್ರದಿಂದ ಗಾಂಜಾ ತಂದು ನಗರದಲ್ಲಿ ಮಾರುತ್ತಿದ್ದ ಆಕಾಶ್ (25), ಅಮೂಲ್ (40), ರಾಹುಲ್ (28) ಮತ್ತು ಸೈಯದ್ ಸಾದಿಕ್‌ನನ್ನು (40) ಬಂಧಿಸಲಾಗಿದೆ. ಇವರಿಂದ ₹ 50 ಲಕ್ಷ ಮೌಲ್ಯದ ಗಾಂಜಾ ಜಪ್ತಿ ಮಾಡಲಾಗಿದೆ. ಬಂಧಿತರು ಮಹಾರಾಷ್ಟ್ರದವರು’ ಎಂದು ಗಿರಿನಗರ ಪೊಲೀಸರು ಹೇಳಿದರು.

ಕೋಣನಕುಂಟೆ ಪೊಲೀಸರು, ‘ಗಾಂಜಾ ಮಾರುತ್ತಿದ್ದ ಆರೋಪದಡಿ ಪುಟ್ಟೇನಹಳ್ಳಿ ನಿವಾಸಿಗಳಾದ ಸಂತೋಷ್ (32) ಹಾಗೂ ಗೌತಮ್‌ನನ್ನು (36) ಬಂಧಿಸಲಾಗಿದೆ. ಇವರಿಂದ ₹ 2.10 ಲಕ್ಷ ಮೌಲ್ಯದ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದರು.

‘ಬಂಧಿತ ಆರೋಪಿಗಳು, ಕೋಲಾರದಿಂದ ನಗರಕ್ಕೆ ಗಾಂಜಾ ತರುತ್ತಿದ್ದರು. ಪರಿಚಯಸ್ಥ ಗ್ರಾಹಕರಿಗೆ ಗಾಂಜಾ ಮಾರಿ, ಹಣ ಸಂಪಾದಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

ಕಿರುಕುಳ: ಪತಿ ಸೇರಿ ಇಬ್ಬರು ವಶಕ್ಕೆ

ಬೆಂಗಳೂರು: ಪತ್ನಿಗೆ ಮಾನಸಿಕವಾಗಿ ಕಿರುಕುಳ ನೀಡಿ ಹಲ್ಲೆ ನಡೆಸಿದ್ದ ಆರೋಪದಡಿ ಪತಿ ಅಖಿಲೇಶ್ ಸೇರಿ ಇಬ್ಬರನ್ನು ಸುಬ್ರಮಣ್ಯಪುರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಸ್ಥಳೀಯ ನಿವಾಸಿಯಾಗಿರುವ ಮಹಿಳೆ ದೂರು ನೀಡಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆ, ಪತಿ ಅಖಿಲೇಶ್ ಹಾಗೂ ಆತನ ಸಹೋದರ ಅಭಿಲಾಷ್ ನಾಪತ್ತೆಯಾಗಿದ್ದರು. ಇದೀಗ ಅವರಿಬ್ಬರು ಸಿಕ್ಕಿಬಿದ್ದಿದ್ದು, ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಅಖಿಲೇಶ್, ವೈವಾಹಿಕ ಜಾಲತಾಣದ ಮೂಲಕ ಸಂತ್ರಸ್ತ ಮಹಿಳೆಯನ್ನು ಪರಿಚಯ ಮಾಡಿಕೊಂಡು ಮದುವೆಯಾಗಿದ್ದ. ಮದ್ಯ ಹಾಗೂ ಡ್ರಗ್ಸ್ ವ್ಯಸನಿಯಾಗಿದ್ದ ಎನ್ನಲಾದ ಅಖಿಲೇಶ್, ಅದರ ಅಮಲಿನಲ್ಲಿ ಪತ್ನಿ ಮೇಲೆ ಹಲ್ಲೆ ಮಾಡುತ್ತಿದ್ದ. ನಿತ್ಯವೂ ವಿನಾಕಾರಣ ಜಗಳ ತೆಗದು ಕಿರುಕುಳ ನೀಡುತ್ತಿದ್ದ. ಇದಕ್ಕೆ ಸಹೋದರ ಸಹ ಸಹಕರಿಸುತ್ತಿದ್ದ. ಬೇಸತ್ತ ಮಹಿಳೆ ಠಾಣೆಗೆ ದೂರು ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

ಲೈಂಗಿಕ ದೌರ್ಜನ್ಯ: ಆರೋಪಿ ಬಂಧನ

ಬೆಂಗಳೂರು: ಅನ್ನಪೂರ್ಣೇಶ್ವರಿ ನಗರ ಠಾಣೆ ವ್ಯಾಪ್ತಿಯಲ್ಲಿ ಬುದ್ಧಿಮಾಂದ್ಯ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಇಬ್ರಾಹಿಂ ಬಾಷಾನನ್ನು (30) ಪೊಲೀಸರು ಬಂಧಿಸಿದ್ದಾರೆ.

‘ತಮಿಳುನಾಡಿನ ಇಬ್ರಾಹಿಂ, ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ. ನಿರ್ಮಾಣ ಹಂತದ ಕಟ್ಟಡದಲ್ಲಿ ಗಾರೆ ಕೆಲಸಕ್ಕೆ ಸೇರಿದ್ದ. ಜೂನ್ 22ರಂದು ಕೃತ್ಯ ಎಸಗಿ ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಪರಾರಿಯಾಗಿದ್ದ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದವು. 25 ಕ್ಯಾಮೆರಾ ದೃಶ್ಯಗಳ ಸುಳಿವು ಆಧರಿಸಿ ಆರೋಪಿಯನ್ನು ಪತ್ತೆ ಮಾಡಲಾಯಿತು’ ಎಂದು ಪೊಲೀಸರು ತಿಳಿಸಿದರು.

ಗಾಯನ ‘ಸೇಂಟ್ ಪೀಟರ್ ಡೇ’ ಪ್ರಯುಕ್ತ ಬಿಷಪ್ ಕಾಟನ್ ಬಾಲಕಿಯರ ಶಾಲೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಗಾಯನ ಪ್ರಸ್ತುತಪಡಿಸಿದರು.

ವಿಧಾನಸೌಧ ಠಾಣೆಗೆ ದೂರು ನೀಡಿದ ಮಹಿಳಾ ಉದ್ಯೋಗಿ

ಲೈಂಗಿಕ ಕಿರುಕುಳ: ಆಡಳಿತಾಧಿಕಾರಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾನೂನು ಮತ್ತು ಅಭಿಯೋಜನಾ ಇಲಾಖೆಯ ಕಾನೂನು ಅಧಿಕಾರಿ (ಹಿರಿಯ) ಕಚೇರಿಯ ಆಡಳಿತಾಧಿಕಾರಿ ನಾರಾಯಣಸ್ವಾಮಿ, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ನೀಡಿ ಜೀವ ಬೆದರಿಕೆಯೊಡ್ಡಿದ್ದಾರೆ’ ಎಂದು ಆರೋಪಿಸಿ 45 ವರ್ಷದ ಮಹಿಳಾ ಉದ್ಯೋಗಿಯೊಬ್ಬರು ವಿಧಾನಸೌಧ ಠಾಣೆಗೆ ದೂರು ನೀಡಿದ್ದಾರೆ.

‘ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ನಾರಾಯಣಸ್ವಾಮಿ, ಲೈಂಗಿಕ ಕ್ರಿಯೆಗೆ ಸಹಕರಿಸುವಂತೆ ಒತ್ತಾಯಿಸುತ್ತಿದ್ದರು. ಅದಕ್ಕೆ ನಾನು ಒಪ್ಪಿರಲಿಲ್ಲ. ಜೂನ್ 14ರಂದು ಕಚೇರಿ ಸಹಾಯಕ ಕೂಡ ನಾರಾಯಣಸ್ವಾಮಿ ಜೊತೆ ಹೊಂದಾಣಿಕೆ ಮಾಡಿಕೊಳ್ಳಿ ಎಂದು ಪೀಡಿಸಿದ್ದ. ನಂತರ, ನನಗೆ ಬೇರೆಡೆ ವರ್ಗಾವಣೆ ಆಗಿದೆ. ಇಲಾಖೆಯಲ್ಲಿ ಹೇಗೆ ಕೆಲಸ ಮಾಡುತ್ತೀಯಾ ನೋಡುತ್ತೇನೆ? ಎಂದು ನಾರಾಯಣಸ್ವಾಮಿ ಬೆದರಿಸುತ್ತಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದ್ದೆ. ಸ್ಪಂದನೆ ಸಿಕ್ಕಿಲ್ಲ. ಹೀಗಾಗಿ, ಠಾಣೆಗೆ ದೂರು ನೀಡುತ್ತಿದ್ದೇನೆ. ನಾರಾಯಣ ಸ್ವಾಮಿ ವಿರುದ್ಧ ಕ್ರಮ ಕೈಗೊಳ್ಳಿ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆಗೆ ನಾರಾಯಣ ಸ್ವಾಮಿ ಲಭ್ಯರಾಗಲಿಲ್ಲ.

ಕೈ ಕತ್ತರಿಸಿ ಯುವಕನ ಹತ್ಯೆ

ಬೆಂಗಳೂರು: ನೈಸ್ ರಸ್ತೆಯ ನೆಟ್ಟಿಗೆರೆಪಾಳ್ಯ ಸಮೀಪದಲ್ಲಿ ಯುವಕರೊಬ್ಬರ ಮೃತದೇಹ ಬುಧವಾರ ರಾತ್ರಿ ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

‘ಮೃತ ಯುವಕನ ಮುಖ ವಿಕಾರವಾಗಿದೆ. ಹೆಸರು ಹಾಗೂ ವಿಳಾಸ ಸದ್ಯಕ್ಕೆ ಗೊತ್ತಾಗಿಲ್ಲ. 25 ವರ್ಷದಿಂದ 30 ವರ್ಷ ವಯಸ್ಸಿರಬಹುದೆಂದು ಅಂದಾಜಿಸಲಾಗಿದೆ. ಮೃತದೇಹದ ಫೋಟೊವನ್ನು ರಾಜ್ಯದ ಎಲ್ಲ ಠಾಣೆಗಳಲ್ಲಿ ಕಳುಹಿಸಲಾಗಿದ್ದು, ಗುರುತು ಪತ್ತೆ ಮಾಡಲಾಗುತ್ತಿದೆ’ ಎಂದು ತಲಘಟ್ಟಪುರ ಠಾಣೆ ಪೊಲೀಸರು ಹೇಳಿದರು.

‘ಯಾರೋ ದುಷ್ಕರ್ಮಿಗಳು, ಯುವಕನನ್ನು ಅಪಹರಿಸಿ ನೈಸ್ ರಸ್ತೆಗೆ ಕರೆತಂದಿದ್ದಾರೆ. ನಂತರ, ತಲೆ, ಎದೆ ಹಾಗೂ ಮುಖಕ್ಕೆ ಮಾರಕಾಸ್ತ್ರಗಳಿಂದ ಹೊಡೆದಿದ್ದಾರೆ. ಯುವಕನ ಒಂದು ಕೈ ಸಹ ಕತ್ತರಿಸಿದ್ದಾರೆ. ತೀವ್ರ ಹಲ್ಲೆಯಿಂದಾಗಿ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತದೇಹವನ್ನು ಕೆಳಸೇತುವೆ ಬಳಿ ಎಸೆದು ಆರೋಪಿಗಳು ಪರಾರಿಯಾಗಿದ್ದಾರೆ. ಸ್ಥಳದಲ್ಲಿ ರಕ್ತದ ಕಲೆಗಳಿವೆ’ ಎಂದು ತಿಳಿಸಿದರು.

‘ಮೃತದೇಹವನ್ನು ಕೆಂಪೇಗೌಡ ಆಸ್ಪತ್ರೆಯಲ್ಲಿ ಇರಿಸಲಾಗಿದ್ದು, ಸಂಬಂಧಿಕರು ಸಿಕ್ಕ ಬಳಿಕ ಒಪ್ಪಿಗೆ ಪಡೆದು ಮರಣೋತ್ತರ ಪರೀಕ್ಷೆ ನಡೆಸಲಾಗುವುದು. ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನವಿದೆ. ಯಾವ ಕಾರಣಕ್ಕೆ ಕೊಲೆಯಾಗಿದೆ ಹಾಗೂ ಆರೋಪಿಗಳು ಯಾರು ಎಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದರು.

ರಾಜ್ಯಮಟ್ಟದ ಕಾರ್ಯಾಗಾರ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನ ಓದು ಅಭಿಯಾನ: ಭಾಷಣ ಮತ್ತು ಸಂವಹನ ಕಲೆ' ಕುರಿತು ರಾಜ್ಯಮಟ್ಟದ ಕಾರ್ಯಾಗಾರ ಜುಲೈ 2 ಮತ್ತು 3ರಂದು ನಗರದ ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿರುವ 'ಆಶೀರ್ವಾದ'ದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಂವಿಧಾನದ ಬಗ್ಗೆ ಜನರಿಗೆ ಸರಳ ಹಾಗೂ ಸ್ಪಷ್ಟ ಮಾಹಿತಿಯನ್ನು ನೀಡುವುದಕ್ಕಾಗಿ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರು 2018ರಲ್ಲಿ 'ಸಂವಿಧಾನ ಓದು' ಕೃತಿಯನ್ನು ರಚಿಸಿದ್ದಲ್ಲದೇ 'ಸಂವಿಧಾನ ಓದು ಅಭಿಯಾನ' ತಂಡವನ್ನು ಕಟ್ಟಿದ್ದರು. ಈ ತಂಡದ ಮೂಲಕ ರಾಜ್ಯದಾದ್ಯಂತ ನೂರಾರು ಉಪನ್ಯಾಸ, ವಿಚಾರ ಸಂಕಿರ್ಣ, ಸಮಾವೇಶ, ಕಾರ್ಯಾಗಾರಗಳನ್ನು ನಡೆಸಿಕೊಂಡು ಬರಲಾಗಿದೆ.

'ಸಂವಿಧಾನ ಓದು' ಕೃತಿ 20 ಲಕ್ಷಕ್ಕಿಂತ ಹೆಚ್ಚು ಪ್ರತಿಗಳು ಪ್ರಕಟತಗೊಂಡಿವೆ. ಮಲಯಾಳಿ, ತೆಲುಗು, ಹಿಂದಿ, ತಮಿಳಿಗೂ ಭಾಷಾಂತರಗೊಂಡಿದೆ. ವಿದ್ಯಾರ್ಥಿ-ಯುವಜನರ ಮಧ್ಯೆ 'ಸಂವಿಧಾನ ಓದು' ಅಭಿಯಾನ ಕೊಂಡೊಯ್ಯಲಾಗುತ್ತಿದೆ. ಇದರ ಮುಂದುವರಿದ ಭಾಗವಾಗಿ ರಾಜ್ಯದ ಪ್ರತಿ ಮನೆಗೂ ಸಂವಿಧಾನದ ಅರಿವು ಮೂಡಿಸಲು ಮುಂದಾಗಿದೆ.

ಹೀಗಾಗಿ, 'ಸಂವಿಧಾನ ಓದು ಅಭಿಯಾನ: ಭಾಷಣ ಮತ್ತು ಸಂವಹನ ಕಲೆ' ಎಂಬ ಘೋಷಣೆಯಡಿ ರಾಜ್ಯಮಟ್ಟದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, ಸಾಹಿತಿಗಳಾದ ಆರ್.ಕೆ. ಹುಡಗಿ, ಯೋಗೇಶ್ ಮಾಸ್ಟರ್, ರಹಮತ್ ತರೀಕೆರೆ ಪಾಲ್ಗೊಳ್ಳಲಿದ್ದಾರೆ. ಬೇರೆ ಬೇರೆ ಜಿಲ್ಲೆಗಳಿಂದ 150ಕ್ಕೂ ಹೆಚ್ಚು ಶಿಬಿರಾರ್ಥಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಲಿದ್ದಾರೆ ಎಂದು ಅಭಿಯಾನದ ಸಂಚಾಲಕ ಬಿ. ರಾಜಶೇಖರಮೂರ್ತಿ ತಿಳಿಸಿದ್ದಾರೆ.

ನಿವೇಶನವಿದ್ದರೂ ಮನೆ ಕಟ್ಟಲಾಗುತ್ತಿಲ್ಲ, ಮನೆ ಇದ್ದರೂ ತೆರಳಲು ದಾರಿ ಇಲ್ಲ!

ಸಮಸ್ಯೆ ಸುಳಿಯಲ್ಲಿ ಕೆಂಪೇಗೌಡ ಬಡಾವಣೆ

• ಆದಿತ್ಯ ಕೆ.ಎ.

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ (ಬಿಡಿಎ) ಭೂಸ್ವಾಧೀನ ಪ್ರಕ್ರಿಯೆ ವಿಳಂಬ ಹಾಗೂ ಹೆಚ್ಚಿನ ಪರಿಹಾರಕ್ಕಾಗಿ ರೈತರು ನ್ಯಾಯಾಲಯದ ಮೆಟ್ಟಿಲೇರುವ ಪರಿಣಾಮ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣವಾಗಿ 13 ವರ್ಷ ಕಳೆದರೂ 'ಸಮಗ್ರ ಅಭಿವೃದ್ಧಿ'ಯನ್ನೇ ಕಂಡಿಲ್ಲ!

ಇನ್ನು ಸ್ವಾಧೀನ ಪಡಿಸಿಕೊಂಡಿರುವ ಸ್ಥಳದಲ್ಲೂ ಕಾಮಗಾರಿ ಪ್ರಗತಿ ಕಂಡಿಲ್ಲ. ಇದರಿಂದ ನಿವೇಶನದಾರರು ಸಮಸ್ಯೆ ಕೂಪಕ್ಕೆ ಸಿಲುಕಿದ್ದಾರೆ.

2016ರಲ್ಲೇ ನಿವೇಶನ ಖರೀದಿಸಿದ್ದ ಹಲವರಿಗೆ ಮನೆ ನಿರ್ಮಿಸಲು ಸಾಧ್ಯವಾಗಿಲ್ಲ. ನಿರ್ಮಿಸಿದ ಮನೆಗಳಿಗೆ ತೆರಳಲು ರಸ್ತೆಯೂ ಇಲ್ಲ. ಮತ್ತೊಂದು ಕಡೆ ರೈತರಿಂದ ಫಲವತ್ತಾದ ಕೃಷಿ ಜಮೀನನ್ನು ಕಸಿದುಕೊಂಡಿರುವ ಬಿಡಿಎ, ಸಂತ್ರಸ್ತ ರೈತರಿಗೆ ಪೂರ್ಣ ಪ್ರಮಾಣ ಪರಿಹಾರವನ್ನೇ ನೀಡಿಲ್ಲ. ಹೆಚ್ಚಿನ ಪರಿಹಾರಕ್ಕೆ ರೈತರು ಮನವಿ ಸಲ್ಲಿಸಿದ್ದರೂ ಪ್ರಕರಣ ಇತ್ಯರ್ಥ ಪಡಿಸಲು ಬಿಡಿಎ ಮುಂದಾಗುತ್ತಿಲ್ಲ ಎಂದು ಸಂತ್ರಸ್ತರು ಅಳಲು ತೋಡಿಕೊಳ್ಳುತ್ತಾರೆ.

ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಶಿವರಾಮ ಕಾರಂತ ಬಡಾವಣೆ ಯತ್ತ ಬಿಡಿಎ ಹೆಚ್ಚಿನ ಆಸಕ್ತಿ ವಹಿಸಿತ್ತು. ಭೂಸ್ವಾಧೀನ ಸೇರಿದಂತೆ ವಿವಿಧ ಉಸ್ತುವಾರಿ ಅಧಿಕಾರಿಗಳನ್ನು ಕಾರಂತ ಬಡಾವಣೆಗೆ ನಿಯೋಜಿಸಿದ್ದರಿಂದ ಕೆಂಪೇಗೌಡ ಬಡಾವಣೆ ಸೊರಗಿತು ಎಂದು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಪದಾಧಿಕಾರಿಗಳು ಹೇಳುತ್ತಾರೆ.

2010ರಲ್ಲೇ ಈ ಬಡಾವಣೆ ನಿರ್ಮಾಣಕ್ಕೆ ಮುಂದಾಗಿದ್ದ ಬಿಡಿಎ, ಬೆಂಗಳೂರು ಉತ್ತರ ತಾಲ್ಲೂಕಿನ ನಾಲ್ಕು ಗ್ರಾಮಗಳಾದ ಸೀಗೆಹಳ್ಳಿ, ಕನ್ನಲ್ಲಿ, ಕೊಡಿಗೇಹಳ್ಳಿ, ಮಂಗನಹಳ್ಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ 8 ಗ್ರಾಮಗಳಾದ ಕೊಮ್ಮಘಟ್ಟ, ಭೀಮನಕುಪ್ಪೆ, ರಾಮಸಾಗರ ಸೂಲಿಕೆರೆ, ಕೆಂಚನಪುರ, ರಾಮಸಂದ್ರ, ಕೊಮ್ಮಘಟ್ಟ ಕೃಷ್ಣಸಾಗರ, ಚಲ್ಲಘಟ್ಟ ಗ್ರಾಮಗಳಲ್ಲಿ 4,043 ಎಕರೆ 27 ಗುಂಟೆ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿತ್ತು. ಇದುವರೆಗೂ 2,642 ಎಕರೆ ಜಮೀನನ್ನು ಸ್ವಾಧೀನ ಮಾಡಿ ಅಭಿವೃದ್ಧಿಗೆ ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಿ ಕಾಮಗಾರಿ ನಡೆಸುತ್ತಿದೆ. ಅಲ್ಲಿಯೂ ಅರೆಬರೆ ಕಾಮಗಾರಿಯನ್ನಷ್ಟೇ ನಡೆಸಲಾಗಿದೆ. ಉಳಿದಂತೆ 1,377 ಎಕರೆಯನ್ನು ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲು ಬಾಕಿಯಿದೆ. ಇದರಿಂದ ರಸ್ತೆ, ವಿದ್ಯುತ್ ಸಂಪರ್ಕ, ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯ ಕಾಮಗಾರಿ ನಿರಂತರ ಸಾಧ್ಯವಾಗಿಲ್ಲ. ಇಡೀ ಬಡಾವಣೆ ಮೂಲಸೌಕರ್ಯದ ಕೊರತೆಯಿಂದ ನಲುಗುತ್ತಿದೆ.

'600 ಎಕರೆ ಜಮೀನು ವಿವಾದವು ನ್ಯಾಯಾಲಯದಲ್ಲಿದೆ. ಅದನ್ನು ಹೊರತುಪಡಿಸಿ 751 ಎಕರೆ ಸರ್ಕಾರಿ ಜಮೀನನ್ನು ಸ್ವಾಧೀನ ಪಡಿಸಿಕೊಂಡು ಬಡಾವಣೆ ಅಭಿವೃದ್ಧಿಪಡಿಸುತ್ತೇವೆ. ನಿರಂತರವಾಗಿ ಕಾಮಗಾರಿ ಕೈಗೊಳ್ಳಲಾಗುವುದು ಬಿಡಿಎ ಅಧಿಕಾರಿಗಳು ಭರವಸೆ ನೀಡಿದ್ದರು. ಆದರೆ, ಅಧಿಸೂಚನೆ ಹೊರಡಿಸಿದ್ದರೂ ಭೂಸ್ವಾಧೀನ ವಿಳಂಬದಿಂದ ಬಡಾವಣೆ ಅವ್ಯವಸ್ಥೆ ಆಗರವಾಗಿದೆ' ಎಂದು ನಿವೇಶನದಾರರು, ರೈತರು ಹೇಳಿದ್ದಾರೆ.

ಸಂಪರ್ಕ ರಸ್ತೆಯೇ ಇಲ್ಲ: 'ಮುಖ್ಯರಸ್ತೆಗೆಂದು (ಮೇಜರ್ ಆರ್ಟಿರಿಯಲ್ ರಸ್ತೆ) 260 ಎಕರೆ ಸ್ವಾಧೀನಕ್ಕೆ ಅಧಿಸೂಚನೆ ಆಗಿತ್ತು. ಅದರಲ್ಲಿ 60 ಎಕರೆ ಪ್ರದೇಶದಲ್ಲಿ ಪರಿಹಾರದ ಗೊಂದಲದಿಂದ ರಸ್ತೆ ನಿರ್ಮಿಸಲು ಸಾಧ್ಯವಾಗಿಲ್ಲ. 22 ಎಕರೆ ಸ್ವಾಧೀನಕ್ಕೆ ಬಾಕಿಯಿದೆ. ಈ ಸಮಸ್ಯೆಯನ್ನೂ ಬಗೆಹರಿಸಿ ಸುಸಜ್ಜಿತ ರಸ್ತೆ ನಿರ್ಮಿಸಬೇಕಿದೆ' ಎಂದು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಸೂರ್ಯ ಕಿರಣ್ ಹೇಳುತ್ತಾರೆ.

ಪ್ರಜಾವಾಣಿ ವಿಶೇಷ

ನ್ಯಾಯಾಲಯದ ತಡೆಯಾಜ್ಞೆ ಫಲಕ ಹಾಕಿರುವುದು

> ಅರ್ಕಾವತಿ ಬಡಾವಣೆಯವರಿಗೆ ಇಲ್ಲಿ ನಿವೇಶನ ಒದಗಿಸಲಾಗುತ್ತಿದೆ. ಆದರೆ, ಕೆಂಪೇಗೌಡ ಬಡಾವಣೆಗಾಗಿ ಜಮೀನು ಕಳೆದುಕೊಂಡವರಿಗೇ ಪೂರ್ಣ ಪರಿಹಾರವನ್ನೇ ನೀಡಿಲ್ಲ.
>
> **ಕೆ.ಜಿ.ಚನ್ನಪ್ಪ,** ರೈತ ಮುಖಂಡ

> ಪರಿಹಾರ ರೂಪದಲ್ಲಿ ನಿವೇಶನ ಕೊಟ್ಟಿದ್ದಾರೆ. ಆದರೆ, ಬಡಾವಣೆಯನ್ನೇ ಅಭಿವೃದ್ಧಿಪಡಿಸಿಲ್ಲ. ಜಮೀನನ್ನು ಬಿಡಿಎಗೆ ಕೊಟ್ಟು ತಪ್ಪು ಮಾಡಿದ್ದೇವೆ.
>
> **ಸೋಮಶೇಖರ್**
> ರೈತ ಮುಖಂಡ, ಸೂಲಿಕೆರೆ

ಭೂಸ್ವಾಧೀನ ಬಾಕಿಯಿಂದ ತೊಂದರೆಗಳು

- ಒಂದು ಬ್ಲಾಕ್‌ನಿಂದ ಇನ್ನೊಂದು ಬ್ಲಾಕ್‌ಗೆ ಸಂಪರ್ಕ ರಸ್ತೆ, ಒಳರಸ್ತೆ ನಿರ್ಮಾಣದಲ್ಲಿ ನಿರಂತರತೆ ಇಲ್ಲವಾಗಿದೆ
- ಅರೆಬರೆಗೊಂಡ ವಿದ್ಯುತ್ ಮಾರ್ಗ, ರಾಜಕಾಲುವೆ, ಕುಡಿಯುವ ನೀರು ಕಾಮಗಾರಿ
- ಆಂತರಿಕ ರಸ್ತೆಗಳು, ಪ್ರದೇಶಗಳಲ್ಲಿ ಭೂಸ್ವಾಧೀನ ಸಮಸ್ಯೆಯಿಂದ ನಿವೇಶನಗಳಲ್ಲಿ ಮನೆ ಕಟ್ಟಲು ಸಾಧ್ಯವಾಗದ ಸ್ಥಿತಿ.

ಸಮಸ್ಯೆಗೆ ಕಾರಣ ಏನು?

- ರೈತರಿಗೆ ಭೂಪರಿಹಾರ ಮೊದಲು ಕೊಟ್ಟು ನಂತರ ನಿವೇಶನದಾರರಿಗೆ ಹಂಚಿಕೆ ಮಾಡಬೇಕಾಗಿತ್ತು. ಆದರೆ, ನಿವೇಶನದಾರರಿಗೆ ಹಂಚಿ ರೈತರಿಗೆ 2ನೇ ಪ್ರಾತಿನಿಧ್ಯ ಕೊಟ್ಟಿದ್ದರಿಂದ ಸಮಸ್ಯೆ ಎದುರಾಗಿದೆ.
- ಕೆಂಪೇಗೌಡ ಬಡಾವಣೆಯ ಭೂಸ್ವಾಧೀನ ವಿಭಾಗಕ್ಕೆ ಭೂಮಾಪಕರು, ಭೂಸ್ವಾಧೀನ ಅಧಿಕಾರಿಗಳ ಕೊರತೆ
- ರೈತರು ಕೇಳುತ್ತಿರುವ ಪ್ರದೇಶದಲ್ಲೇ ಪರಿಹಾರವನ್ನೂ ನೀಡುತ್ತಿಲ್ಲ.

ಆರ್ಥಿಕ ಹೊರೆ

ಭೂಸ್ವಾಧೀನ ಸಮಸ್ಯೆಯಿಂದ ಎಂಜಿನಿಯರಿಂಗ್ ವಿಭಾಗ ಕಾಮಗಾರಿಗಳ ಖರ್ಚು ಮುಂದೆ ಹೆಚ್ಚಾಗುವ ಸಾಧ್ಯತೆಯಿದೆ. ಕಾಮಗಾರಿಗೆ ಅಂದಾಜಿಸಿದ ಮೊತ್ತಕ್ಕಿಂತ ಶೇ 5ರಿಂದ 6 ಪಟ್ಟು ಹೆಚ್ಚಾಗುವ ಸಾಧ್ಯತೆ ಎಂದು ನಿವೇಶನದಾರರು ಹೇಳುತ್ತಾರೆ.

'ಜಿಲ್ಲಾಡಳಿತದೊಂದಿಗೆ ಮಾತುಕತೆ'

ಸರ್ಕಾರಿ ಜಮೀನು ಸ್ವಾಧೀನ ಮತ್ತು ಪರಿಹಾರ ನೀಡುವುದಕ್ಕೆ ಸಂಬಂಧಿಸಿದಂತೆ ಜಿಲ್ಲಾಡಳಿತದೊಂದಿಗೆ ಮಾತುಕತೆ ನಡೆಯುತ್ತಿದೆ. ನ್ಯಾಯಾಲಯದಲ್ಲಿರುವ ಪ್ರಕರಣವನ್ನೂ ಆದಷ್ಟು ಬೇಗ ಇತ್ಯರ್ಥ ಪಡಿಸಲು ಪ್ರಯತ್ನಿಸಲಾಗುತ್ತಿದೆ. ಬಡಾವಣೆಗೆ ಸೋಮವಾರ ಭೇಟಿ ನೀಡಿದ್ದೆ. ಅಲ್ಲಿನ ಸಮಸ್ಯೆ ಅರಿವಿದೆ.

ಜಿ.ಕುಮಾರ ನಾಯಕ್, ಬಿಡಿಎ ಆಯುಕ್ತ

ಅರೆಬರೆ ಕಾಮಗಾರಿಯಿಂದ ಚರಂಡಿಯಲ್ಲಿ ನಿಂತಿರುವ ಮಳೆ ನೀರು

ಭೂಮಿಕಾ ಕ್ಲಬ್: ನಾಳೆ 6 ನೇ ಆವೃತ್ತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'ನ 'ಭೂಮಿಕಾ ಕ್ಲಬ್' ವೇದಿಕೆಯು ಜುಲೈ 1ರಂದು ಆರನೇ ಆವೃತ್ತಿಯ ಕಾರ್ಯಕ್ರಮ ಹಮ್ಮಿಕೊಂಡಿದೆ.

ಅಂದು ಮಧ್ಯಾಹ್ನ 2.30ಕ್ಕೆ, ಪಿ.ಸಿ.ಚಂದ್ರ ಜ್ಯುವೆಲರ್ಸ್ ಸಹಯೋಗದಲ್ಲಿ ನಗರದ ಕೋರಮಂಗಲದ 6ನೇ ಬ್ಲಾಕ್‌ನ 6ನೇ ಅಡ್ಡರಸ್ತೆಯಲ್ಲಿರುವ ಕೋರಮಂಗಲ ಕ್ಲಬ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ. ಹಟ್ಟಿ ಕಾಫಿ ಹಾಗೂ ಐಎಫ್‌ಎಂ (ಫ್ಯಾಷನ್ ಶೋ ಪಾರ್ಟನರ್) ಪ್ರಾಯೋಜಕತ್ವ ವಹಿಸಿದೆ.

ಗಾಯಕಿ ಚೈತ್ರಾ ಜೆ. ಆಚಾರ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿನ್ಯಾಸಕಿ ಶೈನಿ ಅಲೆಕ್ಸಾಂಡರ್ ಅವರು ಆಭರಣ ವಿನ್ಯಾಸ ಕುರಿತು ಮಾತನಾಡಲಿದ್ದಾರೆ. ಜೆ.ಎನ್.ರವಿ ಅವರ ನಿರ್ದೇಶನ ಹಾಗೂ ಸಿರಿ ರಮೇಶ್ ಅವರ ನೃತ್ಯ ಸಂಯೋಜನೆಯಲ್ಲಿ ಐಎಫ್‌ಎಂ ಸಿನಿಮಾ ಸಂಸ್ಥೆಯ ಜ್ಯುವೆಲರ್ಸ್ ಫ್ಯಾಷನ್ ಶೋ ಮೂಡಿಬರಲಿದೆ. ತಾರಕ್ ನೃತ್ಯ ಅಕಾಡೆಮಿಯಿಂದ ನೃತ್ಯ ಕಾರ್ಯಕ್ರಮವು ಪ್ರೇಕ್ಷಕರನ್ನು ರಂಜಿಸಲಿದೆ. ಕಾರ್ಯಕ್ರಮದಲ್ಲಿ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಹೆಸರು ನೋಂದಣಿ ಮಾಡಿಕೊಳ್ಳಬಹುದು. ನೋಂದಣಿಗೆ bit.ly/bhumikaclubjuly1

SCAN ME

ನೌಕರರ ಅಂತರಜಿಲ್ಲಾ ವರ್ಗಾವಣೆ: ತಿದ್ದುಪಡಿ ಮಾಡುವಂತೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರ ಅಂತರಜಿಲ್ಲಾ ವರ್ಗಾವಣೆಗೆ ಅನುಕೂಲವಾಗುವಂತೆ 16ಎ ನಿಯಮಗಳಿಗೆ ತಿದ್ದುಪಡಿ ಮಾಡಬೇಕು ಎಂದು ರಾಜ್ಯ ಸರ್ಕಾರಿ ನೌಕರರ ಸಂಘ ಮುಖ್ಯಮಂತ್ರಿಗೆ ಮನವಿ ಮಾಡಿದೆ.

ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು.

7ನೇ ವೇತನ ಆಯೋಗದ ಶಿಫಾರಸಿನಂತೆ ವೇತನ ಪರಿಷ್ಕರಣೆ ಮಾಡಲು ಬಜೆಟ್‌ನಲ್ಲಿ ಅಗತ್ಯ ಅನುದಾನ ಮೀಸಲಿಡಬೇಕು. ಆಯೋಗದ ವರದಿಯನ್ನು ತ್ವರಿತವಾಗಿ ಪಡೆಯಬೇಕು. ಸರ್ಕಾರಿ ನೌಕರರ ವೇತನ ಮತ್ತು ಭತ್ಯೆ ಪರಿಷ್ಕರಿಸಬೇಕು. ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ರದ್ದು ಮಾಡಿ, ಹಳೇ ಪಿಂಚಣಿ ವ್ಯವಸ್ಥೆ (ಒಪಿಎಸ್) ಜಾರಿಗೊಳಿಸಬೇಕು. ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ ಅನುಷ್ಠಾನಗೊಳಿಸಬೇಕು ಎಂದು ಕೋರಿದರು. ಸಂಘದ ಮನವಿ ಆಲಿಸಿದ ಸಿದ್ದರಾಮಯ್ಯ, ಸರ್ಕಾರಿ ನೌಕರರ ಬೇಡಿಕೆಗಳನ್ನು ಕಾಲಮಿತಿಯ ಒಳಗೆ ಈಡೇರಿಸುವ ಭರವಸೆ ನೀಡಿದರು.

ಸಂಘದ ಪದಾಧಿಕಾರಿಗಳಾದ ಎಂ.ವಿ. ರುದ್ರಪ್ಪ, ಎಸ್. ಬಸವರಾಜು, ಡಾ. ನೆಲ್ಕುದ್ರಿ ಸದಾನಂದಪ್ಪ, ಮೋಹನ್ ಕುಮಾರ್, ಶ್ರೀ ಹರ್ಷ, ಎನ್. ಮಾಲತೇಶ್, ಹರಿರಾಮಕೃಷ್ಣ, ಚಿಕ್ಕದೇವೇಗೌಡ, ಚೇತನ್‌ಕುಮಾರ್ ಇದ್ದರು.

'ಪ್ರಧಾನಿ ಕಾರ್ಯಕ್ರಮ: ವಿದ್ಯಾರ್ಥಿಗಳ ಹಾಜರಿ ಕಡ್ಡಾಯ'

ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಕಪ್ಪುಬಣ್ಣದ ವಸ್ತ್ರ ಧರಿಸಿ ಬರುವಂತಿಲ್ಲ, ಹಾಜರಾತಿ ಕಡ್ಡಾಯ, ಬೆಳಿಗ್ಗೆ 10ರಿಂದ 12 ಗಂಟೆಯವರೆಗೆ ತರಗತಿಗಳು ಇರುವುದಿಲ್ಲ.

–ದೆಹಲಿ ವಿಶ್ವವಿದ್ಯಾಲಯದ ಶತಮಾನೋತ್ಸವ ಸಮಾರಂಭದ ನೇರ ಪ್ರಸಾರ ಕಾರ್ಯಕ್ರಮದ ಹಿನ್ನೆಲೆಯಲ್ಲಿ ವಿ.ವಿ. ವ್ಯಾಪ್ತಿಯ ಕೆಲ ಕಾಲೇಜುಗಳು ವಿದ್ಯಾರ್ಥಿಗಳಿಗೆ ನೀಡಿರುವ ಸೂಚನೆಗಳಿವು.

ಜೂನ್ 30ರಂದು ನಡೆಯಲಿರುವ ಶತಮಾನೋತ್ಸವದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದ ನೇರ ಪ್ರಸಾರದ ವ್ಯವಸ್ಥೆಯನ್ನು ಕೆಲ ಕಾಲೇಜುಗಳು ಮಾಡಿವೆ.

ಹಿಂದೂ ಕಾಲೇಜು, ಡಾ.ಭೀಮ್‌ರಾವ್ ಅಂಬೇಡ್ಕರ್ ಕಾಲೇಜು, ಜಾಕೀರ್ ಹುಸೇನ್ ದೆಹಲಿ ಕಾಲೇಜು ನೇರ ಪ್ರಸಾರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಹಾಜರಿಯನ್ನು ಕಡ್ಡಾಯಪಡಿಸಿವೆ.

ನೇರ ಪ್ರಸಾರ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಐದು ಹಾಜರಿ ನೀಡಲಾಗುವುದು ಎಂದು ಹಿಂದೂ ಕಾಲೇಜಿನ ಉಸ್ತುವಾರಿ ಶಿಕ್ಷಕಿ ಮೀನಾ ಶ್ರೀವಾತ್ಸವ ಅವರು ತಿಳಿಸಿದ್ದಾರೆ.

ಈ ಕುರಿತು ಪ್ರಶ್ನಿಸಿದಾಗ ಕಾಲೇಜಿನ ಪ್ರಾಚಾರ್ಯರಾದ ಅಂಜು ಶ್ರೀವಾತ್ಸವ, 'ಕಾಲೇಜು ಆಡಳಿತವು ಇಂತಹ ಯಾವುದೇ ನೋಟಿಸ್ ನೀಡಿಲ್ಲ. ಈ ಬಗ್ಗೆ ನನಗೆ ಮಾಹಿತಿ ಇಲ್ಲ' ಎಂದು ಪ್ರತಿಕ್ರಿಯಿಸಿದರು.

'ಎಲ್ಲ ಗ್ಯಾರಂಟಿ ಜಾರಿ, ಅಕ್ರಮಗಳ ತನಿಖೆ ಖಚಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಟ್ಟ ಮಾತಿನಂತೆ ನಾವು ಐದೂ ಗ್ಯಾರಂಟಿಗಳನ್ನು ಈಡೇರಿಸುತ್ತೇವೆ. ಅದೇ ರೀತಿ, ಹಿಂದಿನ ಬಿಜೆಪಿ ಸರ್ಕಾರದಲ್ಲಿ ನಡೆದಿರುವ ಎಲ್ಲ ಅಕ್ರಮಗಳನ್ನು ತನಿಖೆಗೆ ಒಳಪಡಿಸಿ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇವೆ. ಈ ವಿಷಯದಲ್ಲಿ ಸರ್ಕಾರದ ಧ್ವನಿ ಒಂದೇ ಆಗಿದೆ' ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಅವರು ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಡವರ ಅಕ್ಕಿಯ ವಿಚಾರದಲ್ಲಿ ರಾಜಕಾರಣ ಮಾಡಿ ಬಿಜೆಪಿ ಮೋಸ ಮಾಡಿದೆ. ಇಂಥ ಬಿಜೆಪಿಗೆ ಜನರೇ ತಕ್ಕ ಪಾಠ ಕಲಿಸಬೇಕು' ಎಂದರು.

'ಅಕ್ಕಿ ಬದಲು ನಗದು ತಾತ್ಕಾಲಿಕ ಕ್ರಮವಷ್ಟೆ. ಅಕ್ಕಿ ಸಂಗ್ರಹಣೆ ಅಥವಾ ಖರೀದಿಗೆ ಪರ್ಯಾಯ ವ್ಯವಸ್ಥೆಯಾದ ತಕ್ಷಣದಿಂದ ಅಕ್ಕಿಯನ್ನೇ ಕೊಡುತ್ತೇವೆ. ಆದರೆ, ಹಣ ಕೊಡುವುದರಿಂದ ಜನರು ಸಂತೋಷಗೊಂಡಿದ್ದಾರೆ ಎಂದು ಅವರು ಹೇಳಿದರು.

ಸಂಕ್ಷಿಪ್ತ ಸುದ್ದಿ

ಜುಲೈ18ಕ್ಕೆ ಭೋವಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಬೆಂಗಳೂರು: ಚಿತ್ರದುರ್ಗದ ಭೋವಿ ಗುರುಪೀಠದಲ್ಲಿ ಜುಲೈ 18ಕ್ಕೆ ಭೋವಿ-ವಡ್ಡ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಪಾಲಕರ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಪ್ರತಿಭಾ ಪುರಸ್ಕಾರಕ್ಕೆ ಎಸ್‌ಎಸ್‌ಎಲ್‌ಸಿ, ಪಿಯುನಲ್ಲಿ ಶೇ 90ಕ್ಕಿತ ಹೆಚ್ಚು ಅಂಕ ಪಡೆದ ಭೋವಿ ಸಮುದಾಯದ ವಿದ್ಯಾರ್ಥಿಗಳು ಜುಲೈ 10ರ ಒಳಗೆ ಅರ್ಜಿ ಸಲ್ಲಿಸಬಹುದು. ಸಿದ್ಧರಾಮೇಶ್ವರ ಮಹಾಸಂಸ್ಥಾನ, ಭೋವಿ ಗುರುಪೀಠ, ಇಮ್ಮಡಿಗಿರಿ ನಗರ, ದಾವಣಗೆರೆ ರಸ್ತೆ, ರಾಷ್ಟ್ರೀಯ ಹೆದ್ದಾರಿ- 48, ಚಿತ್ರದುರ್ಗ-577502 ವಿಳಾಸಕ್ಕೆ ಅರ್ಜಿ ಕಳುಹಿಸಬೇಕು. ಹೆಚ್ಚಿನ ಮಾಹಿತಿಗೆ 9481308433, 9900882964 ಸಂಪರ್ಕಿಸಬಹುದು.

ಪ್ರತಿಭಾ ಪುರಸ್ಕಾರ, ಪಾಲಕರ ಸಮಾವೇಶದ ಜತೆಗೆ ವಧು-ವರರ ಸಮಾವೇಶ ನಡೆಯಲಿದೆ. ವಿಧವೆ, ವಿದುರರ ಮರು ವಿವಾಹಕ್ಕೂ ಅವಕಾಶವಿದೆ. ಅಂಗವಿಕಲರಿಗೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗಿದೆ. ಸಿದ್ದರಾಮೇಶ್ವರ ಮಹಾಸಂಸ್ಥಾನ ಭೋವಿಗುರುಪೀಠದ ಪೀಠಾಧ್ಯಕ್ಷರಾದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರ ದೀಕ್ಷಾ ರಜತ ಮಹೋತ್ಸವ ಪ್ರಯುಕ್ತ ಸಮಾವೇಶ ಆಯೋಜಿಸಲಾಗಿದೆ ಎಂದು ಮಠದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೌನಹಳ್ಳಿ ಗೋವಿಂದಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಮದೇವರ ಬೆಟ್ಟದಲ್ಲಿ ಪ್ರಥಮ ಏಕಾದಶಿ ಪೂಜೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ರಾಮದೇವರ ಬೆಟ್ಟದಲ್ಲಿ ಪ್ರಥಮ ಏಕಾದಶಿ ಹಬ್ಬದ ಪ್ರಯುಕ್ತ ಗುರುವಾರ ವಿಶೇಷ ಪೂಜೆ ನೆರವೇರಿತು.

ಧಾರ್ಮಿಕ ವಿಧಿ ವಿಧಾನಗಳೊಂದಿಗೆ ರಾಮದೇವರ ಪಾದುಕೆ ಹಾಗೂ ಉತ್ಸವ ಮೂರ್ತಿಗೆ ಫಲಪಂಚಾಮೃತ ಅಭಿಷೇಕ ನಡೆಸಿ, ಹೂವುಗಳಿಂದ ಅಲಂಕರಿಸಿ ಪೂಜೆ ನೆರವೇರಿಸಲಾಯಿತು.

ಸುತ್ತಮುತ್ತಲ ಗ್ರಾಮಸ್ಥರು ಹಲಸಿನ ಹಣ್ಣಿನ ರಸಾಯನ ಮಾಡಿಕೊಂಡು ಬಂದು ಪೂಜೆ ಮಾಡಿಸಿದರು.

'ಜಾತ್ಯತೀತ ನಿಲುವಿನ ಕೆಂಪೇಗೌಡ'

ರಾಜರಾಜೇಶ್ವರಿನಗರ: ಧಾರ್ಮಿಕ, ಪರಂಪರೆ, ಸಂಸ್ಕೃತಿ ಮತ್ತು ಜಾತ್ಯತೀತ ನಿಲುವಿನಿಂದ ಬೆಂಗಳೂರು ನಗರವನ್ನು ಕಟ್ಟಿದ ನಾಡಪ್ರಭು ಕೆಂಪೇಗೌಡರನ್ನು ಒಂದು ಜಾತಿ ಧರ್ಮಕ್ಕೆ ಸೀಮಿತಗೊಳಿಸಬಾರದು ಎಂದು ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಎಂ. ತಿಬ್ಬೇಗೌಡ ಹೇಳಿದರು.

ಜವರೇಗೌಡನ ದೊಡ್ಡಿಯಲ್ಲಿ ನಡೆದ ಕೆಂಪೇಗೌಡರ 514ನೇ ಜಯಂತಿ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಜಾವಾಣಿ @75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಹೊಸಕೋಟೆ ಬಸ್ ನಿಲ್ದಾಣದಲ್ಲಿ ಅವಾಂತರ ಸೃಷ್ಟಿಸಿದ ಮದ್ಯವ್ಯಸನಿ

ಬಾರದ ಪತ್ನಿ: ಬಸ್‌ನಡಿ ಮಲಗಿ ಪತಿ ರಂಪಾಟ!

ಪ್ರಜಾವಾಣಿ ವಾರ್ತೆ

ಹೊಸಕೋಟೆ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಪ್ರವಾಸಕ್ಕೆಂದು ಹೋದ ಪತ್ನಿ ಹಲವು ದಿನಗಳಾದರೂ ವಾಪಸ್ ಬರಲಿಲ್ಲವೆಂದು ನೊಂದ ಮದ್ಯವ್ಯಸನಿಯೊಬ್ಬ ಬಸ್ ಚಕ್ರದಡಿ ತಲೆ ಇಟ್ಟು ರಂಪಾಟ ಮಾಡಿದ.

ಆತನ ಮನವೊಲಿಸಿ ಬಸ್ ಅಡಿಯಿಂದ ಎಬ್ಬಿಸಲು ಸಾರಿಗೆ ಸಂಸ್ಥೆಯ ಸಿಬ್ಬಂದಿ ಪರದಾಡಿದರು. ಬಸ್ ನಿಲ್ದಾಣದಲ್ಲಿ ನಡೆದ ಈ ಹೈಡ್ರಾಮಾ ವೀಕ್ಷಿಸಲು ನೂರಾರು ಜನರು ಗುಂಪು ಸೇರಿದ್ದರು. ಕೊನೆಗೆ ಸಾರ್ವಜನಿಕರ ನೆರವಿನೊಂದಿಗೆ ಸಾರಿಗೆ ಸಿಬ್ಬಂದಿ ಜನರ ಆತನನ್ನು ಬಸ್ ಕೆಳಗಿನಿಂದ ಹೊರಗೆಳೆದು ಕಳುಹಿಸಿದರು.

'ಸಾರಿಗೆ ಸಂಸ್ಥೆ ಬಸ್‌ನಲ್ಲಿ ಮಹಿಳೆಯರಿಗೆ ಉಚಿತವಾಗಿ ಪ್ರಯಾಣಿಸಲು ಅವಕಾಶ ನೀಡಿರುವುದರಿಂದ ನನ್ನ ಹೆಂಡತಿ ಪ್ರವಾಸಕ್ಕೆ ಹೋದವಳು ಇನ್ನೂ ಮರಳಿ ಬಂದಿಲ್ಲ. ಇದಕ್ಕೆಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಣ' ಎಂದು ಕೂಗಾಡಿದ ಆತ ಬಿಎಂಟಿಸಿ ಬಸ್ ಕೆಳಗೆ ನುಸುಳಿದ. ಬಸ್ ಮುಂದಿನ ಚಕ್ರದ ಕೆಳಗೆ ತಲೆ ಇಟ್ಟು ಮಲಗಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಒಡ್ಡಿದ.

'ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸುವ ಆದೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದಕ್ಕೆ ಪಡೆಯಬೇಕು. ಇಲ್ಲದಿದ್ದರೆ ಪುರುಷರಿಗೂ ಸರ್ಕಾರಿ ಬಸ್ ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ನೀಡಬೇಕು. ಅಂದಾಗ ಮಾತ್ರ ನಾನು ಇಲ್ಲಿಂದ ಏಳುತ್ತೇನೆ. ಇಲ್ಲದಿದ್ದರೆ ನನ್ನ ಮೇಲೆ ಬಸ್ ಹರಿಸಿಕೊಂಡು ಹೋಗಿ' ಎಂದು ಪಟ್ಟು ಹಿಡಿದ.

ಎದ್ದು ಬರುವಂತೆ ಚಾಲಕ, ನಿರ್ವಾಹಕ ಮತ್ತು ಪ್ರಯಾಣಿಕರು ಆತನ ಮನವೊಲಿಸಲು ನಡೆಸಿದ ಎಲ್ಲ ಯತ್ನಗಳೂ ವಿಫಲವಾದವು. ಕೊನೆಗೆ ಸಾರ್ವಜನಿಕರ ನೆರವಿನೊಂದಿಗೆ ಸಾರಿಗೆ ಸಿಬ್ಬಂದಿ ಆತನನ್ನು ಬಸ್ ಅಡಿಯಿಂದ ಹೊರಗೆಳೆದರು. ಆ ನಂತರವೂ ಸುಮ್ಮನಾಗದ ಆತ ತೂರಾಡುತ್ತ ರಸ್ತೆಯಲ್ಲಿ ಹೊರಟಿದ್ದ ಸಿಕ್ಕಸಿಕ್ಕ ವಾಹನಗಳ ಕೆಳಗೆ ಬೀಳಲುಯತ್ನಿಸಿದ. ಕೊನೆಗೆ ಸಾರ್ವಜನಿಕರು ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ ನಂತರ ಘಟನೆ ಸುಖಾಂತ್ಯಗೊಂಡಿತು.

ಈತನ ಹುಚ್ಚಾಟ ವೀಕ್ಷಿಸಲು ನೂರಾರು ಜನರು ಗುಂಪು ಸೇರಿದ್ದರಿಂದ ಬಸ್ ನಿಲ್ದಾಣದಲ್ಲಿ ಅರ್ಧ ತಾಸಿಗೂ ಹೆಚ್ಚು ಕಾಲ ವಾಹನ ಮತ್ತು ಜನ ದಟ್ಟಣೆ ಉಂಟಾಗಿತ್ತು. 'ಈ ಘಟನೆ ಬುಧವಾರ ನಡೆದಿರುವುದು ಹೌದು. ಕುಡಿದ ಮತ್ತಿನಲ್ಲಿ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡಿದ ವ್ಯಕ್ತಿಗೆ ಬುದ್ಧಿವಾದ ಹೇಳಿ ಬಿಟ್ಟು ಕಳಿಸಿದ್ದೇವೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬಸ್ ಚಕ್ರದಡಿ ಮಲಗಿರುವ ಮದ್ಯವ್ಯಸನಿ

ಸಮುದ್ರ ಪಾಲಾಗುತ್ತಿದ್ದ ಯುವಕನ ರಕ್ಷಣೆ

ಉಳ್ಳಾಲ (ದಕ್ಷಿಣ ಕನ್ನಡ): ಸಮುದ್ರದ ಅಲೆಗಳಿಗೆ ಸಿಲುಕಿ ಪ್ರಾಣಾಪಾಯದಲ್ಲಿದ್ದ ಯುವಕನನ್ನು ಮೊಗವೀರಪಟ್ನದ ಶಿವಾಜಿ ಜೀವರಕ್ಷಕ ದಳದ ಸದಸ್ಯರು ಗುರುವಾರ ರಕ್ಷಿಸಿದ್ದಾರೆ.

ಬಕ್ರೀದ್ ರಜೆ ನಿಮಿತ್ತ ಬೆಂಗಳೂರಿನ ಯಶವಂತಪುರದ ನಿವಾಸಿ ನಿಜಾಮ್ (35) ಸೇರಿ ಮೂವರು ಸ್ನೇಹಿತರು ದರ್ಗಾ ಭೇಟಿಗೆಂದು ಬಂದಿದ್ದರು. ಅಲ್ಲಿಂದ ಉಳ್ಳಾಲ ಬೀಚ್‌ಗೆ ತೆರಳಿದ್ದರು.

ಸಮುದ್ರದಲ್ಲಿ ಆಡುತ್ತಿದ್ದಾಗ ನಿಜಾಮ್ ಅಲೆಗಳ ನಡುವೆ ಸಿಲುಕಿ ಅಪಾಯದಲ್ಲಿದ್ದರು. ಸ್ಥಳದಲ್ಲಿದ್ದ ಶಿವಾಜಿ ಜೀವರಕ್ಷಕ ತಂಡದ ಸದಸ್ಯರಾದ ವಿಕ್ರಮ್ ಪುತ್ರನ್, ಶ್ರಾವಣ್, ದೀಕ್ಷಿತ್ ಬಂಗೇರ, ದೀಕ್ಷಿತ್ ಚಂದನ್, ನಿಶಾಂತ್, ರಕ್ಷಿತ್ ಬಂಗೇರ, ರವಿ ಕಾಂಚನ್, ಗೃಹರಕ್ಷಕ ಸಿಬ್ಬಂದಿ ಪ್ರಸಾದ್ ಸುವರ್ಣ ಸೇರಿ ನಿಜಾಮ್ ಅವರನ್ನು ರಕ್ಷಿಸಿದ್ದಾರೆ.

ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ
ಬೆಂ.ಮ.ಪ್ರ.ಪ್ರಾ.
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಆಲಿ ಅಸ್ಕರ್ ರಸ್ತೆ, ಬೆಂಗಳೂರು–560052.
ಸಂ.: GBBSCPA/13/e-PROCUREMENT/2023-24 ದಿನಾಂಕ:28.06.2023
ಪ್ರಕಟಣೆ
ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿ ಇ–ಹರಾಜು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: www.kppp.karnataka.gov.in ನಿಂದ ಪಡೆಯಬಹುದಾಗಿದೆ. (ಆಕ್ಷನ್ ನೋಟೀಸ್ ಸಂಖ್ಯೆ: TPA/2023-24/AUCTION5)
ಸಹಿ/– ಸದಸ್ಯ ಕಾರ್ಯದರ್ಶಿಗಳು
ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ, ಬೆಂಗಳೂರು.

ರಾಷ್ಟ್ರೀಯ ನಾಟಕ ಶಾಲೆ
(ಭಾರತ ಸರ್ಕಾರ, ಸಂಸ್ಕೃತಿ ಸಚಿವಾಲಯದ ಒಂದು ಸ್ವಾಯತ್ತ ಸಂಸ್ಥೆ)
MINISTRY OF CULTURE
ಬೆಂಗಳೂರು ಕೇಂದ್ರದಲ್ಲಿ ಗುತ್ತಿಗೆ ಆಧಾರದ ಮೇರೆಗೆ ಸಿಬ್ಬಂದಿ ನೇಮಕಾತಿ
ಕೆಳಕಂಡ ಹುದ್ದೆಗಳಿಗೆ ನಿರ್ದಿಷ್ಟ ನಮೂನೆಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಕ್ರ.ಸಂ.	ಹುದ್ದೆಯ ಹೆಸರು	ಸಂಖ್ಯೆ	ಕ್ರೋಢೀಕೃತ ವೇತನ
1.	ಪ್ರೋಗ್ರಾಮ್ ಕೋ–ಆರ್ಡಿನೇಟರ್	1	ಮಾಸಿಕ ರೂ. 38,500/–
2.	ಅಸಿಸ್ಟಂಟ್	1	ಮಾಸಿಕ ರೂ. 23,000/–

ಅರ್ಜಿ ಸಲ್ಲಿಸುವ ವಿಧಾನ
ಅಭ್ಯರ್ಥಿಗಳು http://recruitment.nsd.gov.in ವೆಬ್‌ಸೈಟ್ ಮುಖಾಂತರ ಆನ್‌ಲೈನ್ ವಿಧಾನದಲ್ಲಿ ಮಾತ್ರ ಅರ್ಜಿ ಸಲ್ಲಿಸುವುದು. ನೇಮಕಾತಿ ಕುರಿತ ವಿವರವಾದ ಮಾಹಿತಿ ಮತ್ತು ಆನ್‌ಲೈನ್ ಅರ್ಜಿಗಳನ್ನು ಭರ್ತಿ ಮಾಡುವ ಸೂಚನೆಗಳನ್ನು ಮೇಲ್ಕಂಡ ಯುಆರ್‌ಎಲ್'ನಲ್ಲಿ ಕಾಣಬಹುದು. ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 20.07.2023.
CBC 09130/12/0005/2324 ನಿರ್ದೇಶಕರು

ನೈಋತ್ಯ ರೈಲ್ವೆ G20
ಟೆಂಡರ್ ಸೂಚನೆ ಸಂ. 03 MYS 2023-24
ದಿನಾಂಕ: 26.06.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಸಿಂಗಲ್ ಲೈನ್‌ಗಾಗಿ ಮೈಕ್ರೊಪ್ರೊಸೆಸರ್ ಆಧಾರಿತ ಸ್ಟೇಷನ್ ಮಾಸ್ಟರ್ ಬ್ಲಾಕ್ ಪ್ಯಾನೆಲ್‌ನ ಪೂರೈಕೆ, ಸ್ಥಾಪನೆ, ಸಾರಿಗೆ, ಕಾರ್ಯಗತಗೊಳಿಸುವಿಕೆ ಮತ್ತು ಕಾರ್ಯಾರಂಭ. (ಟೆಂಡರ್ ಸಂಖ್ಯೆ. L9235179A)	ರೂ. 1,36,59,680/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24–07–2023, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಕ್ತಾಯ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ
ಹಿರಿಯ ವಿಭಾಗೀಯ ಸಾಮಗ್ರಿಗಳ ಪ್ರಬಂಧಕರು ಮೈಸೂರು
PUB/213/AAV/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20
ಟೆಂಡರ್ ಸೂಚನೆ ಸಂ. SBC-GSU-ENGG-2023-17
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಬಂಗಾರಪೇಟೆ – ಕೋಲಾರ ನಿಲ್ದಾಣದ ನಡುವೆ (ಟೈಪ್–II – 2 ಸಂಖ್ಯೆಗಳು ಮತ್ತು ಟೈಪ್–IV–2 ಸಂಖ್ಯೆಗಳ ಪುನರ್ನಿರ್ಮಾಣ ಸೇರಿದಂತೆ) 1x60ಮೀ ಬೋ ಸ್ಟ್ರಿಂಗ್ ಗಿರ್ಡರ್+4x20ಮೀ ಪಿಎಸ್‌ಸಿ ಸಾಲಿಡ್ ಸ್ಲ್ಯಾಬ್+5x20ಮೀ ಪಿಎಸ್‌ಸಿ ಗಿರ್ಡರ್ ನೊಂದಿಗೆ ಎಲ್‌ಸಿ ಸಂಖ್ಯೆ: 166 ರ ಬದಲಿಗೆ ಕಿಮೀ 147/785 ನಲ್ಲಿ ಆರ್‌ಒಬಿ ನಿರ್ಮಾಣ.	ರೂ. 25,16,83,130.81

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12–07–2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಖ್ಯ ಯೋಜನಾ ನಿರ್ದೇಶಕರು / ಗತಿ ಶಕ್ತಿ ಬೆಂಗಳೂರು
PUB/214/AAV/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20
ಇ–ಹರಾಜು ಪ್ರಕ್ರಿಯೆ: ಪಾರ್ಸೆಲ್ ಜಾಗದ ಗುತ್ತಿಗೆ, ಪಾರ್ಕಿಂಗ್ & ಹೊರ ವಲಯದ ಜಾಹೀರಾತು / ಪ್ರಕಟಣೆಗಳು
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ದಿನಾಂಕಗಳಂದು ಇ.ಹರಾಜು ಪ್ರಕ್ರಿಯೆಗಾಗಿ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ.
1) ಪಾರ್ಸೆಲ್ ಎಸ್‌ಎಲ್‌ಆರ್ & ವಿಪಿಹೆಚ್ ಗುತ್ತಿಗೆ: 03.07.2023, 10.07.2023, 17.07.2023 & 24.07.2023.
2) ಪಾರ್ಕಿಂಗ್, ಪೇ & ಯೂಜ್ ಗುತ್ತಿಗೆಗಳು: 10.07.2023, 11.07.2023 & 14.07.2023
3) ಜಾಹೀರಾತು ಮತ್ತು ಎಟಿಎಂ ಗುತ್ತಿಗೆಗಳು: 07.07.2023, 13.07.2023, 19.07.2023 21.07.2023, 25.07.2023, 28.07.2023 & 31.07.2023.
4) ಆಹಾರ ಸೇವೆಗಳು: 07.07.2023, 14.07.2023, 20.07.2023 & 27.07.2023
5) ವಿವಿದೋದ್ದೇಶ ಗುತ್ತಿಗೆಗಳು: 03.07.2023, 13.07. 2023, 18.07.2023 & 26.07.2023
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು
PUB/206/AAD/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20
ಟೆಂಡರ್ ಸೂಚನೆ ಸಂ. B/TRD.2023-24/04
ದಿನಾಂಕ: 26.06.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
[i] ಕಿಮೀ 21/500–800 ರಲ್ಲಿ ಶ್ರೀ ಸತ್ಯಸಾಯಿ ಪ್ರಶಾಂತಿ ನಿಲಯಂ – ಕೊತ್ತ ಚೆರುವು ನಿಲ್ದಾಣಗಳ ನಡುವೆ ಬಂಡೆಗಲ್ಲು ಬೀಳುವ ಸ್ಥಳಗಳಲ್ಲಿ ಸುರಂಗ ಬಲಪಡಿಸುವ ಕೆಲಸವನ್ನು ಪೂರೈಸಲು ಓಎಚ್‌ಇ ಗೆ ಮಾರ್ಪಾಡು. [ii] ಯಲಹಂಕ – ಚಿಕ್ಕಬಳ್ಳಾಪುರ – ಬಂಗಾರಪೇಟೆ ಮಾರ್ಗದ ವಿದ್ಯುದ್ದೀಕರಣಕ್ಕೆ ಸಂಬಂಧಿಸಿದಂತೆ ಬಂಗಾರಪೇಟೆಯಲ್ಲಿ ಕೋಲಾರ ಮಾರ್ಗಕ್ಕೆ ಫೀಡರ್ ಲೈನ್ ವ್ಯವಸ್ಥೆ ಮತ್ತು ಯಲಹಂಕದಿಂದ ಫೀಡರ್ ವ್ಯವಸ್ಥೆ ಒದಗಿಸುವುದು. [iii] ಬೆಂಗಳೂರು ವಿಭಾಗ – ವಂದೇ ಭಾರತ್ ಮಾದರಿಯ ರೈಲುಗಳ ನಿರ್ವಹಣೆಯ ಸಿದ್ಧತೆಗಾಗಿ ಬೆಂಗಳೂರು ಗ್ರಿಡ್ II ಪಿಟ್‌ಲೈನ್‌ಗಳು 4&5 ಮತ್ತು ಗ್ರಿಡ್ I ರ ಪಿಟ್‌ಲೈನ್ 3 ರಲ್ಲಿ ಸುರಕ್ಷತಾ ಸಾಧನಗಳೊಂದಿಗೆ ಓಎಚ್‌ಇ ವ್ಯವಸ್ಥೆಯನ್ನು ಒದಗಿಸುವುದು.	ರೂ. 2,08,54,417.65/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17–07–2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ / ಟಿಆರ್‌ಡಿ ಬೆಂಗಳೂರು
PUB/211/AAV/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20
ಟೆಂಡರ್ ಸೂಚನೆ ಸಂ. CN/04/2023
ದಿನಾಂಕ: 27.06.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ವಸ್ತುಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮುಖಾಂತರ ಮಾತ್ರ ಇ–ಟೆಂಡರ್ ಆಹ್ವಾನಿಸಿದ್ದಾರೆ.
ಸಂಕ್ಷಿಪ್ತ ವಿವರಣೆ: ನಿರಂತರ ಎರಕಹೊಯ್ದ ತಾಮ್ರದ ತಂತಿ ರಾಡ್ಗಳಿಂದ ಮಾಡಲ್ಪಟ್ಟ ಜಾಯಿಂಟ್ಲೆಸ್ ಗ್ರೂವ್ಡ್ ತಾಮ್ರದ ಸಂಪರ್ಕ ತಂತಿ 107 ಚದರ ಎಂಎಂ. ನಿರ್ದಿಷ್ಟತೆ ಸಂಖ್ಯೆ. TI/SPC/ OHE/CW/0971 ಇತ್ಯಾದಿ.
(ಟೆಂಡರ್ ಸಂಖ್ಯೆ: 95235300) (ಪ್ರಮಾಣ: 78.3 ಕಿಮೀ)
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14–07–2023, 14:00 ಗಂಟೆಯವರೆಗೆ
ಟೆಂಡರ್ ಸೂಚನೆ ಸಂಖ್ಯೆ CN/03/2023 ದಿನಾಂಕ: 15/06/2023 ಗೆ ತಿದ್ದುಪಡಿ (ಟಿ.ಸಂ. 95235280). ಮೇಲಿನ ಟೆಂಡರ್‌ಗೆ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು 04/07/2023 ರಿಂದ 12/07/2023 ರವರೆಗೆ ವಿಸ್ತರಿಸಲಾಗಿದೆ. ಗಮನಿಸಿ: I. ಆಯ್ಕೆಯ ಷರತ್ತು ಅನ್ವಯಿಸುತ್ತದೆ. II. ವಿಶೇಷ ಅರ್ಹತಾ ಮಾನದಂಡಗಳು ಕ್ರ ಸಂಖ್ಯೆ 4 ಅನ್ನು ಮಾರ್ಪಡಿಸಲಾಗಿದೆ.
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಖ್ಯ ಸಾಮಗ್ರಿಗಳ ಪ್ರಬಂಧಕರು / ನಿರ್ಮಾಣ ಬೆಂಗಳೂರು ಕಂಟೋನ್ಮೆಂಟ್
PUB/215/AAV/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ G20
ಟೆಂಡರ್ ಸೂಚನೆ ಸಂ. 16 UBL 2023-24
ದಿನಾಂಕ: 27.06.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಸಹಾಯಕ ವಿಭಾಗೀಯ ಎಂಜಿನಿಯರ್ / ವಿಜಯಪುರ ಕಾರ್ಯವ್ಯಾಪ್ತಿಯಲ್ಲಿ ಒಂದು ವರ್ಷದ ಅವಧಿಗೆ ಬಾದಾಮಿ – ಗುಳೇದಗುಡ್ಡ (ಅಪ್ & ಡೌನ್ ಲೈನ್‌ಗಳು) ಗುಳೇದಗುಡ್ಡ – ವಂಡಾಲ್ (ಎಸ್‌ಎಲ್ ಲೈನ್) ಮತ್ತು ವಂದಾಲ – ಹೊಟಗಿ (ಅಪ್ & ಡೌನ್ ಲೈನ್‌ಗಳು) ಗಳಲ್ಲಿ ಟ್ರ್ಯಾಕ್ ನಿರ್ವಹಣೆ.	ರೂ. 3,67,60,288/-
2	ಹುಬ್ಬಳ್ಳಿ ವಿಭಾಗ: ಲೋಂಡಾ ಜಂಕ್ಷನ್: ಖಾನಾಪುರ (ಹಳೆಯ ಲೈನ್) – ಥ್ರೂ ವೆಲ್ಡ್ ರಿನ್ಯೂಯಲ್–25.0 ಟಿಕೆಎಂ (ಕಿಮೀ 560/0–585/0).	ರೂ. 2,19,07,069/-
3	ಹುಬ್ಬಳ್ಳಿ ವಿಭಾಗ: ಸಹಾಯಕ ವಿಭಾಗೀಯ ಅಭಿಯಂತರರು / ಬಳ್ಳಾರಿ ವಿಭಾಗ: ಹೊಸಪೇಟೆ (ಸೇರಿದಂತೆ) ಇಂದ ಹದ್ದಿನಗುಂಡು (ಹೊರತುಪಡಿಸಿ), ತೋರಣಗಲ್ಲು (ಒಳಗೊಂಡಂತೆ) ಇಂದ ರಂಜಿತ್‌ಪುರ (ಒಳಗೊಂಡಂತೆ), ಬಳ್ಳಾರಿ (ಒಳಗೊಂಡಂತೆ) ಇಂದ ರಾಯದುರ್ಗ (ಒಳಗೊಂಡಂತೆ) ಇಂದ ಕದರಿದೇವರಪಲ್ಲಿ (ಒಳಗೊಂಡಂತೆ) (ವಲಯ–I).	ರೂ. 25,36,726/-
4	ಹುಬ್ಬಳ್ಳಿ ವಿಭಾಗ: ಸಹಾಯಕ ವಿಭಾಗೀಯ ಅಭಿಯಂತರರು / ಗದಗ ವಿಭಾಗ: ಗದಗ (ಸೇರಿದಂತೆ) ಇಂದ ಹೊಸಪೇಟೆಗೆ (ಹೊರತುಪಡಿಸಿ), ಹೊಸಪೇಟೆ (ಹೊರತುಪಡಿಸಿ) ಇಂದ ಕೊಟ್ಟೂರು (ಒಳಗೊಂಡಂತೆ), ವ್ಯಾಸ್ ಕಾಲೋನಿ (ಒಳಗೊಂಡಂತೆ) ಇಂದ ಸ್ವಾಮಿಹಳ್ಳಿ (ಸೇರಿದಂತೆ), ಗಿಣಿಗೇರಾ (ಒಳಗೊಂಡಂತೆ) ಇಂದ ಕಾರಟಗಿ (ಒಳಗೊಂಡಂತೆ) ವಲಯ– 2 .	ರೂ. 24,58,877/-
5	ಹುಬ್ಬಳ್ಳಿ ವಿಭಾಗ: ಹೊಸಪೇಟೆ– ಬಳ್ಳಾರಿ (ಅಪ್ & ಡೌನ್) – ಟಿಎಸ್ ಆರ್(ಪಿ)–8.200 ಟಿಕೆಎಂ.	ರೂ. 2,73,94,782/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24–07–2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಇಂಜಿನಿಯರ್/ಕೋ–ಆರ್ಡ್ ಹುಬ್ಬಳ್ಳಿ
PUB/216/AAV/PRB/SWR/2023-24
S.W.Railways SWRRLY SWRRLY

ಬೆಂಗಳೂರಿನ ಮೈಸೂರು ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಗುರುವಾರ ಮುಸ್ಲಿಂ ಬಾಂಧವರು ಪ್ರಾರ್ಥನೆ ಸಲ್ಲಿಸಿದರು – ಪ್ರಜಾವಾಣಿ ಚಿತ್ರಗಳು



ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದ ತಂದೆ– ಮಗಳು

ಭಕ್ತಿ ಭಾವದ ಬಕ್ರೀದ್ ಆಚರಣೆ: ಸಾಮೂಹಿಕ ಪ್ರಾರ್ಥನೆ

ಬೆಂಗಳೂರು: ತ್ಯಾಗ ಹಾಗೂ ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಮುಸ್ಲಿಮರು ನಗರದಲ್ಲಿ ಗುರುವಾರ ಶ್ರದ್ಧೆ ಹಾಗೂ ಭಕ್ತಿಯಿಂದ ಆಚರಿಸಿದರು.

ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು. ಧರ್ಮಗುರುಗಳು ಸಂದೇಶ ನೀಡಿದರು.

ಕಲಾಸಿಪಾಳ್ಯ, ಚಾಮರಾಜಪೇಟೆ, ಶಿವಾಜಿನಗರ, ಬಿ.ಟಿ.ಎಂ ಲೇಔಟ್, ಪಾದರಾಯನಪುರ, ಹೆಬ್ಬಾಳ, ಆರ್.ಟಿ. ನಗರ, ಶಾಂತಿನಗರ, ಮೈಸೂರು ರಸ್ತೆ, ಜಯನಗರ, ಲಾಲ್‌ಬಾಗ್ ರಸ್ತೆ, ಮಾಗಡಿ ರಸ್ತೆ, ಕಮ್ಮ ಗೊಂಡನಹಳ್ಳಿ ಸೇರಿದಂತೆ ನಗರದ ವಿವಿಧೆಡೆಯ ಪ್ರಮುಖ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಲಾಯಿತು.

ಮಸೀದಿಗಳ ಎದುರು ಗುಲಾಬಿ ಹೂವಿನ ಮಾರಾಟದ ವ್ಯವಸ್ಥೆಯಿತ್ತು. ಪುಟ್ಟ ಮಕ್ಕಳು, ದೊಡ್ಡವರು ಹೊಸಬಟ್ಟೆ, ಟೋಪಿಯೊಂದಿಗೆ ಕಂಗೊಳಿಸಿದರು. ಮಕ್ಕಳು ಪರಸ್ಪರ ಆಲಿಂಗಿಸಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು. ಸಮಾಜದ ಬಡವರಿಗೆ ದಾನ ನೀಡಲಾಯಿತು.

ಹೊಸ ಬಟ್ಟೆ ತೊಟ್ಟು ಶುಭ ಕೋರಿದರು. ಈ ಹಬ್ಬ ತ್ಯಾಗದ ಪ್ರತೀಕವಾಗಿದ್ದು, ಕುರಿ ಬಲಿ ನೀಡಲಾಯಿತು. ನೆರೆ ಹೊರೆಯವರು, ಬಡವರಿಗೆ ತಮ್ಮ ಶಕ್ತಿಗೆ ಅನುಸಾರವಾಗಿ ಮಾಂಸ ದಾನ ಮಾಡಿದರು. ಹಬ್ಬದೂಟ ಮಾಡಿ ಸಂಬಂಧಿಕರ ಜೊತೆಗೆ, ಸ್ನೇಹಿತರ ಜೊತೆಗೆ ಹಂಚಿಕೊಂಡರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಹಿತ ಅನೇಕ ಸಚಿವರು, ಶಾಸಕರು ಶುಭ ಹಾರೈಸಿದರು.

‘ದ್ವೇಷ ಹುಟ್ಟುಹಾಕುವ ಶಕ್ತಿಗಳಿಗೆ ಮಹತ್ವ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿವಿಧ ಧರ್ಮ, ಜಾತಿಗೆ ಸೇರಿದ್ದರೂ ನಾವೆಲ್ಲರೂ ಮನುಷ್ಯರು. ಎಲ್ಲರೂ ಪರಸ್ಪರ ಪ್ರೀತಿ, ವಿಶ್ವಾಸದಿಂದ ಬದುಕಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರೆ ನೀಡಿದರು.

ಬಕ್ರೀದ್ ಹಬ್ಬದ ಅಂಗವಾಗಿ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಗುರುವಾರ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ನಮ್ಮ ನಮ್ಮಲ್ಲೇ ದ್ವೇಷ ಹುಟ್ಟುಹಾಕುವ ಅನೇಕ ಶಕ್ತಿಗಳಿವೆ. ಆ ಶಕ್ತಿಗಳು ಉದ್ದೇಶ ಪೂರ್ವಕವಾಗಿಯೇ ಅದನ್ನು ಮಾಡುತ್ತವೆ. ಅದಕ್ಕೆ ಸೊಪ್ಪು ಹಾಕುವುದಾಗಲಿ, ಮಹತ್ವ ನೀಡುವುದಾಗಲಿ ಮಾಡಬಾರದು’ ಎಂದರು.

ಬಕ್ರಿದ್ ಅಂಗವಾಗಿ ಬೆಂಗಳೂರಿನಲ್ಲಿ ನಡೆದ ಪ್ರಾರ್ಥನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಜಮೀರ್ ಅಹಮದ್ ಖಾನ್ ಭಾಗವಹಿಸಿದ್ದರು

‘ಮನುಷ್ಯರು ಪ್ರೀತಿ, ವಿಶ್ವಾಸದಿಂದ ಮನುಷ್ಯರಂತೆ ಬದುಕುವ ವಾತಾವರಣ ನಿರ್ಮಿಸಬೇಕಿದೆ. ರಾಜ್ಯದ ಅಭಿವೃದ್ಧಿಯ ಜೊತೆಗೆ ಜನತೆಯೂ ಅಭಿವೃದ್ಧಿ ಆಗಬೇಕು. ದೇವರು ಎಲ್ಲರಿಗೂ ಸದ್ಬುದ್ಧಿ ನೀಡಿ ಮನುಷ್ಯರಾಗಿ ಬಾಳುವ ಗುಣವನ್ನು ನೀಡಲಿ’ ಎಂದರು.

ತ್ಯಾಗದ ಸಂಕೇತ: ‘ಬಕ್ರೀದ್ ಹಬ್ಬ ತ್ಯಾಗದ ಸಂಕೇತ. ಮನುಕುಲಕ್ಕೆ ಒಳ್ಳೆಯದಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇನೆ’ ಎಂದೂ ಹೇಳಿದರು.

ನಜೀರ್ ನಿವಾಸದಲ್ಲಿ ಭೋಜನ ಸವಿದ ಸಿ.ಎಂ

ಬಕ್ರೀದ್ ಹಬ್ಬದ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿದ ಬಳಿಕ ಶಿವಾನಂದ ವೃತ್ತದ ಬಳಿಯ ಜನಾರ್ದನ ಹೋಟೆಲ್‌ನಲ್ಲಿ ಸಿದ್ದರಾಮಯ್ಯ ಅವರು ಬೆಳಿಗ್ಗೆ ಉಪಾಹಾರ ಸೇವಿಸಿದರು. ಈ ಸಂದರ್ಭದಲ್ಲಿ ಸಚಿವರಾದ ಜಮೀರ್ ಅಹ್ಮದ್ ಖಾನ್, ಬೈರತಿ ಸುರೇಶ್, ಮಾಜಿ ಸಚಿವ ಪಿ.ಟಿ. ಪರಮೇಶ್ವರ ನಾಯ್ಕ್ ಜತೆಯಲ್ಲಿದ್ದರು.

ಮಧ್ಯಾಹ್ನ ತಮ್ಮ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್ ಅವರ ಸದಾಶಿವನಗರದ ನಿವಾಸಕ್ಕೆ ತೆರಳಿದ ಸಿದ್ದರಾಮಯ್ಯ ಅಲ್ಲಿ ಭೋಜನ ಸವಿದರು. ಸಚಿವರಾದ ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಶಾಸಕರಾದ ಪಿ.ಎಂ.ನರೇಂದ್ರ ಸ್ವಾಮಿ, ಡಾ.ಅಜಯ್ ಸಿಂಗ್, ಮಾಜಿ ಸಚಿವರಾದ ಎಂ.ಆರ್. ಸೀತಾರಾಂ, ಮಾಜಿ ಶಾಸಕ ಎಚ್.ಪಿ. ಮಂಜುನಾಥ್ ಇದ್ದರು.

ಸುದ್ದಿ 2 ನಿಮಿಷ

ಬಿಎಂಆರ್‌ಸಿಎಲ್, ಎನ್‌ಸಿಸಿ ಅಧಿಕಾರಿಗಳ ವಿರುದ್ಧ ಆರೋಪ ಪಟ್ಟಿ

ಬೆಂಗಳೂರು: ಹೆಣ್ಣೂರು ಕ್ರಾಸ್ ಬಳಿ ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು ಉರುಳಿಬಿದ್ದು ತಾಯಿ–ಮಗು ಮೃತಪಟ್ಟಿದ್ದ ಪ್ರಕರಣದಲ್ಲಿ ಬಿಎಂಆರ್‌ಸಿಎಲ್ ಹಾಗೂ ಎನ್‌ಸಿಸಿ ಅಧಿಕಾರಿಗಳ ವಿರುದ್ಧ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ.

ಜ. 10ರಂದು ನಡೆದಿದ್ದ ಘಟನೆಯಲ್ಲಿ ತೇಜಸ್ವಿನಿ ಸುಲಾಖೆ (28) ಹಾಗೂ ಎರಡೂವರೆ ವರ್ಷದ ಮಗ ವಿಹಾನ್ ಮೃತಪಟ್ಟಿದ್ದರು. ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಗೋವಿಂದಪುರ ಠಾಣೆ ಪೊಲೀಸರು ಬುಧವಾರ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದಾರೆ.

‘ಬಿಎಂಆರ್‌ಸಿಎಲ್ ಮುಖ್ಯ ಎಂಜಿನಿಯರ್ ಸಿ.ಎಂ. ರಂಗನಾಥ್, ಉಪ ಮುಖ್ಯ ಎಂಜಿನಿಯರ್ ಡಿ. ವೆಂಕಟೇಶ್ ಶೆಟ್ಟಿ, ಕಾರ್ಯ ನಿರ್ವಾಹಕ ಮುಖ್ಯ ಎಂಜಿನಿಯರ್ ಮಹೇಶ್, ಸೆಕ್ಷನ್ ಎಂಜಿನಿಯರ್ ಜಾಫರ್ ಸಾದಿಕ್, ಸಹಾಯಕ ಎಂಜಿನಿಯರ್ ಜೀವನ್‌ಕುಮಾರ್ ಹಾಗೂ ನಾಗಾರ್ಜುನ್ ಕನ್‌ಸ್ಟ್ರಕ್ಷನ್‌ನ (ಎನ್‌ಸಿಸಿ) ಯೋಜನಾ ವ್ಯವಸ್ಥಾಪಕ ವಿಕಾಸ್‌ಕುಮಾರ್ ಸಿಂಗ್, ಹಿರಿಯ ಯೋಜನಾ ವ್ಯವಸ್ಥಾಪಕ ಎ. ಮಾತಯ್ಯ, ಸಹಾಯಕ ಎಂಜಿನಿಯರ್ ಪ್ರಭಾಕರ್ ಮಾಳಿ, ಸುರಕ್ಷತಾ ಮೇಲ್ವಿಚಾರಕ ಭರತೇಶ್ ಸತ್ತಿಗೇರಿ ಹಾಗೂ ಮೇಲ್ವಿಚಾರಕ ಕೆ. ಲಕ್ಷ್ಮಿಪತಿ ರಾಜು ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಅಧಿಕಾರಿಗಳ ನಿರ್ಲಕ್ಷ್ಯದಿಂದ ಘಟನೆ ನಡೆದಿದೆ. ಇದಕ್ಕೆ ಸಂಬಂಧಪಟ್ಟಂತೆ ಪುರಾವೆಗಳನ್ನು ಸಂಗ್ರಹಿಸಿ, ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ’ ಎಂದರು.

ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ಭರವಸೆ

ಬೆಂಗಳೂರು: ‘ಜುಲೈ 3ರಿಂದ ಆರಂಭವಾಗಲಿರುವ ವಿಧಾನ ಮಂಡಲ ಅಧಿವೇಶನದಲ್ಲಿ ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ’ ಎಂದು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ತಿಳಿಸಿದ್ದಾರೆ.

ಸಂಘದ ಪದಾಧಿಕಾರಿಗಳ ನಿಯೋಗದ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಿದ ವಿವೇಕ್ ಸುಬ್ಬಾರೆಡ್ಡಿ ಅವರು ವಿವಿಧ ಬೇಡಿಕೆಗಳ ಮನವಿಯನ್ನು ಮುಖ್ಯಮಂತ್ರಿಗೆ ಸಲ್ಲಿಸಿದರು.

‘ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ಸಂಬಂಧಿಸಿದ ಮನವಿಯನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್. ಕೆ. ಪಾಟೀಲ್ ಅವರಿಗೂ ನೀಡುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆದ ವಿರಾಜಪೇಟೆ ಕ್ಷೇತ್ರದ ಶಾಸಕ ಹಾಗೂ ಹಿರಿಯ ವಕೀಲ ಎ. ಎಸ್. ಪೊನ್ನಣ್ಣ ಅವರನ್ನು ಭೇಟಿ ಮಾಡಿ, ಅವರ ಮೂಲಕವೂ ಸರ್ಕಾರದ ಮೇಲೆ ಒತ್ತಡ ತರಲಾಗುವುದು’ ಎಂದು ವಿವೇಕ್ ಸುಬ್ಬಾರೆಡ್ಡಿ ತಿಳಿಸಿದರು.

ನಿಯೋಗದಲ್ಲಿ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಟಿ. ಜಿ. ರವಿ, ಖಜಾಂಚಿ ಎಂ. ಟಿ. ಹರೀಶ್, ಹೈಕೋರ್ಟ್ ವಕೀಲ ಸೂರ್ಯ ಮುಕುಂದರಾಜ್, ಪ್ರವೀಣ್ ಇದ್ದರು.

ಕೊಳೆಗೇರಿ ಕುಟುಂಬಗಳಿಗೆ ಶಾಶ್ವತ ನೆಲೆ: ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಳೆಗೇರಿಗಳಲ್ಲಿ ವಾಸಿಸುವ ಮೂರು ಸಾವಿರ ಕುಟುಂಬಗಳಿಗೆ ಶಾಶ್ವತ ವಸತಿ ಕಲ್ಪಿಸಲು ಯೋಜನೆ ರೂಪಿಸಲಾಗುವುದು ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ಕೊಳೆಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಗುರುವಾರ ಕೊಳೆಗೇರಿ ವಾಸಿಗಳು, ಕೊಳೆಗೇರಿ ನಿವಾಸಿಗಳ ಪರವಾದ ಸಂಘ- ಸಂಸ್ಥೆಗಳಿಂದ ಅಹವಾಲು ಸ್ವೀಕರಿಸಿದ ನಂತರ ಅವರು ಮಾತನಾಡಿದರು.

ಘೋಷಿತ ಕೊಳೆಗೇರಿ ಪ್ರದೇಶಗಳಲ್ಲಿ ವಾಸವಿದ್ದರೂ, ಹಲವು ಜನರಿಗೆ ಸೂರಿಲ್ಲ. ಹತ್ತಾರು ವರ್ಷಗಳಿಂದ ಗುಡಿಸಲು ಹಾಗೂ ಕಚ್ಚಾ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಕೆರೆಯಂಗಳ, ಮಳೆ ನೀರು ಹರಿಯುವ ಕಾಲುವೆ, ವಿದ್ಯುತ್ ಮಾರ್ಗ, ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಮನೆ ಕಟ್ಟಿಕೊಡಲು ಸಾಧ್ಯವಾಗಿಲ್ಲ. ಹಾಗಾಗಿ, ಅವರಿಗೆಲ್ಲ ಪ್ರತ್ಯೇಕ ಸ್ಥಳದಲ್ಲಿ ಶಾಶ್ವತ ನೆಲೆ ಕಲ್ಪಿಸಲಾಗುವುದು ಎಂದರು.

ಕೆ.ಆರ್.ಪುರ ಹೋಬಳಿ ಬಿದರಹಳ್ಳಿಯಲ್ಲಿ ಎಂಟು ಎಕರೆ ಗುರುತಿಸಲಾಗಿದೆ. ಕಂದಾಯ ಸಚಿವರ ಜತೆ ಚರ್ಚಿಸಿ, ಭೂಮಿ ಪಡೆದು ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ ವಸತಿ ಸಮುಚ್ಚಯ ನಿರ್ಮಿಸಲಾಗುವುದು. ಕಾಚರಕನಹಳ್ಳಿ ಕೆರೆ ವ್ಯಾಪ್ತಿ, ಗೋವಿಂದರಾಜನಗರದ ವಿನಾಯಕ ಬಡಾವಣೆ, ಉತ್ತರಹಳ್ಳಿಯ ರಸ್ತೆಯ ಕೊಡಿಪಾಳ್ಯ, ದೊಡ್ಡ ಆಲದಮರ ಸಮೀಪದ ಭೀಮನಕುಪ್ಪೆ, ದಾಸರಹಳ್ಳಿ, ಮಹಾಲಕ್ಷ್ಮಿ ಲೇಔಟ್, ಬ್ಯಾಟರಾಯನಪುರ ಭಾಗದ ಕೊಳೆಗೇರಿಗಳ ಕುಟುಂಬಗಳನ್ನು ಸ್ಥಳಾಂತರಿಸಲಾಗುವುದು ಎಂದು ಮಾಹಿತಿ ನೀಡಿದರು.

ಕೊಳೆಗೇರಿ ಅಭಿವೃದ್ಧಿ ಮಂಡಳಿ ಆಯುಕ್ತ ವೆಂಕಟೇಶ್, ಪ್ರಧಾನ ಎಂಜಿನಿಯರ್ ಬಾಲರಾಜು ಉಪಸ್ಥಿತರಿದ್ದರು.

ಅಂಡಾಶಯದಲ್ಲಿ ಗೆಡ್ಡೆ: ಶಸ್ತ್ರಚಿಕಿತ್ಸೆ ಯಶಸ್ವಿ

ಡಾ. ಝಾನ್ಸಿ

ಬೆಂಗಳೂರು: ಯುವತಿಯ ಅಂಡಾಶಯದಲ್ಲಿ ಬೆಳೆದಿದ್ದ ಗೆಡ್ಡೆಯನ್ನು ಗರ್ಭಕೋಶಕ್ಕೆ ತೊಂದರೆಯಾಗದಂತೆ ಕಿಂಡರ್ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆ ಮಾಡಿ ತೆಗೆದಿದ್ದಾರೆ.

ಕಿಬ್ಬೊಟ್ಟೆ ನೋವಿನಿಂದ ಬಳಲುತ್ತಿದ್ದ 25 ವರ್ಷದ ಯುವತಿ ಆಸ್ಪತ್ರೆಗೆ ಬಂದಿದ್ದರು. ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ ಡಾ. ಝಾನ್ಸಿ ಲಕ್ಷ್ಮೀ ಪೆದ್ದಿ ನೇತೃತ್ವದ ತಂಡವು ಪರೀಕ್ಷೆ ನಡೆಸಿದಾಗ ಹೊಕ್ಕಳಿನಿಂದ ಎದೆಯ ಮಧ್ಯದವರೆಗೆ ಹೊಟ್ಟೆಯೊಳಗೆ ಗೆಡ್ಡೆ ಇರುವುದು ಕಂಡು ಬಂದಿತ್ತು. ಅಂಡಾಶಯದಲ್ಲಿಯೂ ಗೆಡ್ಡೆ ಇರುವುದು ಅಲ್ಟ್ರಾಸೌಂಡ್ ಸಹಿತ ಹೆಚ್ಚಿನ ಪರೀಕ್ಷೆಯಲ್ಲಿ ಕಂಡು ಬಂದಿತ್ತು.

‘ಶಸ್ತ್ರ ಚಿಕಿತ್ಸೆ ಮೂಲಕ ಗೆಡ್ಡೆ ತೆಗೆಯಲಾಗಿದೆ 4 ವಾರಗಳಲ್ಲಿ ಚಿಕಿತ್ಸಾ ವಿಧಾನ ಪೂರ್ಣಗೊಂಡಿತು. ಕೀಮೋಥೆರಪಿ ಅವಧಿಗಳನ್ನು ಪೂರ್ಣಗೊಳಿಸಿದ ನಂತರ,ಅವಳು ನೈಸರ್ಗಿಕವಾಗಿ ಗರ್ಭಿಣಿಯಾಗಲು ಅವಕಾಶ ಇದೆ. ಇಲ್ಲದೇ ಇದ್ದರೆ ಬೇರೆ ವೈಜ್ಞಾನಿಕ ರೀತಿಯಲ್ಲಿ ಮಗು ಪಡೆಯಬಹುದು’ ಎಂದು ಡಾ. ಝಾನ್ಸಿ ಹೇಳಿದ್ದಾರೆ.

ಎಕ್ಸ್‌ಪ್ರೆಸ್ ವೇ: ನಿರ್ಬಂಧ ಸದ್ಯಕ್ಕಿಲ್ಲ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಹೆಚ್ಚುತ್ತಿರುವ ಅಪಘಾತ ತಡೆಯುವ ನಿಟ್ಟಿನಲ್ಲಿ ಈ ಹೆದ್ದಾರಿಯಲ್ಲಿ ದ್ವಿಚಕ್ರ, ತ್ರಿಚಕ್ರ ವಾಹನ, ಟ್ರ್ಯಾಕ್ಟರ್ ಸೇರಿದಂತೆ ಕೃಷಿ ಬಳಕೆ ವಾಹನಗಳ ಸಂಚಾರ ನಿರ್ಬಂಧಿಸುವ ಚಿಂತನೆ ಇನ್ನೂ ಪರಿಶೀಲನೆ ಹಂತದಲ್ಲಿದ್ದು, ಅಂತಿಮ ತೀರ್ಮಾನವಾಗಿಲ್ಲ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸ್ಪಷ್ಟಪಡಿಸಿದೆ.

ಎಕ್ಸ್‌ಪ್ರೆಸ್ ವೇನಲ್ಲಿ ದ್ವಿಚಕ್ರ, ತ್ರಿಚಕ್ರ ವಾಹನ ಸಂಚಾರ ನಿರ್ಬಂಧಿಸಲಾಗಿದೆ ಎಂದು ಹರಿದಾಡುತ್ತಿರುವ ಸುದ್ದಿ ನಿಜವಲ್ಲ ಎಂದು ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಯೋಜನಾ ನಿರ್ದೇಶಕ ರಾಹುಲ್ ಗುಪ್ತಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಅಪಘಾತ ನಿಯಂತ್ರಣ ಮತ್ತು ಸುಗಮ ಸಂಚಾರ ದೃಷ್ಟಿಯಿಂದ ಎಕ್ಸ್‌ಪ್ರೆಸ್ ವೇನಲ್ಲಿ ದ್ವಿಚಕ್ರ, ತ್ರಿಚಕ್ರ ವಾಹನ ಹಾಗೂ ಟ್ರ್ಯಾಕ್ಟರ್ ಸೇರಿದಂತೆ ಕೃಷಿ ಬಳಕೆ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಬೇಕು ಎಂಬ ಪ್ರಸ್ತಾವವನ್ನು ಈ ಹಿಂದೆಯೇ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ಸಲ್ಲಿಸಲಾಗಿದೆ’ ಎಂದು ಸ್ಪಷ್ಟಪಡಿಸಿದರು.

‘ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ಸಂಖ್ಯೆ ಹೆಚ್ಚಳವಾದ ಕಾರಣ ಈ ಪ್ರಸ್ತಾವವನ್ನು ಸಚಿವಾಲಯ ಗಂಭೀರವಾಗಿ ಪರಿಶೀಲಿಸುತ್ತಿದೆ. ಆದರೆ, ಇದುವರೆಗೂ ಈ ಕುರಿತು ಕೇಂದ್ರದಿಂದ ಯಾವುದೇ ಆದೇಶ ಬಂದಿಲ್ಲ’ ಎಂದು ತಿಳಿಸಿದರು.

ಬೆಂಗಳೂರು ಮತ್ತು ಮೈಸೂರು ನಡುವೆ ಸಂಪರ್ಕ ಕಲ್ಪಿಸುವ 119 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್ ವೇ ವಾಹನಗಳ ಸಂಚಾರಕ್ಕೆ ಮುಕ್ತವಾದ ಬಳಿಕ ಇಲ್ಲಿಯವರೆಗೆ 600ಕ್ಕೂ ಹೆಚ್ಚು ಅಪಘಾತ ಸಂಭವಿಸಿವೆ. ಸುಮಾರು 165 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

‘ಬಸವ ಸೇವಾರತ್ನ’ ಪ್ರಶಸ್ತಿ

ವಿಮಾನ ಕಾರ್ಖಾನೆ ಬಸವ ಸೇವಾ ಸಮಿತಿ ನಗರದಲ್ಲಿ ಗುರುವಾರ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಇಸ್ರೊ ನಿವೃತ್ತ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಅವರಿಗೆ ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ‘ಬಸವ ಸೇವಾರತ್ನ’ ಪ್ರಶಸ್ತಿ ಪ್ರದಾನ ಮಾಡಿದರು. ಸಾಹಿತಿ ಮಹೇಶ್ ಚಟ್ನಲ್ಲಿ, ಸೇವಾ ಸಮಿತಿ ಅಧ್ಯಕ್ಷ ಬೇಲೂರಪ್ಪ ಒ., ಉಪಾಧ್ಯಕ್ಷ ಧರಣಿಕುಮಾರ್ ಎನ್., ಸಿ.ಎ. ನೀರಲಗಿ, ಮಹೇಶ್ ಅಂಗಡಿ, ಪದಾಧಿಕಾರಿಗಳು ಇದ್ದರು. –ಪ್ರಜಾವಾಣಿ ಚಿತ್ರ

‘ಅಕ್ಕರದ ಸುಯಿಧಾನ’ ಕೃತಿಗೆ ಅಕ್ಕ ಪ್ರಶಸ್ತಿ

ಹುಬ್ಬಳ್ಳಿ: ಗಂಗಮ್ಮ ಸೋಮಪ್ಪ ಬೊಮ್ಮಾಯಿ ಎಜುಕೇಶನಲ್ ಮತ್ತು ವೆಲ್‌ಫೇರ್ ಫೌಂಡೇಶನ್ 2020–22ನೇ ಸಾಲಿನಲ್ಲಿ ಅತ್ಯುತ್ತಮ ಸಾಹಿತ್ಯ ಕೃತಿಗಳಿಗೆ ನೀಡುವ ಪ್ರಶಸ್ತಿಗೆ ಮೂರು ಕೃತಿಗಳು ಆಯ್ಕೆಯಾಗಿವೆ. ಡಾ. ಹೇಮಾ ಪಟ್ಟಣಶೆಟ್ಟಿ ಅವರ ‘ಅಕ್ಕರದ ಸುಯಿಧಾನ’ ಕೃತಿಗೆ ಅಕ್ಕ ಪ್ರಶಸ್ತಿ, ಹೊರೆಯಾಲ ದೊರೆಸ್ವಾಮಿ ಅವರ ‘ಜಾನಪದ ನಡೆನುಡಿ’ ಕೃತಿಗೆ ಜನಪದ ಸಿರಿ ಪ್ರಶಸ್ತಿ, ನೇಹಾ ರಾಮಾಪುರ ಅವರ ‘ಮ್ಯಾಜಿಕ್ ಪೆನ್ಸಿಲ್’ ಕೃತಿಗೆ ‘ಅರಳುಮೊಗ್ಗು’ ಪ್ರಶಸ್ತಿ ಲಭಿಸಿದೆ. ತಲಾ ₹ 25 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ ಎಂದು ಶಾಸಕ ಬಸವರಾಜ ಬೊಮ್ಮಾಯಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಾರಿಗೆ ಸ್ಕೂಟರ್ ಡಿಕ್ಕಿ: ಇಬ್ಬರ ಸಾವು

ರಾಮನಗರ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಬುಧವಾರ ರಾತ್ರಿ ಬಿಡದಿ ಸಮೀಪದ ಕೆಂಪನಹಳ್ಳಿ ಗೇಟ್ ಸಮೀಪ ಕೆಟ್ಟು ನಿಂತಿದ್ದ ಲಾರಿಗೆ ಹಿಂದಿನಿಂದ ಸ್ಕೂಟರ್ ಡಿಕ್ಕಿ ಹೊಡೆದಿದ್ದರಿಂದ ಇಬ್ಬರು ಮೃತಪಟ್ಟಿದ್ದಾರೆ.

ಬೆಂಗಳೂರಿನ ಬಾಪೂಜಿ ನಗರದ ನಿವಾಸಿಗಳಾದ ಸನಾವುಲ್ಲಾ ಬೇಗ್ (65) ಹಾಗೂ ನೂರ್‌ಜಹಾನ್ ಬೇಗಂ (61) ಮೃತರು ಎಂದು ಬಿಡದಿ ಠಾಣೆ ಪೊಲೀಸರು ತಿಳಿಸಿದರು.

‘ಬೋಲಾಸ್’ ಮಳಿಗೆ ಆರಂಭ

ಬೆಂಗಳೂರು: ಬೋಲಾಸ್ ಅಗ್ರೋ ಪ್ರೈವೇಟ್ ಲಿಮಿಟೆಡ್ ಕಂಪನಿ ತನ್ನ 20 ನೂತನ ಮಳಿಗೆಗಳನ್ನು ನಗರದಲ್ಲಿ ಆರಂಭಿಸಿದೆ.

ಪೈ ಗ್ರೂಪ್ ಆಫ್ ಹೋಟೆಲ್ ಅಧ್ಯಕ್ಷ ಜಗನ್ನಾಥ್ ವಿ. ಪೈ ಅವರು ಜಯನಗರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಮಳಿಗೆಗಳಿಗೆ ಚಾಲನೆ ನೀಡಿದರು.

ಮತ್ತಿಕೆರೆ, ವಿದ್ಯಾರಣ್ಯಪುರ, ನೆಲಮಂಗಲ, ಬನ್ನೇರುಘಟ್ಟ, ಬಸವೇಶ್ವರ ನಗರ, ಮಲ್ಲೇಶ್ವರ, ವಿಜಯನಗರ, ಟಿಸಿ ಪಾಳ್ಯ, ಗಾಂಧಿ ಬಜಾರ್, ಬಾಣಸವಾಡಿ, ಬನಶಂಕರಿ, ಉತ್ತರಹಳ್ಳಿ, ಜಯನಗರ, ವಿಲ್ಸನ್‌ಗಾರ್ಡನ್, ಆರ್.ಟಿ. ನಗರ, ಎಚ್‌ಎಸ್‌ಆರ್ ಲೇಔಟ್, ನ್ಯೂ ತಿಪ್ಪಸಂದ್ರ, ಸರ್ಜಾಪುರ ರಸ್ತೆ, ಹರಳೂರುಗಳಲ್ಲಿ ಮಳಿಗೆ ತೆರೆಯಲಾಗಿದೆ

ಲಿಮಿಟೆಡ್‌ನ ನಿರ್ದೇಶಕ ಬೋಲಾ ರಾಹುಲ್ ಮಾತನಾಡಿ, ‘ಗೋಡಂಬಿ, ದ್ರಾಕ್ಷಿ, ಬಾದಾಮಿ ಮುಂತಾದ ಡ್ರೈ ಫ್ರೂಟ್‌ಗಳು ವಿಲಾಸಿ ವಸ್ತುಗಳು ಎನ್ನುವ ಗ್ರಾಹಕರ ಗ್ರಹಿಕೆಯನ್ನು ಬದಲಾಯಿಸುವುದು ನಮ್ಮ ಗುರಿಯಾಗಿದೆ’ ಎಂದು ತಿಳಿಸಿದ್ದಾರೆ.

ಮಾಹಿತಿಗೆ: https://bolas.co.in/dry-fruits

ನಗರದಲ್ಲಿ ಇಂದು

‘ಹ್ಯಾಕ್ ಫೆಸ್ಟ್’: ಮುಖ್ಯ ಅತಿಥಿ: ಎಸ್. ಕ್ರಿಸ್ಟೋಫರ್, ಆಯೋಜನೆ: ಬೆಂಗಳೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸ್ಥಳ: ಕುವೆಂಪು ಕಲಾಕ್ಷೇತ್ರ, ಕೆ.ಆರ್. ರಸ್ತೆ, ಬೆಳಿಗ್ಗೆ 8

ಅಂತರರಾಷ್ಟ್ರೀಯ ಸಮ್ಮೇಳನ: ‘ವಾಣಿಜ್ಯ ಮತ್ತು ನಿರ್ವಹಣೆ ವಿಭಾಗದಲ್ಲಿ ಪ್ರಸ್ತುತ ವಿದ್ಯಮಾನ’: ಮುಖ್ಯ ಅತಿಥಿ: ಹನಾ ಒಂಡೆರ್ಕೋವಾ, ಗೌರವ ಅತಿಥಿ: ಎ.ಸಿ.ಎನ್. ಮೂರ್ತಿ, ಮುಖ್ಯ ಭಾಷಣಕಾರ: ಎನ್.ಆರ್. ಭಾನುಮೂರ್ತಿ, ಅಧ್ಯಕ್ಷತೆ: ಕ್ಸೇವಿಯಲ್ ಅಲೆಕ್ಸಾಂಡರ್, ಆಯೋಜನೆ ಹಾಗೂ ಸ್ಥಳ: ಸೇಂಟ್ ಫ್ರಾನ್ಸಿಸ್ ಕಾಲೇಜ್, ಕೋರಮಂಗಲ, ಬೆಳಿಗ್ಗೆ 10

ಎಸ್.ವಿ. ನಾರಾಯಣಸ್ವಾಮಿ ರಾವ್ ಮೆಮೋರಿಯಲ್ ಹಾಲ್ ಉದ್ಘಾಟನೆ ಹಾಗೂ ‘ನಿಸ್ವಾರ್ಥ ಬದುಕಿನ ಶ್ರೀರಾಮಭಕ್ತ’ ಪುಸ್ತಕ ಬಿಡುಗಡೆ: ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಮುಖ್ಯ ಅತಿಥಿಗಳು: ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಕೆ.ಸಿ. ರಾಮಮೂರ್ತಿ, ಎಸ್. ಟಿ. ಸೋಮಶೇಖರ್, ಆಯೋಜನೆ: ಶ್ರೀ ರಾಮಸೇವಾ ಮಂಡಳಿ ಟ್ರಸ್ಟ್, ಸ್ಥಳ: ಎಸ್.ವಿ ನಾರಾಯಣಸ್ವಾಮಿ ರಾವ್ ಮೆಮೋರಿಯಲ್ ಹಾಲ್, ನೆಟ್ಟಿಗೆರೆ ಗ್ರಾಮ, ಸೋಮನಹಳ್ಳಿ, ಕನಕಪುರ ರಸ್ತೆ, ಬೆಳಿಗ್ಗೆ 11.30

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ವಿಶ್ವ ಎಂಎಸ್‌ಎಂಇ ದಿನ: ಮುಖ್ಯ ಅತಿಥಿ: ಶರಣಬಸಪ್ಪ ದರ್ಶನಾಪುರ, ಉಪಸ್ಥಿತಿ: ಬಿ.ವಿ. ಗೋಪಾಲ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಎಂ.ವಿ. ಸಭಾಂಗಣ, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಕೆ.ಜಿ. ರಸ್ತೆ, ಬೆಳಿಗ್ಗೆ 11.30

ಶರಣ ನುಲಿಯ ಚಂದಯ್ಯ ಪ್ರಶಸ್ತಿ ಪ್ರದಾನ ಸಮಾರಂಭ: ಸಾನ್ನಿಧ್ಯ: ಬಸವಪ್ರಸಾದ ಸ್ವಾಮೀಜಿ, ಉದ್ಘಾಟನೆ: ವಿಶ್ವನಾಥ ಹಿರೇಮಠ, ಅಧ್ಯಕ್ಷತೆ: ಜಿ. ಚಂದ್ರಣ್ಣ, ಪ್ರಶಸ್ತಿ ಪುರಸ್ಕೃತರು: ಮುನಿಕೃಷ್ಣಪ್ಪ, ನಾಟಕ ಪ್ರದರ್ಶನ: ‘ತ್ಯಾಗಿ’, ಆಯೋಜನೆ: ಪರಸ್ಪರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30

ಭರತನಾಟ್ಯ ರಂಗಪ್ರವೇಶ: ದಿಶಾ ಮಂಗನಹಳ್ಳಿ, ಮುಖ್ಯ ಅತಿಥಿಗಳು: ಎಂ. ಸೂರ್ಯಪ್ರಸಾದ್, ಉಷಾ ದಾತಾರ್, ಸಿ. ನಿರ್ಮಲಾ ಯಲಿಗಾರ್, ರೇಣುಕಾ ಪ್ರಸಾದ್, ವಿದ್ಯಾಕುಮಾರಿ, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

ದಿಶಾ ಮಂಗನಹಳ್ಳಿ

ತಿಂಗಳ ಕಾರ್ಯಕ್ರಮ: ‘ಮಹಿಳೆ ಮತ್ತು ದಲಿತರು–ಸಮಾನತೆಯ ಸವಾಲುಗಳು’ ಬಗ್ಗೆ ಉಪನ್ಯಾಸ: ಸೌಮ್ಯಾ ಕೋಡೂರು, ವಿ. ನಾಗರಾಜ್, ಅಧ್ಯಕ್ಷತೆ: ಎಚ್.ಆರ್. ಸ್ವಾಮಿ, ಆಯೋಜನೆ: ಬಂಡಾಯ ಸಾಹಿತ್ಯ ಸಂಘಟನೆ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನದ ಸಭಾಂಗಣ, ಎನ್. ಆರ್. ಕಾಲೊನಿ, ಸಂಜೆ 5

ಚೈತನ್ಯ ಸಂಜೆ: ಅಧ್ಯಕ್ಷತೆ: ಗೀತಾ ಜಯಂತ್, ಉಪನ್ಯಾಸ: ‘ಶಿವಶರಣ ಕುಂಬಾರ ಗುಂಡಯ್ಯ’, ಉಪನ್ಯಾಸಕರು: ಪರಮೇಶ್, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ದಿಬ್ಬೂರು ವಿ. ಗಿರೀಶ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್. ಕಾಲೇಜು ಸಭಾಂಗಣ, 1ನೇ ಮುಖ್ಯರಸ್ತೆ, ಜಯನಗರ, ಸಂಜೆ 5.30

ವಿಶೇಷ ಉಪನ್ಯಾಸ: ‘ಭಾರತೀಯ ಆರ್ಥಿಕತೆಯಲ್ಲಿ ಪ್ರಮುಖ ಪರಿವರ್ತನೆಗಳು’, ಉಪನ್ಯಾಸಕ: ಬಿಬೇಕ್ ದೇಬ್ರಾಯ್, ಆಯೋಜನೆ: ಚಾಣಕ್ಯ ವಿಶ್ವವಿದ್ಯಾಲಯ, ಸ್ಥಳ: ವಿವೇಕ ಸಭಾಂಗಣ, ಯುವ ಪಥ, 11ನೇ ಮುಖ್ಯರಸ್ತೆ, 4ನೇ ಟಿ ಬ್ಲಾಕ್, ಜಯನಗರ, ಸಂಜೆ 6

ಹರಿದಾಸ ಮಂಜರಿ: ರಾಧಿಕಾ ಜೋಶಿ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, 7ನೇ ಮುಖ್ಯರಸ್ತೆ, ತ್ಯಾಗರಾಜನಗರ, ಸಂಜೆ 6.30

ಕೆ.ಎನ್. ವಿಜಯಲಕ್ಷ್ಮಿ ನಾಟಕೋತ್ಸವ ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ: ಶೂದ್ರ ಶ್ರೀನಿವಾಸ್, ಪ್ರಶಸ್ತಿ ಪುರಸ್ಕೃತರು: ಶಾಕೀರ ಖಾನುಂ, ಅತಿಥಿಗಳು: ದಂಡಪ್ಪ, ಸಹನಾ ಕೆ.ಎನ್., ಪ್ರದೀಪ್ ಮಾಲ್ಗುಡಿ, ಆಯೋಜನೆ: ಸಂಸ ಥಿಯೇಟರ್ ಬೆಂಗಳೂರು, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 6.30

ಮೃತ ವಿದ್ಯಾರ್ಥಿನಿ ಕುಟುಂಬಕ್ಕೆ ₹ 4 ಲಕ್ಷ ಪರಿಹಾರ

ಬೆಂಗಳೂರು: ಜ್ಞಾನ ಭಾರತಿ ಆವರಣದಲ್ಲಿ ಒಂಬತ್ತು ತಿಂಗಳ ಹಿಂದೆ ನಡೆದ ಅಪಘಾತದಲ್ಲಿ ಮೃತಪಟ್ಟ ಸ್ನಾತಕೋತ್ತರ ವಿದ್ಯಾರ್ಥಿನಿ ಕುಟುಂಬಕ್ಕೆ ₹ 4 ಲಕ್ಷ ಪರಿಹಾರ ನೀಡಲು ಬೆಂಗಳೂರು ವಿಶ್ವವಿದ್ಯಾಲಯ ನಿರ್ಧರಿಸಿದೆ.

ಜ್ಞಾನ ಭಾರತಿ ಆವರಣದ ಹಾಸ್ಟೆಲ್‌ನಲ್ಲಿದ್ದ ಗಣಿತ ವಿಭಾಗದ ವಿದ್ಯಾರ್ಥಿನಿ ಶಿಲ್ಪಾಶ್ರೀ (22) ಕಳೆದ ಅಕ್ಟೋಬರ್‌ನಲ್ಲಿ ತರಗತಿಗೆ ಹಾಜರಾಗಲು ಹೊರಟಿದ್ದಾಗ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದು ಗಾಯಗೊಂಡು, ನಂತರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು.

ವಿದ್ಯಾರ್ಥಿನಿಯ ವೈದ್ಯಕೀಯ ವೆಚ್ಚವನ್ನು ಭರಿಸಿದ್ದ ವಿಶ್ವವಿದ್ಯಾನಿಲಯ, ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿತ್ತು. ಜೂನ್ 12ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಶಿಲ್ಪಾಶ್ರೀ ಕುಟುಂಬಕ್ಕೆ ಪರಿಹಾರ ನೀಡಲು ಒಪ್ಪಿಗೆ ಪಡೆದಿದೆ.

ಘಟನೆಯ ನಂತರ ವಿಶ್ವವಿದ್ಯಾನಿಲಯ 2023-24ರ ಬಜೆಟ್‌ನಲ್ಲಿ ವಿದ್ಯಾರ್ಥಿಗಳ ಅಪಘಾತ ವೆಚ್ಚಕ್ಕಾಗಿ ₹ 5 ಲಕ್ಷ ಮೀಸಲಿಟ್ಟಿದೆ. ಅಪಘಾತದಂತಹ ಪ್ರಕರಣಗಳು ನಡೆದರೆ ತಕ್ಷಣದ ಚಿಕಿತ್ಸೆಗೆ ಮೀಸಲಿಟ್ಟಿರುವ ಹಣ ಬಳಸಲು ಅನುಮತಿ ನೀಡಲಾಗಿದೆ.

ಆರ್‌ಜಿಯುಎಚ್‌ಎಸ್: 70 ವಿದ್ಯಾರ್ಥಿಗಳಿಗೆ ಅವಕಾಶ

ಪ್ರಾಯೋಗಿಕ ಪರೀಕ್ಷೆ ನಡೆಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವೈದ್ಯಕೀಯ ಮಂಡಳಿಯ (ಎಂಸಿಐ) ನಿಯಮಗಳಿಗೆ ಅನುಗುಣವಾಗಿ ಪ್ರಾಯೋಗಿಕ ಪರೀಕ್ಷೆ ನಡೆಸದ ಹಿನ್ನೆಲೆಯಲ್ಲಿ 70 ವೈದ್ಯಕೀಯ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳನ್ನು ಹೊಸದಾಗಿ ನಡೆಸುವಂತೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ಅನಿರುದ್ಧ ಮತ್ತಿತರ ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಆದೇಶ ನೀಡಿದೆ.

‘ಪ್ರತಿಯೊಬ್ಬ ಪರೀಕ್ಷಾ ಮೇಲ್ವಿಚಾರಕರು ಸ್ವತಂತ್ರವಾಗಿ ಅಂಕ ನೀಡಬೇಕಾಗಿಲ್ಲ’ ಎಂಬ ವಿಶ್ವವಿದ್ಯಾಲಯದ ವಾದವನ್ನು ನ್ಯಾಯಪೀಠ ತಿರಸ್ಕರಿಸಿದೆ.

‘ಎಂಸಿಐ ನಿಯಮಾನುಸಾರ ಪ್ರಾಯೋಗಿಕ ಮತ್ತು ಥಿಯರಿ ಪರೀಕ್ಷೆಗೆ ನಾಲ್ವರು ಪರೀಕ್ಷಾ ಮೇಲ್ವಿಚಾರಕರು ಇರಬೇಕು. ಪ್ರತಿಯೊಬ್ಬ ಪರೀಕ್ಷಕರೂ ಸ್ವತಂತ್ರವಾಗಿ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಿ ಅಂಕ ನೀಡಬೇಕು. ಈ ನಿಟ್ಟಿನಲ್ಲಿ ನ್ಯಾಯಾಲಯ ಅನೇಕ ಬಾರಿ ಆದೇಶಿಸಿದ್ದರೂ ಆರ್‌ಜಿಯುಎಚ್‌ಎಸ್ ಪುನಃ ಹಳೆಯ ದೋಷಗಳನ್ನೇ ಪುನರಾವರ್ತಿಸುತ್ತಿದೆ’ ಎಂದು ನ್ಯಾಯಪೀಠ ಬೇಸರ ವ್ಯಕ್ತಪಡಿಸಿದೆ.

‘ಎಂಸಿಐನ ಪದವಿ ವೈದ್ಯಕೀಯ ಶಿಕ್ಷಣ ಕಾಯ್ದೆ-1977ರ ನಿಯಮ 13ರ ಪ್ರಕಾರ ಪ್ರಾಯೋಗಿಕ ಅಥವಾ ಕ್ಲಿನಿಕಲ್ ಪರೀಕ್ಷೆಗಳನ್ನು ಹೊಸದಾಗಿ ನಡೆಸಬೇಕು. ಪೂರಕ ಪರೀಕ್ಷೆಗೂ ಮುನ್ನ ಹೊಸದಾಗಿ ಪರೀಕ್ಷೆ ನಡೆಸಲು ವೇಳಾಪಟ್ಟಿ ನಿಗದಿಪಡಿಸಬೇಕು’ ಎಂದು ನ್ಯಾಯಪೀಠ ಆದೇಶಿಸಿದೆ.

ಅರ್ಜಿದಾರರು 2023ರ ಫೆಬ್ರುವರಿಯಲ್ಲಿ ನಡೆದ ಪ್ರಾಯೋಗಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದರು. ಅವರು, ‘ಪದವಿ ವೈದ್ಯಕೀಯ ಶಿಕ್ಷಣ ಕಾಯ್ದೆ-1997ರ ನಿಯಮ 13 (2)ರ ಅಡಿಯಲ್ಲಿ ನಾಲ್ವರು ಪರೀಕ್ಷಕರು ಪ್ರಾಯೋಗಿಕ ಪರೀಕ್ಷೆ ನಡೆಸಿ ಪ್ರತ್ಯೇಕವಾಗಿ ಅಂಕಗಳನ್ನು ನೀಡಬೇಕು. ಆದರೆ ವಿಶ್ವವಿದ್ಯಾಲಯ ನಿಯಮಗಳ ಪಾಲನೆ ಮಾಡದೆ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲಾಗಿದೆ’ ಎಂದು ಆಕ್ಷೇಪಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ದಂಪತಿ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: ‘ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಅಪರಾಧದ ಪ್ರಕರಣವು ಸಾಬೀತಾಗಬೇಕಾದರೆ; ಆತ್ಮಹತ್ಯೆ ಘಟನೆ ನಡೆದ ಸಮೀಪದ ದಿನಾಂಕದಂದು ಆರೋಪಿ ಪ್ರಚೋದನೆ ನೀಡಿರಬೇಕಾಗಿರುತ್ತದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ನಮ್ಮ ವಿರುದ್ಧ ಪುಲಕೇಶಿ ನಗರ ಠಾಣಾ ಪೊಲೀಸರು ದಾಖಲಿಸಿರುವ ಪ್ರಕರಣವನ್ನು ರದ್ದುಪಡಿಸಬೇಕು’ ಎಂದು ಕೋರಿ ಇಂದಿರಾ ನಗರದ ನಿವಾಸಿ ವಿ.ವಿ. ಸಿಂಗಾರ ವೇಲು ಹಾಗೂ ಅವರ ಪತ್ನಿ ವಾಸಂತಿ ವೇಲು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸುವ ಮೂಲಕ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಮರಣ ಪತ್ರವನ್ನು ಪರಿಗಣಿಸಿದರೆ ಮೃತ ವಿಕ್ರಮ್‌ಗೆ 2021ರ ಅಕ್ಟೋಬರ್‌ನಲ್ಲಿ ಅರ್ಜಿದಾರರು ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ. ಆದರೆ, ವಿಕ್ರಮ್ 2021ರ ನವೆಂಬರ್ 23ರಂದು ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಕ್ಟೋಬರ್‌ನಲ್ಲಿ ಯಾವ ನಿರ್ದಿಷ್ಟ ದಿನದಂದು ಬೆದರಿಕೆ ಹಾಕಲಾಗಿದೆ ಎಂಬ ಬಗ್ಗೆ ದೂರಿನಲ್ಲಿ ಹೇಳಿಲ್ಲ’ ಎಂದು ಆದೇಶದಲ್ಲಿ ವಿವರಿಸಲಾಗಿದೆ.

‘ಆತ್ಮಹತ್ಯೆ ನಡೆದ ಸಮೀಪದ ದಿನಗಳಲ್ಲಿ ಆರೋಪಿಯಿಂದ ಪ್ರಚೋದನೆ ಕೃತ್ಯ ನಡೆದಿರಬೇಕು. ಆದರೆ, ಅರ್ಜಿದಾರರು ಬೆದರಿಕೆ ಹಾಕಿ ಪ್ರಚೋದನೆ ನೀಡಿದ್ದಾರೆ ಎನ್ನುವ ಘಟನೆ ಮತ್ತು ವಿಕ್ರಮ್ ಆತ್ಮಹತ್ಯೆ ಮಾಡಿಕೊಂಡ ದಿನದ ನಡುವೆ ಸಾಕಷ್ಟು ದಿನಗಳ ಅಂತರವಿದೆ. ಅಂತೆಯೇ, ಎರಡೂ ಕುಟುಂಬಗಳ ನಡುವೆ ಸ್ಥಿರಾಸ್ತಿಗೆ ತಳುಕು ಹಾಕಿಕೊಂಡ ಸಾಕಷ್ಟು ವ್ಯಾಜ್ಯಗಳಿವೆ’ ಎಂದಿರುವ ನ್ಯಾಯಪೀಠ ದಂಪತಿ ವಿರುದ್ಧದ ಪ್ರಕರಣ ರದ್ದುಪಡಿಸಿದೆ. ಅರ್ಜಿದಾರರ ಪರ ವಕೀಲ ಜಿ.ಲಕ್ಷ್ಮಿಕಾಂತ್ ವಾದ ಮಂಡಿಸಿದ್ದರು.

ವರದಿ ನೀಡುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಗಡಿ ಕನ್ನಡಿಗರಿಗೆ ಸರ್ಕಾರಿ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರರಾಜ್ಯಗಳ ಕನ್ನಡಿಗ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಸರ್ಕಾರಿ ಸೌಲಭ್ಯ ಸಿಗುವಂತೆ ಮಾಡಲು ತೆಗೆದುಕೊಳ್ಳಬಹುದಾದ ಕ್ರಮ ಪರಿಶೀಲಿಸಿ ವರದಿ ನೀಡುವಂತೆ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಹೊರರಾಜ್ಯಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತ ಗಡಿನಾಡು, ಹೊರರಾಜ್ಯಗಳ ಕನ್ನಡಿಗ ವಿದ್ಯಾರ್ಥಿಗಳು ಕರ್ನಾಟಕದಲ್ಲಿ ಉನ್ನತ ಶಿಕ್ಷಣ, ಉದ್ಯೋಗ ಸೇರಿದಂತೆ ರಾಜ್ಯ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಕನ್ನಡಿಗ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗೆ ಅವಶ್ಯಕವಾಗಿ ಒದಗಿಸಬಹುದಾದ ಸೌಲಭ್ಯಗಳು ಮತ್ತು ಅವುಗಳನ್ನು ಸುಗುಮವಾಗಿ ದೊರಕುವಂತೆ ಮಾಡಲು ವಹಿಸಬಹುದಾದ ಕ್ರಮಗಳ ಬಗ್ಗೆ ಮಾಹಿತಿ ನೀಡುವಂತೆ ಇದೇ 26ರಂದು ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ.

ಮುಖ್ಯಮಂತ್ರಿಯ ಸೂಚನೆಯಂತೆ ವರದಿ ನೀಡಲು ಉನ್ನತ ಶಿಕ್ಷಣ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ, ಸಮಾಜ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಮುಖ್ಯಸ್ಥರಿಗೆ ಮುಖ್ಯ ಕಾರ್ಯದರ್ಶಿ ಸೂಚನೆ ನೀಡಿದ್ದಾರೆ.

ಹಿಂದಿನ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಯಾ ಗಿದ್ದ ಬಸವರಾಜ ಬೊಮ್ಮಾಯಿ ಅವರ ಸೂಚನೆಯಂತೆ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಸಿ. ಸೋಮಶೇಖರ ಅವರು ಕಳೆದ ಜ. 25ರಂದು ಕರ್ನಾಟದ ನೆರೆಯ ಆರು ರಾಜ್ಯಗಳ (ಮಹಾರಾಷ್ಟ್ರ, ತಮಿಳುನಾಡು, ಕೇರಳ, ಗೋವಾ, ಆಂಧ್ರಪ್ರದೇಶ, ತೆಲಂಗಾಣ) ಕನ್ನಡಿಗರ ಪ್ರಾತಿನಿಧಿಕ ಸಭೆ ನಡೆಸಿದ್ದರು.

ಸಿದ್ದರಾಮಯ್ಯ

ಆ ವರದಿಯನ್ನು ಫೆ. 2ರಂದು ಬೊಮ್ಮಾಯಿ ಅವರಿಗೆ ಸಲ್ಲಿಸಲಾ ಗಿತ್ತು. ಆ ವರದಿಯಲ್ಲಿರುವ ಅಂಶಗಳನ್ನು ಅನುಷ್ಠಾನಗೊಳಿಸಬೇಕು ಎಂದು ಮಹಾರಾಷ್ಟ್ರದ ಜತ್ತ ಕನ್ನಡ ಪ್ರಾಥಮಿಕ ಶಿಕ್ಷಕರ ಸಮನ್ವಯ ಸಮಿತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇತ್ತೀಚೆಗೆ ಮನವಿ ಸಲ್ಲಿಸಿತ್ತು. ಈ ಮನವಿಗೆ ಸ್ಪಂದಿಸಿರುವ ಮುಖ್ಯಮಂತ್ರಿ, ಆದ್ಯತೆಯಲ್ಲಿ ಈ ವಿಷಯವನ್ನು ಪರಿಶೀಲಿಸಲು ವರದಿ ಮಂಡಿಸಲು ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಮಹಾರಾಷ್ಟ್ರದ ಜತ್ತ, ಅಕ್ಕಲಕೋಟ, ದಕ್ಷಿಣ ಸೊಲ್ಲಾಪುರ, ಕೇರಳದ ಮಂಜೇಶ್ವರ, ಕಾಸರಗೋಡು, ಆಂಧ್ರಪ್ರದೇಶದ ಮೆಹಬೂಬನಗರ, ರಾಯದುರ್ಗ, ತಮಿಳುನಾಡಿನ ಹೊಸೂರು, ಕೃಷ್ಣಗಿರಿ, ತಾಳವಾಡಿ, ನೀಲಗಿರಿ ಮತ್ತು ಗೋವಾ ಪಟ್ಟಣದಲ್ಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇಲ್ಲಿನ ಕನ್ನಡಿಗರ ರಕ್ಷಣೆಗೆ ಮುಂದಾಗಬೇಕು ಎಂದು ಮನವಿಯಲ್ಲಿ ಕೋರಲಾಗಿದೆ.

ಬೇಡಿಕೆಗಳು ಏನೇನು: ಹೊರ ರಾಜ್ಯದಲ್ಲಿ 1 ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ 5ರಷ್ಟು ಮೀಸಲಾತಿ ನೀಡಬೇಕು. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ನಡೆಸುವ ಮೊರಾರ್ಜಿ, ಕಿತ್ತೂರು ರಾಣಿ ಚನ್ನಮ್ಮ, ಏಕಲವ್ಯ ಸೇರಿದಂತೆ ಎಲ್ಲ ವಸತಿ ಶಾಲೆಗಳಲ್ಲಿ ಆರನೇ ತರಗತಿಯ ಪ್ರವೇಶಕ್ಕೆ ಹೊರ ರಾಜ್ಯದಲ್ಲಿ ಒಂದರಿಂದ 5ನೇ ತರಗತಿವರೆಗೆ ಕಲಿತ ಕನ್ನಡ ಮಕ್ಕಳಿಗೆ ಮೀಸಲಾತಿ ನೀಡಬೇಕು. ಹೊರ ರಾಜ್ಯದಿಂದ ಕರ್ನಾಟಕಕ್ಕೆ ಕಲಿಯಲು ಬರುವ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಬೇಕು. ಶೈಕ್ಷಣಿಕ ಪ್ರವಾಸಕ್ಕೆ ವಿಶೇಷ ಬಸ್ ವ್ಯವಸ್ಥೆ ಕಲ್ಪಿಸಿ, ಆ ವೆಚ್ಚವನ್ನು ಕರ್ನಾಟಕ ಸರ್ಕಾರ ಭರಿಸಬೇಕು. ಹೊರರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೊಂದಿಕೊಂಡು ಅಂಗನವಾಡಿ, ಬಾಲವಾಡಿ, ಸರ್ಕಾರಿ ಶಾಲೆಗಳನ್ನು ತೆರೆಯಬೇಕು. ಹೊರರಾಜ್ಯದಲ್ಲಿ ಕನ್ನಡ ಕಲಿತು ಕರ್ನಾಟಕ ರಾಜ್ಯದ ಯಾವುದೇ ವಿಶ್ವವಿದ್ಯಾಲಯ ಗಳಲ್ಲಿ ಕಲಿಕೆ ಮುಂದುವರಿಸುವ ವಿದ್ಯಾರ್ಥಿಗಳಿಗೆ ವಿಶೇಷ ಶಿಷ್ಯವೇತನ ನೀಡಬೇಕು. ಮಹಾರಾಷ್ಟ್ರದಲ್ಲಿ ಅರೆ ವೈದ್ಯಕೀಯ ಓದಿದ ಕನ್ನಡ ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರ ನಡೆಸುವ ಆರೋಗ್ಯ ಇಲಾಖೆಯ ನೇಮಕಾತಿಯಲ್ಲಿ ಅವಕಾಶ ನೀಡಬೇಕು.

ಬಕ್ರೀದ್ ಪ್ರಯುಕ್ತ ಹುಬ್ಬಳ್ಳಿಯ ಈದ್ಗಾ ಮೈದಾನ ಸೇರಿ ಸುತ್ತಮುತ್ತಲಿನ ಜಾಗದಲ್ಲಿ ಗುರುವಾರ ಭಾರಿ ಸಂಖ್ಯೆಯಲ್ಲಿ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

ಜಿ.ಪಂ, ತಾ.ಪಂ: ಮೀಸಲು ನಿಗದಿಗೆ 10 ವಾರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸುವ ನಿಟ್ಟಿನಲ್ಲಿ ಕ್ಷೇತ್ರಗಳ ಪುನರ್ ವಿಂಗಡಣೆ ಹಾಗೂ ಮೀಸಲಾತಿ ನಿಗದಿ ಪ್ರಕ್ರಿಯೆಯನ್ನು ಹತ್ತು ವಾರಗಳಲ್ಲಿ ಪೂರ್ಣಗೊಳಿಸಿ ಅಧಿಸೂಚನೆ ಹೊರಡಿಸಬೇಕು' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, 'ಜಿಲ್ಲಾ ಹಾಗೂ ತಾ.ಪಂ ಕ್ಷೇತ್ರಗಳ ಮರು ವಿಂಗಡಣೆ ಮಾಡಲಾಗಿತ್ತು. ಕೆಲ ಆಕ್ಷೇಪಣೆ ಇರುವುದರಿಂದ ರೀ-ಡೂ ಆಗಬೇಕಿದೆ. ನಂತರ ಕ್ಷೇತ್ರವಾರು ಮೀಸಲಾತಿ ನಿಗದಿಪಡಿಸಬೇಕಾಗುತ್ತದೆ. ಈ ಪ್ರಕ್ರಿಯೆಗೆ 10 ವಾರ ಬೇಕು' ಎಂದು ಕೋರಿದರು.

ನ್ಯಾಯಪೀಠ, 'ಪ್ರಕ್ರಿಯೆಯನ್ನು 10 ವಾರಗಳಲ್ಲಿ ಪೂರ್ಣಗೊಳಿಸಿ, ಅಧಿಸೂಚನೆ ಹೊರಡಿಸಬೇಕು. ನಂತರ ರಾಜ್ಯ ಚುನಾವಣಾ ಆಯೋಗ ಮುಂದಿನ ಪ್ರಕ್ರಿಯೆ ಕೈಗೊಳ್ಳಬೇಕು' ಎಂದು ನಿರ್ದೇಶಿಸಿತು.

ಜಿ.ಪಂ ಮತ್ತು ತಾ.ಪಂ ಗೆ ನಿಗದಿತ ಸಮಯದಲ್ಲಿ ಚುನಾವಣೆ ನಡೆಸಲು ಅನುವು ಮಾಡಿಕೊಡಲು ಸರ್ಕಾರಕ್ಕೆ ನಿರ್ದೇಶಿಸಬೇಕು. ಕ್ಷೇತ್ರಗಳ ಮರು ವಿಂಗಡಣೆಗೆ ಸೀಮಾ ನಿರ್ಣಯ ಆಯೋಗ ರಚಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಆಯೋಗ ಈ ಪಿಐಎಲ್ ಸಲ್ಲಿಸಿದೆ.

'ಲಂಚ ಕೊಡುವವನೂ ಶಿಕ್ಷಾರ್ಹ'

ಬೆಂಗಳೂರು: 'ಲಂಚ ಪಡೆಯುವ ವ್ಯಕ್ತಿಯ ಜೊತೆಜೊತೆಗೇ ಲಂಚ ಕೊಡುವ ವ್ಯಕ್ತಿಯನ್ನೂ ಶಿಕ್ಷೆಗೆ ಒಳಪಡಿಸಬೇಕು ಮತ್ತು ಲಂಚ ಪ್ರವೃತ್ತಿಯನ್ನು ಬುಡಸಮೇತ ಹೊಸಕಿ ಹಾಕಲು ಇದು ಸಕಾಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆ (ಕೆಎಸ್‌ಡಿಎಲ್) ನಿಯಮಿತದ ಟೆಂಡರ್ ಪ್ರಕ್ರಿಯೆಯಲ್ಲಿ ಲಂಚ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಹಾಗೂ ಅವರ ಪುತ್ರ ಎಂ.ವಿ. ಪ್ರಶಾಂತ್ ಕುಮಾರ್ ವಿರುದ್ಧದ ಲಂಚದ ಪ್ರಕರಣದಲ್ಲಿ ಐವರು ಆರೋಪಿಗಳ ವಿರುದ್ಧದ ಭ್ರಷ್ಟಾಚಾರ ಪ್ರಕರಣ ರದ್ದುಪಡಿಸಲು ನಿರಾಕರಿಸಿದೆ.

'ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಪ್ರಕರಣವನ್ನು ರದ್ದುಪಡಿಸಬೇಕು' ಎಂದು ಕೋರಿ ಕರ್ನಾಟಕ ಅರೋಮಾ ಕಂಪೆನಿ ಮಾಲೀಕರಾದ ಕೈಲಾಶ್ ಎಸ್. ರಾಜ್, ವಿನಯ್ ಎಸ್. ರಾಜ್, ಚೇತನ್ ಮಾರ್ಲೇಚ, ಸಿಬ್ಬಂದಿ ಅಲ್ಬರ್ಟ್ ನಿಕೋಲಸ್ ಮತ್ತು ಗಂಗಾಧರ್ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ಲಂಚ ಕೊಡುವವರು, ಪಡೆಯುವವರನ್ನು ಒಂದೇ ನೆಲೆಯಲ್ಲಿ ಪರಿಗಣಿಸಲು 2018ರ ಜುಲೈ 29ರಂದು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಅರ್ಜಿದಾರರ ವಿರುದ್ಧದ ಪ್ರಕರಣವನ್ನು ಕೈಬಿಟ್ಟರೆ ಕಾಯ್ದೆಗೆ ತಿದ್ದು ಪಡಿ ತಂದಿರುವ ಉದ್ದೇಶವೇ ನಿರರ್ಥಕವಾಗಲಿದೆ' ಎಂದು ನ್ಯಾಯಪೀಠ ಹೇಳಿದೆ.

'ಇದೊಂದು ರೋಚಕ ಕಥಾಸಂಗಮ. ಪೊಲೀಸರು ದಾಳಿ ನಡೆಸಿದ್ದ ವೇಳೆ ಕಚೇರಿಯಲ್ಲಿ ನಿಕೋಲಾಸ್ ಮತ್ತು ಗಂಗಾಧರ್ ತಲಾ ₹ 45 ಲಕ್ಷ ಮೊತ್ತದ 2 ಬ್ಯಾಗ್‌ಗಳನ್ನು ಇಟ್ಟುಕೊಂಡು ಏಕೆ ಕುಳಿತಿದ್ದರು? ಈ ₹ 90 ಲಕ್ಷದ ಒಡೆತನ ನ್ಯಾಯಾಲಯದಲ್ಲೇ ನಿರ್ಣಯವಾಗಲಿ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಅನುಕಂಪದ ನೌಕರಿ: ₹500 ಕೋಟಿ ಬೇನಾಮಿ ಆಸ್ತಿ?

ಒಂದನೇ ಪುಟದಿಂದ

150 ಎಕರೆಗೂ ಹೆಚ್ಚು ಜಮೀನು: 'ಸ್ನೇಹಿತ ಗೌರವ್ ಶೆಟ್ಟಿ ಹೆಸರಿನಲ್ಲಿ ಸುಮಾರು 98 ಎಕರೆ ಜಮೀನು, ಸಹೋದರ ಆಶಿತ್ ರೈ ಹೆಸರಿನಲ್ಲಿ ಸುಮಾರು 40 ಎಕರೆ ಜಮೀನು ಸೇರಿದಂತೆ 150ಕ್ಕೂ ಹೆಚ್ಚು ಎಕರೆ ಜಮೀನು ಬೇನಾಮಿಯಾಗಿ ಹೊಂದಿದ್ದಾರೆ. 98 ಎಕರೆ ಜಮೀನಿನ ಜಾಗದಲ್ಲಿ ಕುದುರೆ ಸವಾರಿ ತರಬೇತಿ ಕೇಂದ್ರ ತೆರೆಯಲು ಅಜಿತ್‌ಕುಮಾರ್ ತಯಾರಿ ನಡೆಸುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

'ದೇವನಹಳ್ಳಿ, ದೊಡ್ಡಬಳ್ಳಾಪುರ, ಕೆ.ಆರ್.ಪುರ ಸುತ್ತಮುತ್ತ ಹೆಚ್ಚು ಜಮೀನು ಹಾಗೂ ಫಾರ್ಮ್‌ಹೌಸ್ ಇವೆ. ಪುತ್ತೂರಿನಲ್ಲಿ ಐಷಾರಾಮಿ ಮನೆ, ಬೆಂಗಳೂರಿನ ಬಸವೇಶ್ವರನಗರ, ಸಹಕಾರನಗರ ಹಾಗೂ ದೇವನಹಳ್ಳಿಯಲ್ಲಿ ಫ್ಲ್ಯಾಟ್‌ಗಳಿರುವುದು ಗೊತ್ತಾಗಿದೆ' ಎಂದು ಹೇಳಿವೆ.

ಅಜಿತ್ ಕುಮಾರ್ ರೈ ಮನೆಯಲ್ಲಿ ದೊರೆತ ಚಿನ್ನಾಭರಣ ಮತ್ತು ವಾಚ್‌ಗಳು

ಅದೃಷ್ಟ ಸಂಖ್ಯೆ '8'!

'ಲ್ಯಾಂಡ್ ಕ್ರೂಸರ್, ವೋಲ್ವೊ ಎಕ್ಸ್‌ಸಿ-16, ನಾಲ್ಕು ಟೊಯೊಟಾ ಫಾರ್ಚ್ಯೂನರ್ ಹಾಗೂ ನಾಲ್ಕು ಮಹಿಂದ್ರಾ ಥಾರ್ ಜೀಪುಗಳು ಪತ್ತೆಯಾಗಿವೆ. ಎಲ್ಲ ಕಾರುಗಳ ನೋಂದಣಿ ನವೀನ್‌ಕುಮಾರ್ ಎಂಬವರ ಹೆಸರಿನಲ್ಲಿದ್ದು, ಆತ ಬೇನಾಮಿ ಎಂಬುದು ಗೊತ್ತಾಗಿದೆ. ಎಲ್ಲ ವಾಹನಗಳ ನೋಂದಣಿ ಸಂಖ್ಯೆಯ ಕೊನೆಯಲ್ಲಿ '8' ಇದೆ. ಇದು ಅದೃಷ್ಟ ಸಂಖ್ಯೆಯೆಂದು ಅಜಿತ್‌ಕುಮಾರ್ ಹೇಳುತ್ತಿದ್ದಾರೆ' ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ.

'ಗುಂಪಿನಲ್ಲಿ ಅಕ್ರಮ'

'ಅಜಿತ್‌ಕುಮಾರ್ ಬೇನಾಮಿಗಳ ತಂಡ ಕಟ್ಟಿಕೊಂಡು ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದ ಎನ್ನುವ ಮಾಹಿತಿ ಸಿಕ್ಕಿದೆ. ಗೌರವ್ ಶೆಟ್ಟಿ, ನವೀನ್‌ಕುಮಾರ್, ಕೃಷ್ಣಪ್ಪ, ಹರ್ಷವರ್ಧನ್ ಹಾಗೂ ಇತರರು ಅಜಿತ್‌ಕುಮಾರ್‌ನ ಬೇನಾಮಿಗಳು. ಇವರ ಹೆಸರಿನಲ್ಲಿ ಹೆಚ್ಚು ಆಸ್ತಿ ಇದೆ. ಅವರನ್ನೂ ವಿಚಾರಣೆ ನಡೆಸಲಾಗುವುದು' ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ಹೇಳಿವೆ.

ಸಾರಿಗೆ ಸಂಸ್ಥೆಗಳಿಗೆ ವರಮಾನ 'ಶಕ್ತಿ'

ಒಂದನೇ ಪುಟದಿಂದ

'ಮೊದಲು ನಮ್ಮ ಬಸ್‌ಗಳು ಖಾಲಿ ಖಾಲಿಯಾಗಿ ಓಡಾಡುತ್ತಿದ್ದವು. ಇಪ್ಪತ್ತು ಸೀಟುಗಳೂ ತುಂಬುತ್ತಿರ ಲಿಲ್ಲ. ಶಕ್ತಿ ಯೋಜನೆ ಜಾರಿಯಾದ ಬಳಿಕ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಬಸ್‌ಗಳತ್ತ ಬರುತ್ತಿದ್ದರೆ, ಅವರ ಹಿಂದೆ ಅವರ ಕುಟುಂಬದ ಪುರುಷರೂ ಇದೇ ಬಸ್‌ಗಳತ್ತ ಹೆಜ್ಜೆ ಹಾಕುತ್ತಿದ್ದಾರೆ. ಹೀಗಾಗಿ ನಮ್ಮ ಬಸ್‌ಗಳೀಗ ಭರ್ತಿ ತುಂಬಿಕೊಂಡು ಓಡಾಡುತ್ತಿವೆ' ಎಂದು ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆಯ ನಿರ್ವಾಹಕ ಮಲ್ಲಿಕಾರ್ಜುನ ಪ್ರತಿಕ್ರಿಯಿಸಿದರು.

ಕೆಎಸ್‌ಆರ್‌ಟಿಸಿ ಉದಾಹರಣೆಯನ್ನೇ ತೆಗೆದುಕೊಂಡರೆ ನಿತ್ಯದ ವರಮಾನದಲ್ಲಿ ಸರಾಸರಿ ₹1.56 ಕೋಟಿಯಷ್ಟು ಹೆಚ್ಚಳವಾಗಿದೆ. ಮಹಿಳೆಯರಿಗಾಗಿ ಶಕ್ತಿ ಯೋಜನೆ ಅನುಷ್ಠಾನವಾದ ಬಳಿಕ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (ಕೆಕೆಆರ್‌ಟಿಸಿ) ಬಸ್‌ಗಳಲ್ಲಿಯೂ ಪ್ರಯಾಣಿಕರ ಸಂಖ್ಯೆ ಏರಿಕೆಯಾಗಿದ್ದು, ಆದಾಯ ನಿತ್ಯ ಸರಾಸರಿ ₹90 ಲಕ್ಷ ಹೆಚ್ಚಾಗಿದೆ.

'ಶಕ್ತಿ ಯೋಜನೆ ಜಾರಿಯಾದ ಮೇಲೆ ಕೆಕೆಆರ್‌ಟಿಸಿಯ ಬಸ್‌ಗಳ ಓಡಾಟದ ಅವಧಿಯನ್ನು ಹೆಚ್ಚಿಸಲಾಗಿದ್ದು, 22 ಸಾವಿರ ಟ್ರಿಪ್‌ಗಳನ್ನು 23 ಸಾವಿರಕ್ಕೆ ಹೆಚ್ಚಿಸಲಾಗಿದೆ. ಟ್ರಿಪ್ ಹೆಚ್ಚಿದಂತೆ ಚಾಲಕರು ಮತ್ತು ನಿರ್ವಾಹಕರಿಗೆ ಭತ್ಯೆಯನ್ನೂ ಹೆಚ್ಚಿಸಲಾಗಿದೆ' ಎಂದು ಕೆಕೆಆರ್‌ಟಿಸಿಯ ಮುಖ್ಯ ಸಂಚಾರ ವ್ಯವಸ್ಥಾಪಕ ವಿ.ಎಚ್. ಸಂತೋಷಕುಮಾರ 'ಪ್ರಜಾವಾಣಿ'ಗೆ ತಿಳಿಸಿದರು.

ಉತ್ತರ ಕರ್ನಾಟಕದ ಆರು ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (ಎನ್‌ಡಬ್ಲ್ಯು-ಕೆಆರ್‌ಟಿಸಿ) ಆದಾಯ 17 ದಿನಗಳಲ್ಲಿ ₹110 ಕೋಟಿ ಮೀರಿದೆ. ಎನ್‌ಡಬ್ಲ್ಯು-ಕೆಆರ್‌ಟಿಸಿ ಬಸ್‌ಗಳಲ್ಲಿ ಯೋಜನೆಗೂ ಮುನ್ನ ಪ್ರತಿದಿನ 18 ಲಕ್ಷ ಪ್ರಯಾಣಿಕರು ಸಂಚರಿಸುತ್ತಿದ್ದರು. ಅಂದಾಜು 6.80 ಲಕ್ಷದಿಂದ 7.60 ಲಕ್ಷ ಮಹಿಳೆಯರು ಇದ್ದರು. ಈಗ ಪ್ರತಿದಿನ ಸರಾಸರಿ 23.53 ಲಕ್ಷ ಜನರು ಪ್ರಯಾಣಿಸುತ್ತಿದ್ದಾರೆ. ಅವರಲ್ಲಿ ಮಹಿಳೆಯರ ಸಂಖ್ಯೆ 12.47 ಲಕ್ಷ (ಶೇ 55) ತಲುಪಿದೆ.

'ಈ ಯೋಜನೆಯಡಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದರೂ ಅದನ್ನು ನಾವು ಆದಾಯವೆಂದು ಪರಿಗಣಿಸುತ್ತೇವೆ. ಅವರಿಗೆ ನೀಡಿರುವ 'ಟಿಕೆಟ್' ಮೊತ್ತದ ಆಧಾರದಲ್ಲಿ ಸರ್ಕಾರ ನಮಗೆ ಮರುಪಾವತಿ ಮಾಡಲಿದೆ. ಮಹಿಳಾ ಪ್ರಯಾಣಿಕರ ಸಂಖ್ಯೆ ಹಾಗೂ ಪ್ರಯಾಣ ವೆಚ್ಚದ ವಿವರವನ್ನು ಪ್ರತಿ ತಿಂಗಳ ಅಂತ್ಯಕ್ಕೆ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ' ಎಂದು ಎನ್‌ಡಬ್ಲ್ಯುಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಭರತ್ ಎಸ್. ತಿಳಿಸಿದರು.

ನಷ್ಟದಲ್ಲಿದ್ದ ಸಾರಿಗೆ ಸಂಸ್ಥೆಗಳು ಕೊರೊನಾ ಕಾಲದಲ್ಲಿ ಇನ್ನಷ್ಟು ಸಂಕಷ್ಟವನ್ನು ಅನುಭವಿಸಿದ್ದವು. ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ, ಕೆಕೆಆರ್‌ಟಿಸಿ ಈ ನಾಲ್ಕು ಸಂಸ್ಥೆಗಳು ಸೇರಿ 2017–18ರಲ್ಲಿ ₹300 ಕೋಟಿ ನಷ್ಟದಲ್ಲಿದ್ದವು. ಕೋವಿಡ್ ಆವರಿಸಿದ ಮೇಲೆ ಎರಡು ವರ್ಷಗಳ ಕಾಲ ಭಾರಿ ನಷ್ಟ ಉಂಟಾಗಿತ್ತು. ಒಟ್ಟು ನಷ್ಟದ ಪ್ರಮಾಣ ₹4,000 ಕೋಟಿಗೆ ಏರಿತ್ತು. ಈ ನಷ್ಟವನ್ನು ಭರಿಸಲು ಸರ್ಕಾರ ಸುಮಾರು ₹3,000 ಕೋಟಿ ಅನುದಾನ ಒದಗಿಸಿತ್ತು.

'ಲಾಭ ನಷ್ಟಕ್ಕಿಂತ ಸೇವೆ ಮುಖ್ಯ'

ಆರೋಗ್ಯ, ಶಿಕ್ಷಣ, ಸಾರಿಗೆ ಸೇರಿದಂತೆ ಸಾರ್ವಜನಿಕ ಸೇವೆಯಲ್ಲಿರುವ ಯಾವುದೇ ಸಂಸ್ಥೆ ಲಾಭದ ದೃಷ್ಟಿಯಿಂದ ನಡೆಯುವುದಿಲ್ಲ. ಸೇವೆಯ ದೃಷ್ಟಿಯಲ್ಲಿ ನಡೆಯುತ್ತದೆ. ಸರ್ಕಾರವು ಲಾಭ ನಷ್ಟದ ಬಗ್ಗೆ ಹೆಚ್ಚು ಚಿಂತನೆ ನಡೆಸುವ ಬದಲು ಸಾರ್ವಜನಿಕ ಹಿತಾಸಕ್ತಿಯ ಬಗ್ಗೆ ಹೆಚ್ಚು ಚಿಂತನೆ ಮಾಡಬೇಕಾಗುತ್ತದೆ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

ರಾಜ್ಯದ 25,000 ಹಳ್ಳಿಗಳಲ್ಲಿ 300 ಹಳ್ಳಿಗಳನ್ನು ಹೊರತುಪಡಿಸಿ ಮತ್ತೆಲ್ಲ ಕಡೆ ನಮ್ಮ ಸಾರಿಗೆ ಸಂಸ್ಥೆಗಳ ಬಸ್‌ಗಳು ಸಂಚರಿಸುತ್ತಿವೆ. ಒಂದು ಹಳ್ಳಿಯಲ್ಲಿ ಹತ್ತೇ ಪ್ರಯಾಣಿಕರಿದ್ದರೂ ಬಸ್ ಓಡಿಸಬೇಕಾಗುತ್ತದೆ. ಶೇ 40ರಷ್ಟು ಬಸ್‌ಗಳು ಈ ರೀತಿ ಸಂಚರಿಸುತ್ತಿದ್ದುದರಿಂದ ಸಹಜವಾಗಿಯೇ ಖರ್ಚಿಗಿಂತ ವರಮಾನ ಕಡಿಮೆಯಾಗುತ್ತಿತ್ತು. 'ಶಕ್ತಿ' ಯೋಜನೆಯಿಂದ ಸಾರ್ವಜನಿಕರಿಗಷ್ಟೇ ಅಲ್ಲ, ಸಾರಿಗೆಯ ನಾಲ್ಕೂ ಸಂಸ್ಥೆಗಳಿಗೂ ಒಳ್ಳೆಯದನ್ನು ಮಾಡಿದೆ. ಲಾಭ ಇಲ್ಲದೇ ಹೋದರೂ ನಷ್ಟವಿಲ್ಲದೇ ಸಂಸ್ಥೆಗಳು ಮುನ್ನಡೆಯಲಿವೆ ಎಂದು ಸಚಿವರು ವಿವರಿಸಿದರು.

ಶಕ್ತಿ ಯೋಜನೆ: 9.46 ಕೋಟಿ ಮಹಿಳೆಯರ ಪ್ರಯಾಣ

ಬೆಂಗಳೂರು: ರಾಜ್ಯ ಸರ್ಕಾರ 'ಶಕ್ತಿ' ಯೋಜನೆ ಜಾರಿ ಮಾಡಿದ ಬಳಿಕ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ 9,46 ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದು, ಟಿಕೆಟ್ ಮೌಲ್ಯ ₹ 222 ಕೋಟಿ ಆಗಿದೆ.

ಬುಧವಾರ ರಾತ್ರಿವರೆಗೆ ಕೆಎಸ್‌ಆರ್‌ಟಿಸಿಯಲ್ಲಿ 2.77 ಕೋಟಿ ಮಹಿಳೆಯರು ಪ್ರಯಾಣಿಸಿದ್ದು, ₹ 82.85 ಕೋಟಿ ಟಿಕೆಟ್ ಮೌಲ್ಯವಾಗಿದೆ. ಬಿಎಂಟಿಸಿಯಲ್ಲಿ 3.12 ಕೋಟಿ ಮಹಿಳೆಯರು ಪ್ರಯಾಣಿಸಿದ್ದಾರೆ. ₹ 39.13 ಕೋಟಿ ಟಿಕೆಟ್ ಮೌಲ್ಯ. ಎನ್‌ಡಬ್ಲ್ಯುಕೆಆರ್‌ಟಿಸಿಯಲ್ಲಿ 2.29 ಕೋಟಿ ಮಹಿಳೆಯರು ಸಂಚರಿಸಿದ್ದಾರೆ. ಟಿಕೆಟ್ ದರ ₹ 58.02 ಕೋಟಿ. ಕೆಕೆಆರ್‌ಟಿಸಿಯಲ್ಲಿ 1.26 ಕೋಟಿ ಮಹಿಳೆಯರು ಓಡಾಡಿದ್ದಾರೆ. ₹ 41.99 ಕೋಟಿ ಟಿಕೆಟ್ ಮೌಲ್ಯವಾಗಿದೆ.

BANKING PARTNER ಕೆನರಾ ಬ್ಯಾಂಕ್ Canara Bank A Government of India Undertaking Together We Can
ASSOCIATE SPONSORS Freedom Rice Bran Oil Prestige INSIGHTSIAS ಸದ್ಗುರು ಆಯುರ್ವೇದ GRAM FLOUR colorêssence Color your spirit
STYLE PARTNER BSC B.S. CHANNABASAPPA & SONS Since 1938
INDUSTRY BODIES & PARTNERS
AUDIT PARTNER EY

ಬಿರಾದಾರ್ 500*

ಕನ್ನಡ ಚಿತ್ರರಂಗದ ಹಿರಿಯ ನಟ, ಹಾಸ್ಯ ಕಲಾವಿದ ವೈಜನಾಥ್ ಬಿರಾದಾರ್ ನಾಯಕನಾಗಿ ನಟಿಸಿರುವ '90 ಬಿಡಿ ಮನೀಗ್ ನಡಿ' ಚಿತ್ರ ಇಂದು(ಜೂನ್ 30) ತೆರೆ ಕಾಣುತ್ತಿದೆ. ಇದು ಅವರ 500ನೇ ಚಿತ್ರ ಕೂಡ. ಹಲವು ಸಿನಿಮಾಗಳಲ್ಲಿ ತಟ್ಟೆ ಹಿಡಿದು ಹೊಟ್ಟೆ ತುಂಬ ನಗಿಸಿದ ಬಿರಾದಾರ್, ತಮ್ಮ ನಾಲ್ಕು ದಶಕಗಳ ಸುದೀರ್ಘ ಸಿನಿ ಪಯಣದ ಕೆಲ ನೆನಪುಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ...

ವಿನಾಯಕ ಕೆ.ಎಸ್.

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

• ನಿಮ್ಮ ಮೊದಲನೆ ಸಿನಿಮಾ? ಅದರ ನೆನಪುಗಳು?

ನನ್ನ ಮೊದಲ ಸಿನಿಮಾ 'ಬರ'. ಎಂ.ಎಸ್.ಸತ್ಯು ನಿರ್ದೇಶನದ ಚಿತ್ರದಲ್ಲಿ ಅನಂತನಾಗ್ ನಾಯಕರು. ಬಹುಶಃ 1979–80ರಲ್ಲಿರಬೇಕು. ಬೀದರ್‌ನಲ್ಲಿಯೇ ಚಿತ್ರೀಕರಣವಾಗಿತ್ತು. ನಾನಾಗ ರಂಗಭೂಮಿಯಲ್ಲಿದ್ದೆ. ಅವಕಾಶ ಕೇಳಿಕೊಂಡು ಹೋಗಿದ್ದಕ್ಕೆ ರೈತನ ಪಾತ್ರ ನೀಡಿದ್ದರು. ಅನಂತನಾಗ್ ಜಿಲ್ಲಾಧಿಕಾರಿ ಪಾತ್ರಧಾರಿಯಾಗಿದ್ದರು. ಅಲ್ಲಿಂದ ಶುರುವಾದ ಪಯಣ 500ನೇ ಸಿನಿಮಾಕ್ಕೆ ಬಂದು ನಿಂತಿದೆ.

• ನೀವು ನಾಯಕನಾಗಿ ನಟಿಸಿದ ಸಿನಿಮಾಗಳು? '90 ಬಿಡಿ...' ಸಿನಿಮಾದಲ್ಲಿ ನಿಮ್ಮ ಪಾತ್ರವೇನು?

ಗಿರೀಶ ಕಾಸರವಳ್ಳಿಯವರ 'ಕನಸೆಂಬೋ ಕುದುರೆಯನೇರಿ' ಚಿತ್ರದಲ್ಲಿ ನಾಯಕನಾಗಿ ನಟಿಸಿದೆ. ಅದಕ್ಕೆ ಅಂತರರಾಷ್ಟ್ರೀಯ ಪ್ರಶಸ್ತಿ ಲಭಿಸಿತ್ತು. ಅದಾದ ಬಳಿಕ '90 ಬಿಡಿ...' ಸಿನಿಮಾದಲ್ಲಿ ಮತ್ತೆ ನಾಯಕನ ಪಾತ್ರ ಸಿಕ್ಕಿದೆ. ಇದರಲ್ಲಿ ಅಗರಬತ್ತಿ ವ್ಯಾಪಾರಿ ಪಾತ್ರ ನನ್ನದು. ಅಗರಬತ್ತಿ ಮಾರಿಕೊಂಡು, ಊರೂರು ಅಲೆಯುತ್ತ ಇರುತ್ತೇನೆ. ಜೊತೆಗೆ ಕುಡಿಯುವ ಅಭ್ಯಾಸ ಇರುತ್ತದೆ.

• ಈ ಸಿನಿಪಯಣದಲ್ಲಿ ನಿಮಗೆ ಅದ್ಭುತ ಎನ್ನಿಸಿದ ನಿರ್ದೇಶಕರು ಯಾರು?

ಎಂ.ಎಸ್. ಸತ್ಯು ಮೊದಲು ಅವಕಾಶ ಕೊಟ್ಟವರು. ಕಾಶಿನಾಥ್, ಶಂಕರ್‌ನಾಗ್, ಉಪೇಂದ್ರ... ಹೀಗೆ ಪಟ್ಟಿ ದೊಡ್ಡದಿದೆ. ಸಾಕಷ್ಟು ನಿರ್ದೇಶಕರಿಂದ ಕೆಲಸ ಕಲಿತಿದ್ದೇನೆ. ಒಬ್ಬೊಬ್ಬ ನಿರ್ದೇಶಕರ ಕಾರ್ಯವೈಖರಿಯೂ ಭಿನ್ನವಾಗಿರುತ್ತದೆ. ಹೀಗಾಗಿ ಪ್ರತಿ ನಿರ್ದೇಶಕರ ಜೊತೆಗಿನ ಕೆಲಸವೂ ಬೇರೆಯದೇ ಆಗಿರುತ್ತದೆ.

• ನಿಮ್ಮ ಬದುಕಿನ ಟರ್ನಿಂಗ್ ಪಾಯಿಂಟ್ ಎನ್ನುವಂತಹ ಸಿನಿಮಾಗಳು ಯಾವುವು?

'ಶಂಖನಾದ' ನನ್ನ ಎರಡನೆ ಚಿತ್ರ. ಟರ್ನಿಂಗ್ ಪಾಯಿಂಟ್ ಎಂದರೆ, 'ಲವ್ ಟ್ರೈನಿಂಗ್ ಸ್ಕೂಲ್' ಚಿತ್ರದಲ್ಲಿನ ಭಿಕ್ಷುಕನ ಪಾತ್ರ. ಬಿ.ರಾಮಮೂರ್ತಿ ನಿರ್ದೇಶನದಲ್ಲಿ ಉಪೇಂದ್ರ ಹೇಳಿದ್ದರಿಂದ ಲಭಿಸಿದ ಪಾತ್ರ ಅದು. ಕಾಶಿನಾಥ್ ನಾಯಕರಾಗಿದ್ದ ಈ ಸಿನಿಮಾ ನನಗೆ ಸಾಕಷ್ಟು ಜನಪ್ರಿಯತೆ ನೀಡಿತು. ಅಲ್ಲಿಂದ ಒಂದು ರೀತಿಯಲ್ಲಿ ಚಿತ್ರೋದ್ಯಮದಲ್ಲಿ ಭಿಕ್ಷುಕನ ಪಾತ್ರಕ್ಕೆ ಮೊದಲ ಆಯ್ಕೆಯಂತಾದೆ. 'ಓ ಮಲ್ಲಿಗೆ', 'ದನ ಕಾಯೋನು', 'ಟೋಪಿವಾಲಾ', 'ಹುಲಿಯಾ', 'ಅಜಗಜಾಂತರ', 'ಅಳಿಯ ಅಲ್ಲ ಮಗಳ ಗಂಡ', 'ಮಠ' ಮೊದಲಾದ ಚಿತ್ರಗಳಲ್ಲಿ ಉತ್ತಮ ಪಾತ್ರ ಲಭಿಸಿ, ಜನ ಗುರುತಿಸಿದರು.

• ನಿಮಗೆ ಮಾಡಲೇಬೇಕೆಂಬ ಕನಸಿದ್ದು, ಇಲ್ಲಿವರೆಗೂ ಮಾಡಲಿಕ್ಕೆ ಆಗದ ಪಾತ್ರ?

ವಿಲನ್ ಪಾತ್ರ. ಈವರೆಗೆ ಸಿಕ್ಕಿಲ್ಲ. ಹಾಸ್ಯಮಯ ಖಳನಾಯಕನಾಗಿರಬಹುದು ಅಥವಾ ರೌದ್ರಾವತಾರದ ಖಳನಾಯಕ ಇರಬಹುದು. ಅದೊಂದು ಪಾತ್ರ ಮಾಡಬೇಕೆಂಬ ಆಸೆ ಇದೆ. ಇಲ್ಲಿ ಒಂದೇ ರೀತಿಯ ಪಾತ್ರ, ಒಂದೇ ರೀತಿಯ ಹಾಸ್ಯದಿಂದ ಉಳಿದುಕೊಳ್ಳಲು ಸಾಧ್ಯವಿಲ್ಲ ಎಂಬುದು ಗೊತ್ತಾಯಿತು. ಹೀಗಾಗಿ ಭಿನ್ನವಾದ ಪಾತ್ರಗಳನ್ನು ಮಾಡುತ್ತ ಹೋದೆ. ಅಂಗವಿಕಲ, ಕುರುಡ ಹೀಗೆ ಬೇರೆ ಬೇರೆ ರೀತಿಯ ಹಾಸ್ಯ ಪಾತ್ರಗಳನ್ನು ಮಾಡಿರುವೆ. ❖

ಸ್ವಾನುಭವದ 'ಸ್ಫೋಟ' ಈ ಟೋಬಿ



ರಾಜ್ ಬಿ.ಶೆಟ್ಟಿ

ನಟ ರಾಜ್ ಬಿ.ಶೆಟ್ಟಿ 'ಟೋಬಿ'ಯಾಗಿ ಪ್ರೇಕ್ಷಕರೆದುರಿಗೆ ಬರಲು ಸಜ್ಜಾಗಿದ್ದಾರೆ. 'ಶಿವ'ನಾಗಿ ತೆರೆಯಲ್ಲಿ ತಾಂಡವವಾಡಿದ್ದ ರಾಜ್, ಇದೀಗ ತಮ್ಮೊಳಗಿದ್ದ ಸಿಟ್ಟಿಗೆ 'ಅನ್ಯಾಯ'ವಾಗಬಾರದು ಎಂದು ಅದಕ್ಕೆ ಸಿನಿಮಾ ರೂಪ ನೀಡಿದ್ದಾರೆ. 'ಟೋಬಿ' ಫಸ್ಟ್ ಲುಕ್ ಬಿಡುಗಡೆಯಾಗಿದ್ದು, ಇದೇ ಆ.25ಕ್ಕೆ ಸಿನಿಮಾ ತೆರೆಕಾಣಲಿದೆ. ಈ ಹೊಸ್ತಿಲಲ್ಲಿ ಅವರೊಂದಿಗೊಂದು ಮಾತುಕತೆ...

• ಹಳೆಯ ಕಥೆಗೆ ಹೊಸ ಸ್ಪರ್ಶ ಸಿಕ್ಕಿದ್ದು ಹೇಗೆ?

ಸೇಡಿನ ಕಥನ 'ಟೋಬಿ'. ಇಲ್ಲಿ ಸಂಬಂಧಕ್ಕೂ ಪ್ರಾಮುಖ್ಯವಿದೆ. ನಮ್ಮ 'ಲಾಫಿಂಗ್ ಬುದ್ಧ' ನಿರ್ಮಾಣ ಸಂಸ್ಥೆಯಡಿ ಯಾವುದೇ ಮಾಸ್ ಜಾನರ್ ಸಿನಿಮಾವನ್ನು ಮಾಡಿರಲಿಲ್ಲ. ಕಂಟೆಂಟ್ ಸಿನಿಮಾ ಮಾಡಿ, ಮಾಸ್ ಟಚ್ ನೀಡಿದರೆ ಯಾವ ರೀತಿ ಇರಬಹುದು ಎನ್ನುವ ಆಲೋಚನೆ ನಮ್ಮಲ್ಲಿತ್ತು. ಅದಕ್ಕೇ ಈ ಕಥೆಯನ್ನು ಆಯ್ಕೆ ಮಾಡಿಕೊಂಡೆವು. ಟಿ.ಕೆ.ದಯಾನಂದ್ ಅವರು ಮೂಲಕಥೆ ಬರೆದಿದ್ದರು. ಅದರಲ್ಲಿರುವ ಪಾತ್ರ ಮತ್ತು ಕೆಲವು ವಿಷಯಗಳನ್ನು ಇಟ್ಟುಕೊಂಡು 'ಟೋಬಿ'ಗೆ ಹೊಸ ರೂಪ ನೀಡಿದೆ. ಮೂಲಕಥೆಯಲ್ಲಿನ ಪಾತ್ರವನ್ನು ಹೊರತುಪಡಿಸಿ ಬೇರೆಲ್ಲವೂ ನನ್ನ ಬರವಣಿಗೆಯಲ್ಲಿ ಬದಲಾವಣೆ ಕಂಡಿದೆ. ಚಿತ್ರಮಂದಿರಕ್ಕೆ ಜನರನ್ನು ಕರೆದು ತರುವ ದೊಡ್ಡ ಸವಾಲು ಸದ್ಯ ನಮ್ಮಲ್ಲಿದೆ. ಜನರನ್ನು ಸೆಳೆಯುವ ಸಿನಿಮಾಗಳನ್ನು ಮಾಡಬೇಕು. 'ಟೋಬಿ' ಅಂತಹ ಪ್ರಯತ್ನ.



ಟೋಬಿ
ರಾಜ್ ಬಿ.ಶೆಟ್ಟಿ

ಸಂಪೂರ್ಣ ಸಂದರ್ಶನ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

• 'ಟೋಬಿ' ನಿರ್ದೇಶನಕ್ಕೆ ಯಾಕೆ ಕೈಹಾಕಲಿಲ್ಲ?

ಈ ಸಿನಿಮಾವನ್ನು ಒಂದು ತಂಡವಾಗಿ ಮಾಡಬೇಕು ಎಂದು ಮೊದಲೇ ನಿರ್ಧರಿಸಿದ್ದೆವು. 'ಟೋಬಿ'ಯನ್ನು ನಾನೇ ನಿರ್ದೇಶನ ಮಾಡಬೇಕಿತ್ತು. ಆದರೆ ಈ ಸಂದರ್ಭದಲ್ಲಿ ನಾನು 'ಸ್ವಾತಿ ಮುತ್ತಿನ ಮಳೆ ಹನಿಯೇ' ಸಿನಿಮಾ ನಿರ್ದೇಶಿಸುತ್ತಿದ್ದೆ. ಈ ಹಂತದಲ್ಲೇ 'ಟೋಬಿ' ಚಿತ್ರದ ಪ್ರೀಪ್ರೊಡಕ್ಷನ್ ಕೆಲಸ ಆರಂಭವಾಗಬೇಕಿತ್ತು. ಅದಕ್ಕಾಗಿ ಈ ಕಾರ್ಯವನ್ನು ನನ್ನದೇ ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕನಾಗಿ ದುಡಿದ ಬಾಸಿಲ್‌ಗೆ ನೀಡಿದೆ. ನಮ್ಮದೇ ಸ್ಕೂಲ್‌ನ ವಿದ್ಯಾರ್ಥಿ ಇವನಾಗಿರುವ ಕಾರಣ, ನಮಗೆ ಯಾವ ರೀತಿ ಸಿನಿಮಾ ಬೇಕು ಅದೇ ರೀತಿ ಸಿನಿಮಾ ಆಗುತ್ತದೆ ಎನ್ನುವ ವಿಶ್ವಾಸವೂ ನನ್ನಲ್ಲಿತ್ತು.

• ಪಾತ್ರಗಳಲ್ಲಿನ ಪ್ರಯೋಗದ ಬಗ್ಗೆ ಹೇಳಿ...

ಒಂದೇ ರೀತಿಯ ಪಾತ್ರಗಳು ಅಥವಾ ಜಾನರ್ ನನಗೆ ಬೇಗನೆ ಬೋರ್ ಹೊಡೆಸುತ್ತವೆ. ಒಂದು ಸಿನಿಮಾ, ಮೊದಲು ನನಗೆ ಮನರಂಜನೆ ನೀಡಬೇಕು. ಹಾಗಿದ್ದರಷ್ಟೇ ಪ್ರೇಕ್ಷಕನಿಗೂ ಮನರಂಜನೆ ನೀಡುವ ಸಾಮರ್ಥ್ಯವನ್ನು ಆ ಸಿನಿಮಾ ಹೊಂದಿದೆ ಎಂದರ್ಥ. ಈ ಪ್ರಯತ್ನ ಬೇರಾರಿಗೂ ಅಲ್ಲ. ಇವೆಲ್ಲವೂ ನನಗಾಗಿ. 'ಒಂದು ಮೊಟ್ಟೆಯ ಕಥೆ' ಮಾಡಿದ ಸಂದರ್ಭದಲ್ಲಿ ನನ್ನನ್ನು ಅದೇ ರೀತಿಯ ಪಾತ್ರದಲ್ಲಿ ಜನ ಕಾಣಲಿಚ್ಛಿಸಿದರು. ಆದರೆ, ಹೊಸ ಬರವಣಿಗೆ ಮುಖಾಂತರ, ಹೊಸ ರಾಜ್ ಸೃಷ್ಟಿಸಿ ಅವರನ್ನು ನಂಬಿಸಿದ್ದು ನಾನೇ ಅಲ್ಲವೇ. ಬರವಣಿಗೆ ಗಟ್ಟಿಯಾಗಿರಬೇಕಷ್ಟೇ.

• 'ಟೋಬಿ'ಯ ಸವಾಲು...

ಬೇರೆ ಎಲ್ಲ ಸಿನಿಮಾಗಳಿಗೆ ಹಾಕಿದ್ದ ಒಟ್ಟು ಪ್ರಯತ್ನವನ್ನು ಇದೊಂದೇ ಸಿನಿಮಾಗೆ ನಾನು ಹಾಕಿದ್ದೇನೆ. 'ಇನ್ನು ಜೀವಮಾನದಲ್ಲಿ ನಾನು ನಿಮ್ಮ ಜೊತೆ ಸಿನಿಮಾ ಮಾಡಲ್ಲ' ಎನ್ನುವಷ್ಟರ ಮಟ್ಟಿಗೆ ನನ್ನ ತಂಡಕ್ಕೆ ಕೈಮುಗಿದು ಹೇಳಿದ್ದೆ. 'ಟೋಬಿ'ಯಲ್ಲಿರುವ ನನ್ನ ನಟನೆ, 'ಗರುಡ ಗಮನ ವೃಷಭ ವಾಹನ' ಸಿನಿಮಾದಲ್ಲಿನ ಪಾತ್ರಕ್ಕಿಂತಲೂ ಸವಾಲಿನಿಂದ ಕೂಡಿತ್ತು. 'ಶಿವ'ನಿಗಿಂತಲೂ 'ಟೋಬಿ' ಹೆಚ್ಚು ಸವಾಲನ್ನೊಡ್ಡಿತ್ತು. ಪಾತ್ರದೊಳಗಿನ ಭಾವನೆ, ತೀವ್ರತೆ ನನ್ನನ್ನು ಕಾಡಿತು, ಸ್ಪರ್ಧೆಗೊಡ್ಡಿತ್ತು. ದೊಡ್ಡ ಬಜೆಟ್‌ನ ಸಿನಿಮಾ ಮಾಡುವಾಗ ಸವಾಲುಗಳು ಹೆಚ್ಚುತ್ತಲೇ ಹೋಗುತ್ತವೆ. ಕಲಾವಿದರನ್ನು ನಿರ್ವಹಿಸುವುದು, ಸಾಹಸ ದೃಶ್ಯಗಳನ್ನು ಸಂಯೋಜಿಸುವುದು, ಅದರ ಜೊತೆಗೆ ನಟನೆ, ತಂಡಕ್ಕೆ ಗೈಡ್ ಮಾಡುವುದು ಹೀಗೆ ಎಲ್ಲ ಹೊರೆಗಳು ನನ್ನ ಮೇಲೆ ಬಿದ್ದಾಗ ನನ್ನ ಪಾತ್ರದೊಳಗಿನ ಸಿಟ್ಟು ತಂಡದ ಮೇಲೆ ಹೋಗುತ್ತಿತ್ತು. ದೈಹಿಕವಾಗಿ, ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಒಂದು ಸಿನಿಮಾ ನಿಮ್ಮನ್ನು ಪುಶ್ ಮಾಡಿದರೆ, ಆ ಸಿನಿಮಾ ಒಂದು ಗಡಿಯನ್ನು ಮೀರಿ ಹೋಗುತ್ತದೆ. ಜನರಿಗೂ ಹತ್ತಿರವಾಗುತ್ತದೆ. 'ಟೋಬಿ' ಅಂತಹ ಅನುಭವ ನೀಡಿದೆ.

• 'ಟೋಬಿ'ಗೆ ನಿರ್ದೇಶಕನಾಗದೇ ಇದ್ದ ಸವಾಲು...

ಖಂಡಿತವಾಗಿಯೂ ಇದನ್ನು ನಾನು ಚಿತ್ರೀಕರಣದ ಸಂದರ್ಭದಲ್ಲಿ ಅನುಭವಿಸಿದ್ದೇನೆ. ಚಿತ್ರವನ್ನು ಬರೆದಿದ್ದು ನಾನೇ ಅಲ್ಲವೇ. ಅದರ ಕಲ್ಪನೆ ನನ್ನದು, ದೃಶ್ಯಗಳು ಯಾವ ರೀತಿ ಬರಬೇಕು ಎನ್ನುವುದು ನನಗೆ ಗೊತ್ತಿತ್ತು. ಈ ರೀತಿಯಲ್ಲೇ ನಾನು ತಂಡವನ್ನು ಪುಶ್ ಮಾಡುತ್ತಿದ್ದೆ. ಅದು ತಂಡಕ್ಕೆ ಇನ್ನೂ ಕಷ್ಟವಾಗತೊಡಗಿತು. ನಾನು ನಿರ್ದೇಶಕನಾದರೆ, ನನ್ನ ನಿರ್ದೇಶನ ತಂಡ ಸಂಪೂರ್ಣ ನನ್ನ ಮೇಲೆಯೇ ನಂಬಿಕೆ ಇಡುತ್ತಿತ್ತು. 'ರಾಜಣ್ಣ ಮಾಡ್ತಾರೆ ಬಿಡು..' ಎನ್ನುತ್ತಿದ್ದರು. 'ಯಾವಾಗಲೂ ಕಷ್ಟ ಕೊಡ್ತೀರಲ್ವ' ಎಂದು ಈ ಬಾರಿ ಸಂಪೂರ್ಣ ಜವಾಬ್ದಾರಿಯನ್ನು ಅವರ ಮೇಲೆ ಹಾಕಿ ನಾನು ಕೆಲಸ ಮಾಡಿದೆ. ಇದರಿಂದಾಗಿ 'ಟೋಬಿ' ಆಯ್ತು.

• ಯಾವುದು ನಿಮ್ಮೊಳಗಿನ ಆ ಸಿಟ್ಟು?

ಪ್ರತಿ ಕಥೆಯೂ ಅನುಭವಗಳಿಂದಲೇ ಹುಟ್ಟಿಕೊಳ್ಳುತ್ತವೆ. 'ಒಂದು ಮೊಟ್ಟೆಯ ಕಥೆ' ನನ್ನದೇ ಅನುಭವದ ಕಥೆ. 'ಗರುಡ ಗಮನ...' ವ್ಯಕ್ತಿಯೊಬ್ಬನಿಗೆ ಹೆಸರು ಬಂದ ತಕ್ಷಣ ಹೇಗೆ ಬದಲಾಗುತ್ತಾನೆ, ಸಂಬಂಧಗಳು ಹೇಗೆ ಬದಲಾಗುತ್ತವೆ ಎಂಬುವುದಾಗಿತ್ತು. ಇದೂ ಅನುಭವವೇ. 'ಟೋಬಿ' ಸಿನಿಮಾ ಮಾಡಬೇಕಾದರೂ ಅದರ ಹಿಂದೆ ಅನುಭವವಿತ್ತು. ಅದನ್ನು ನಾನಿಲ್ಲಿ ಹೇಳಲಿಚ್ಛಿಸುವುದಿಲ್ಲ. ಆ ಅನುಭವಕ್ಕೆ ಒಂದು ತೀಕ್ಷ್ಣವಾದ ಸಿಟ್ಟು ಇತ್ತು. ಆ ಸಿಟ್ಟು ಅನ್ಯಾಯವಾಗಿ ವ್ಯರ್ಥ ಆಗುವುದು ನನಗೆ ಇಷ್ಟವಿರಲಿಲ್ಲ. ಈ ಸಿಟ್ಟು ಸುಂದರವಾಗಿ ಒಂದು ಸಿನಿಮಾದ ರೂಪ ಪಡೆಯಬಹುದು, ಪಾತ್ರಗಳಲ್ಲೇ ಈ ಸಿಟ್ಟು ಹಾಕಬಹುದು ಎಂದೆನಿಸಿತು. ತುಂಬಾ ಕೆಣಕಿದ್ರೆ ಕುರಿಯೂ ಗುದ್ದಲು ಪ್ರಾರಂಭಿಸುತ್ತದೆ. (ನಗುತ್ತಾ) ಈ ಐಡಿಯಾ ಕೊಟ್ಟವರಿಗೆಲ್ಲಾ ತುಂಬಾ ಥ್ಯಾಂಕ್ಸ್! ❖

'ನಾನು ಕುಸುಮ' ಇಂದು ತೆರೆಗೆ

ಲೇಖಕ ಬೆಸಗರಹಳ್ಳಿ ರಾಮಣ್ಣ ಅವರ ಕಥೆಯನ್ನು ಆಧರಿಸಿ ತಯಾರಾಗಿರುವ, ಕೃಷ್ಣೇ ಗೌಡ ಅವರು ನಿರ್ಮಿಸಿ, ನಿರ್ದೇಶಿಸಿರುವ 'ನಾನು ಕುಸುಮ' ಸಿನಿಮಾ ಇಂದು (ಜೂನ್ 30) ತೆರೆಕಂಡಿದೆ.

ಸರ್ಕಾರಿ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡುವ ಹುಡುಗಿಯೊಬ್ಬಳು ಅಲ್ಲಿ ಏನೇನು ಶೋಷಣೆಗಳನ್ನು ಅನುಭವಿಸುತ್ತಾಳೆ ಎನ್ನುವುದರ ಸುತ್ತ ಸಿನಿಮಾದ ಕಥಾಹಂದರವಿದೆ. ಗ್ರೀಷ್ಮಾ ಶ್ರೀಧರ್, ಸನಾತನಿ ಜೋಶಿ, ಕಾವ್ಯಾ ಶ್ರೀಧರ್, ಕೃಷ್ಣೇಗೌಡ, ಸೌಮ್ಯ ಭಾಗವತ್, ಪ್ರತಿಭ ಸಂಶಿಮಠ್, ವಿಜಯ್ ಮೊದಲಾದವರು ಸಿನಿಮಾದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. '14ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ'ದಲ್ಲಿ ಪ್ರದರ್ಶನಗೊಂಡು ಅತ್ಯುತ್ತಮ ಕನ್ನಡ ಚಿತ್ರ(ಪ್ರಥಮ) ಪ್ರಶಸ್ತಿಯನ್ನು ಈ ಸಿನಿಮಾ ಬಾಚಿಕೊಂಡಿತ್ತು. ❖

'ನಾಯಕರೆಲ್ಲ ಸ್ನೇಹಿತರಾಗಲಿ'

ನಟ ಸುದೀಪ್ ವೇದಿಕೆಯಲ್ಲಿ ಭಾವುಕರಾಗಿ, ಉದ್ಯಮಕ್ಕೆ ಉಪಯುಕ್ತವಾಗಬಲ್ಲ ಒಂದಷ್ಟು ನೀತಿಪಾಠ ಹೇಳಿದರು. ಇದಕ್ಕೆಲ್ಲ ಕಾರಣವಾಗಿದ್ದು ಸುದೀಪ್ ಅಳಿಯ ಸಂಚಿತ್ ಸಂಜೀವ್ ನಿರ್ದೇಶನ ಹಾಗೂ ನಟನೆಯ 'ಜಿಮ್ಮಿ' ಚಿತ್ರದ ಶೀರ್ಷಿಕೆ, ಪಾತ್ರದ ಅನಾವರಣ ಸಮಾರಂಭ. ತಮ್ಮ ಅಕ್ಕನ ಮಗ ಸಂಚಿತ್ ಅವರನ್ನು ತಮ್ಮದೇ ನಿರ್ಮಾಣ ಸಂಸ್ಥೆಯಿಂದ ಸುದೀಪ್ ಚಿತ್ರರಂಗಕ್ಕೆ ಪರಿಚಯಿಸಿದ್ದಾರೆ.

'ಕನ್ನಡ ಚಿತ್ರರಂಗ ಇಲ್ಲಿವರೆಗೂ ಜೀವಂತವಾಗಿದೆ ಎಂದರೆ, ಅದಕ್ಕೆ ಅನೇಕರ ಕೊಡುಗೆ ಇದೆ. ಇಂತಹ ಚಿತ್ರರಂಗವನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ಇಂದಿನ ಹೊಸಬರ ಮೇಲಿದೆ. ದಯವಿಟ್ಟು ಇಂದಿನ ಹೊಸ ನಾಯಕರೆಲ್ಲ ಪರಸ್ಪರ ಸ್ನೇಹಿತರಾಗಿರಿ. ಒಬ್ಬರಿಗೊಬ್ಬರ ಸಹಕಾರವಿರಲಿ. ಆರೋಗ್ಯಯುತ ಪೈಪೋಟಿ ಇರಲಿ' ಎಂದು ಸುದೀಪ್ ವೇದಿಕೆ ಮೂಲಕ ಅಳಿಯನಿಗೆ ಕಿವಿಮಾತು ಹೇಳಿದರು.

ನಟ ಶಿವರಾಜ್‌ಕುಮಾರ್ ಹಾಗೂ ರವಿಚಂದ್ರನ್, ಸಂಚಿತ್ ಅವರನ್ನು ವೇದಿಕೆ ಪರಿಚಯಿಸಿ ಶುಭ ಹಾರೈಸಿದರು. ಶಿವರಾಜ್ ಕುಮಾರ್ ಮಾತನಾಡಿ, 'ಎಸ್' ಕುಟುಂಬಕ್ಕೆ ಸಂಚಿತ್ ಅವರನ್ನು ಸ್ವಾಗತಿಸಿದರು. ಅದಕ್ಕೆ ಹಾಸ್ಯಮಯವಾಗಿ ಪ್ರತಿಕ್ರಿಯಿಸಿದ ರವಿಚಂದ್ರನ್, ಹಾಗಿದ್ದರೆ ಇಲ್ಲಿ 'ಆರ್' ಕುಟುಂಬಕ್ಕೆ ಕೆಲಸವಿಲ್ಲ ಎಂದು ಸಭೆಯನ್ನು ನಗೆಗಡಲಿನಲ್ಲಿ ತೇಲಿಸಿದರು. ಸೋಲದ ಶಿವಣ್ಣ 'ಆರ್' ಕುಟುಂಬದಿಂದಲೇ ನಾವೆಲ್ಲ ಬಂದಿದ್ದು. 'ಆರ್' ನಂತರವೇ 'ಎಸ್' ಎಂದರು. ಸುಪ್ರಿಯಾನ್ವಿ ಜೊತೆಗೆ ಈ ಚಿತ್ರಕ್ಕಾಗಿ ಲಹರಿ ಫಿಲ್ಮ್ಸ್ ಹಾಗೂ ಕೆ.ಪಿ.ಶ್ರೀಕಾಂತ್ ನಿರ್ಮಾಪಕರಾಗಿ ಕೈ ಜೋಡಿಸಿದ್ದಾರೆ. ❖

ಸಂಚಿತ್ ಹಾಗೂ ಸುದೀಪ್

ಗಾಳಿಪಟದ ನೂಲಿನ ಕಥೆ

ಮಂಜ, ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಹುಡುಗ. ಅಪ್ಪನಿಲ್ಲದೆ, ಅಮ್ಮನ ನೆರಳಿನಲ್ಲಿ ಬೆಳೆಯುವ ಮಂಜನಿಗೆ ಗಾಳಿಪಟದೊಂದಿಗೆ ಆಡುವ ಆಸೆ. ಹುಡುಗರೆಲ್ಲ ಸೇರಿ ಗಾಳಿಪಟ ಸ್ಪರ್ಧೆಗೆ ಹೋಗಲು ಅಣಿಯಾಗುತ್ತಾರೆ. ಪರೀಕ್ಷೆಯಲ್ಲಿ ಉತ್ತಮ ಅಂಕ ಬಂದರೆ ಮಾತ್ರ ಸ್ಪರ್ಧೆಗೆ ಹೋಗಬಹುದೆಂದು ಅಮ್ಮ ಷರತ್ತು ವಿಧಿಸುತ್ತಾಳೆ. ಅಮ್ಮನ ಆಣತಿಯಂತೆ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸುತ್ತಾನೆ. ಅದೇ ಖುಷಿಯಲ್ಲಿ ಮನೆಗೆ ಬರುವ ಹುಡುಗನಿಗೆ ಗಾಳಿಪಟದ ನೂಲು ಹೇಗೆ ಮುಳುವಾಗುತ್ತದೆ ಎಂಬ ಚಿಕ್ಕ ಕಥೆಯೊಂದಿಗೆ ದೊಡ್ಡ ಸಂದೇಶವುಳ್ಳ ಕಿರುಚಿತ್ರ ಮುಗಿಯುವ ಹೊತ್ತಿಗೆ ಪ್ರೇಕ್ಷಕನನ್ನು ಮೌನಿಯಾಗಿಸುತ್ತದೆ.

ಅಮ್ಮನಾಗಿ ಕಿರುತೆರೆ ನಟಿ ಆಶಾ ಸುಜಯ್, ಮಂಜನಾಗಿ ಮಾಸ್ಟರ್ ಚಿನ್ಮಯ್ ಅಲ್ಲಲ್ಲಿ ನಗು ಮೂಡಿಸಿ, ಕೊನೆಯಲ್ಲಿ ಅಳಿಸುತ್ತಾರೆ. ಹರ್ಷಿತ್ ಆನಂದ್ ಈ ಕಿರುಚಿತ್ರದ ನಿರ್ದೇಶಕರು. ಸಂದೇಶ ಮಾತ್ರವಲ್ಲದೇ ತಾಂತ್ರಿಕವಾಗಿಯೂ ಚಿತ್ರವನ್ನು ಉತ್ತಮವಾಗಿಸಿರುವ ಹರ್ಷಿತ್ ಈ ಚಿತ್ರದೊಂದಿಗೆ ಭರವಸೆ ಮೂಡಿಸುತ್ತಾರೆ. ಸತ್ಯ ರಾಧಾಕೃಷ್ಣ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ದೇವದತ್ ಅವರ ಛಾಯಾಚಿತ್ರಗ್ರಹಣ ಮತ್ತು ಸಂಕಲನ ಚಿತ್ರಕ್ಕಿದೆ. ಗಾಳಿಪಟದ ನೂಲಿನಿಂದಾಗುವ ಅನಾಹುತಗಳನ್ನು ಪರಿಚಯಿಸುವುದೇ ಈ ಕಿರುಚಿತ್ರದ ಉದ್ದೇಶ. ಗಾಳಿಪಟದ ನೂಲಾಗಿ ಬಳಸುವ ಮಾಂಜಾದಿಂದಾಗಿರುವ ಒಂದಷ್ಟು ನೈಜ ಘಟನೆಗಳ ಕುರಿತು ಚಿತ್ರದ ಕೊನೆಯಲ್ಲಿ ಅಂಕಿಅಂಶ ನೀಡಲಾಗಿದೆ. ಹಕ್ಕಿಗಳಿಗೆ ಈ ನೂಲು ಹೇಗೆ ಉರುಳಾಗುತ್ತಿದೆ ಎಂಬುದನ್ನು ವಿವರಿಸಲಾಗಿದೆ. ಆರ್ಕ್ ಎನ್‌ಜಿಒ ಈ ಚಿತ್ರದ ಪ್ರಚಾರಕ್ಕೆ ಕೈಜೋಡಿಸಿದೆ. ಚಿತ್ರ ಈಗಾಗಲೇ ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ಕಿರುಚಿತ್ರ ಸ್ಪರ್ಧೆಗಳಲ್ಲಿ ಬಹುಮಾನವೂ ಲಭಿಸಿದೆ. ❖

ಹೊಸಬರ 'ಮಾಂಕ್ ದಿ ಯಂಗ್'

ಬಹುತೇಕ ಹೊಸಬರೇ ಸೇರಿ ನಿರ್ಮಿಸಿರುವ 'ಮಾಂಕ್ ದಿ ಯಂಗ್' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕುತೂಹಲಕಾರಿಯಾದ ಕೌಟುಂಬಿಕ ಕಥೆ ಹೊಂದಿರುವ ಚಿತ್ರಕ್ಕೆ ಮಾಸ್ಚಿತ್ ಸೂರ್ಯ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಚಿತ್ರೀಕರಣ ಮುಕ್ತಾಯಗೊಂಡಿದೆ. ಅಂತಿಮ ಹಂತದ ಕೆಲಸ ನಡೆಯುತ್ತಿದ್ದು, ಮೂರು ತಿಂಗಳಲ್ಲಿ ಚಿತ್ರ ತೆರೆಗೆ ಬರಲಿದೆ. ಪ್ರೇಕ್ಷಕ ಕೊಟ್ಟ ದುಡ್ಡಿಗೆ ಮೋಸವಾಗದಂತಹ ಚಿತ್ರ ಮಾಡಿದ್ದೇವೆ ಎಂಬ ನಂಬಿಕೆಯಿದೆ' ಎಂದರು ನಿರ್ದೇಶಕ ಸೂರ್ಯ.

'ನಾವು ಸೀಮಿತವಾದ ಜೀವನ ನಡೆಸುತ್ತಿರುತ್ತೇವೆ. ಆದರೆ ಅದರ ಆಚೆ ಬಂದು ನೋಡಿದಾಗ ಬೇರೆಯದೇ ಜೀವನ ಇದೆ. ಹಾಗೆ ನಮ್ಮ ಚಿತ್ರವೂ ಭಿನ್ನ. ನಾನು ಹಾಗೂ ಮಾಸ್ಚಿತ್ ಸೂರ್ಯ ಮೊದಲು ಸಣ್ಣದಾಗಿ ಈ ಚಿತ್ರ ಆರಂಭ ಮಾಡಿದ್ದೆವು. ಆನಂತರ ನಾಲ್ಕು ಜನ ನಿರ್ಮಾಪಕರು ಜೊತೆಯಾದರು. ನಾನು ಕೂಡ ಈ ಚಿತ್ರದ ನಿರ್ಮಾಪಕರಲ್ಲಿ ಒಬ್ಬ. ಹಾಗೆಯೇ ನಾಯಕ ಕೂಡ' ಎಂದು ನಾಯಕ ಸರೋವರ್ ತಿಳಿಸಿದರು.

ಚಿತ್ರಕ್ಕೆ ಐದು ಜನ ನಿರ್ಮಾಪಕರಾಗಿದ್ದು, ಇವರೆಲ್ಲರೂ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಸೌಂದರ್ಯ ಗೌಡ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಧನುಷ್ ಎಲ್. ಸಂಕಲನ, ಸ್ವಾಮಿನಾಥನ್ ಸಂಗೀತ ಈ ಚಿತ್ರಕ್ಕಿದೆ. ❖

ಸೌಂದರ್ಯ ಗೌಡ

ಜುಲೈ 2ಕ್ಕೆ ಸ್ಟಾರ್ ಸುವರ್ಣ ವಾಹಿನಿಯಲ್ಲಿ 'ಸಿನಿ ಸಮ್ಮಾನ'

ತಾರೆಯರ ಸಮಾಗಮ. ಸಾಂಸ್ಕೃತಿಕ ಕಾರ್ಯಕ್ರಮಗಳ ರಸಾನುಭವ. ಹಿರಿಯರಿಂದ ಹೊಸಬರವರೆಗೆ ಪ್ರಶಸ್ತಿಯ ಗರಿ ಮೂಡಿಸಿಕೊಂಡವರ ಸಂಭ್ರಮ... 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಕಾರ್ಯಕ್ರಮ ಇಂತಹ ಹಲವು ಕ್ಷಣಗಳನ್ನು ಮೊಗೆದು ಕೊಟ್ಟಿತ್ತು. ಅದರ ಸಾರಸತ್ವವನ್ನು ಕಿರುತೆರೆಯ ಮೇಲೆ ನೋಡುವ ಅವಕಾಶ ಇದೇ ಜುಲೈ 2 ರಂದು ಸಂಜೆ 6.30ಕ್ಕೆ ರಾಜ್ಯದ ಪ್ರೇಕ್ಷಕರಿಗೆ. ಸ್ಟಾರ್ ಸುವರ್ಣ ವಾಹಿನಿಯಲ್ಲಿ ಈ ಕಾರ್ಯಕ್ರಮ ಪ್ರಸಾರವಾಗಲಿದೆ.

ಪ್ರಜಾವಾಣಿ@75 ಸಂಭ್ರಮದ ಅಂಗವಾಗಿ ಇತ್ತೀಚೆಗಷ್ಟೇ ಪ್ರೆಸ್ಟೀಜ್ ಶ್ರೀಹರಿಖೋಡೆ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಕೇಂದ್ರದಲ್ಲಿ ಚೊಚ್ಚಲ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಸಮಾರಂಭ ನಡೆದಿತ್ತು. ಬದುಕಿನ ಅಮೃತ ವರ್ಷ ಆಚರಿಸಿಕೊಂಡಿರುವ ಕನ್ನಡದ ಬಹುಮುಖ ಪ್ರತಿಭೆ ಅನಂತನಾಗ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಗೌರವಿಸಿದ್ದರು. ಈ ಕ್ಷಣಕ್ಕೆ ಚಿತ್ರರಂಗ, ಸಾಹಿತ್ಯ, ರಾಜಕೀಯ ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರು ಸಾಕ್ಷಿಯಾಗಿದ್ದರು.

2022ರಲ್ಲಿ ತೆರೆಕಂಡ ಸಿನಿಮಾಗಳನ್ನು ಪ್ರಶಸ್ತಿಗಾಗಿ ಆಹ್ವಾನಿಸಲಾಗಿತ್ತು. ಹಿರಿಯ ನಟಿ ಉಮಾಶ್ರೀ, ನಟ ರಿಷಬ್ ಶೆಟ್ಟಿ ಸೇರಿ ಹಲವಾರು ಪ್ರತಿಭೆಗಳು ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಪಡೆದರು.

ಇದೇ ಭಾನುವಾರ ಸಂಜೆ 6.30ರಿಂದ ಸ್ಟಾರ್ ಸುವರ್ಣ ವಾಹಿನಿಯಲ್ಲಿ ಅರ್ಜುನ್ ಜನ್ಯ ತಂಡದ ಸಂಗೀತ ರಸಮಂಜರಿ, ನಟಿ ಹರಿಪ್ರಿಯಾ–ವಸಿಷ್ಠ ಸಿಂಹ ಜೋಡಿಯ ನೃತ್ಯ ಸೇರಿದಂತೆ ಮನರಂಜನೆ ಮಹಾಪೂರವೇ ಹರಿಯಲಿದೆ. ರಮೇಶ್ ಅರವಿಂದ್ ಹಾಗೂ ಅನುಶ್ರೀ ನಿರೂಪಣೆ ಕಾರ್ಯಕ್ರಮದ ಆಕರ್ಷಣೆ. ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಪ್ರಸ್ತುತ ಪ್ರಾಯೋಜಕತ್ವ ವಹಿಸಿದ್ದ ಕಾರ್ಯಕ್ರಮ ಇದಾಗಿದೆ. ❖

ಕೃಷ್ಣಾ ನದಿ ನಡುವಿನ ನಡುಗಡ್ಡೆ ಗ್ರಾಮಗಳ ಜನರ ಗೋಳು • ಎಲ್ಲದಕ್ಕೂ ನಿತ್ಯ ನದಿ ದಾಟಬೇಕಾದ ಅನಿವಾರ್ಯ

‘ಸೌಲಭ್ಯ ಕೊಡಿ, ಇಲ್ಲ ಸಾಯಲು ಬಿಡಿ’

• ಚಂದ್ರಕಾಂತ ಮಸಾನಿ

1. ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಗುಂತಗೋಳದಿಂದ ಕಡದರಗಡ್ಡಿಗೆ ಕೃಷ್ಣಾ ನದಿ ದಾಟಿ ಬರುತ್ತಿರುವ ವೃದ್ಧ ಮಹಿಳೆಯರು 2. ಲಿಂಗಸುಗೂರು ತಾಲ್ಲೂಕಿನ ಯರಗೋಡಿ ಸಮೀಪದ ಕೃಷ್ಣಾಯಲ್ಲಿನ ನಡುಗಡ್ಡೆಗೆ ತೆಪ್ಪದಲ್ಲಿ ಹೊರಟಿರುವ ಗ್ರಾಮಸ್ಥರು –ಪ್ರಜಾವಾಣಿ ಚಿತ್ರಗಳು: ಬಸವರಾಜ ನಂದಿಕೋಲಮಠ

ಪ್ರಜಾವಾಣಿ ವಿಶೇಷ

ರಾಯಚೂರು: ‘ಮಳೆಗಾಲದಲ್ಲಿ ನಡುಗಡ್ಡೆಯಲ್ಲಿ ಹಸಿವಿನಿಂದ ಬಳಲುತ್ತಿದ್ದವರಿಗೆ ಬುತ್ತಿ ಕೊಡಲು ಹೋಗಿ ತೆಪ್ಪ ಮಗುಚಿ ಇಬ್ಬರು ನೀರು ಪಾಲಾದರು. ಶವ ಸಿಗಲೇ ಇಲ್ಲ. ಸರ್ಕಾರ ಗ್ರಾಮಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಿದ್ದರೆ ಎರಡು ಜೀವ ಉಳಿಯುತ್ತಿದ್ದವು. ಇಬ್ಬರು ಮೃತಪಟ್ಟರೂ ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ ಎಂದಾದರೆ ನಮ್ಮ ಗೋಳನ್ನು ಯಾರ ಬಳಿ ಹೇಳಿಕೊಳ್ಳಬೇಕು? ಇಲ್ಲಿ ಇನ್ನೆಷ್ಟು ಜನ ಸಾಯಬೇಕು ಎಂದು ಸರ್ಕಾರ ಕಾಯುತ್ತಿದೆ..!’

ಇದು 18 ವರ್ಷಗಳ ಹಿಂದೆ ಪತಿ ಕಳೆದುಕೊಂಡು ಪರಿಹಾರವೂ ಸಿಗದೇ ಪರಿತಪಿಸುತ್ತಿರುವ ಲಿಂಗಸುಗೂರು ತಾಲ್ಲೂಕಿನ ಯರಗೋಡಿಯ ಹಣಮವ್ವ ಸುಭಾಶ್ಚಂದ್ರ ಅವರು ನೋವಿನ ಮಾತು.

ದಿನಸಿ ಖರೀದಿ, ಆಸ್ಪತ್ರೆ, ವೃದ್ಧಾಪ್ಯ ವೇತನ, ಪಂಚಾಯಿತಿ ಕೆಲಸಗಳಿಗೆ ನಿತ್ಯ ಕೃಷ್ಣಾ ನದಿ ದಾಟಿ ಆಚೆಗೆ ಹೋಗಬೇಕು. ಮನೆಯಿಂದ ಹೊರಗೆ ಹೋದರೆ ಮತ್ತೆ ಸುರಕ್ಷಿತವಾಗಿ ಮರಳುತ್ತಾರೆ ಎನ್ನುವ ವಿಶ್ವಾಸ ಕುಟುಂಬದವರಿಗೇ ಇರುವುದಿಲ್ಲ. ಸರ್ಕಾರಿ ಶಾಲೆಗೆ ನೇಮಕಗೊಂಡಿರುವ ಶಿಕ್ಷಕರು ಸಹ ತಮ್ಮ ನೌಕರಿ ಉಳಿಸಿಕೊಳ್ಳಲು ನದಿ ದಾಟಿಕೊಂಡೇ ನಡುಗಡ್ಡೆಗೆ ಬರಬೇಕು.

ಹಲವು ವರ್ಷ ಹೋರಾಟ ನಡೆಸಿದ ಹಿರಿಯ ತಲೆಗಳು ತಣ್ಣಗಾಗಿವೆ. ಆಡಳಿತದ ದುರಾವಸ್ಥೆಗೆ ಬೇಸತ್ತು ಹೋರಾಟದ ಕಿಚ್ಚು ಆರಿದೆ. ಈ ನಡುವೆ ನಡುಗಡ್ಡೆ ಜನರ ಸಮಸ್ಯೆಗಳು ಇನ್ನಷ್ಟು ಜಟಿಲಗೊಂಡಿವೆ. ಲಿಂಗಸುಗೂರು ತಾಲ್ಲೂಕಿನಲ್ಲಿ ಗುಡ್ಡ ಸೀಳಿಕೊಂಡು ಐದು ಸೆಳೆವುಗಳಾಗಿ ಹರಿಯುತ್ತಿರುವ ಕೃಷ್ಣಾ ನದಿ ನಡುವಿನ ನಡುಗಡ್ಡೆ ಗ್ರಾಮಗಳ ಜನರ ಗೋಳು ಕೇಳುವವರಿಲ್ಲ.

ಕರಕಲಗಡ್ಡಿ, ಮ್ಯಾದರಗಡ್ಡಿ, ವಂಕಮ್ಮನಗಡ್ಡಿ ಪ್ರದೇಶಗಳು ಹಾಗೂ ಕಡದರಗಡ್ಡಿ ಯರಗೋಡಿ, ಯಳಗುಂದಿ ಹಾಗೂ ಹಂಚಿನಾಳ ಗ್ರಾಮಗಳ ಗ್ರಾಮಸ್ಥರು ಬೇಸಿಗೆಯಲ್ಲಿ ಒಂದು ರೀತಿಯ ಸಮಸ್ಯೆ ಎದುರಿಸಿದರೆ, ಮಳೆಗಾಲದಲ್ಲಿ ಇನ್ನೊಂದು ಬಗೆಯ ಸಮಸ್ಯೆ ಎದುರಿಸುತ್ತಿದ್ದಾರೆ. ನಡುಗಡ್ಡೆ ಗ್ರಾಮಸ್ಥರ ಸ್ಥಳಾಂತರ ಇಂದಿಗೂ ಯಕ್ಷ ಪ್ರಶ್ನೆಯಾಗಿದೆ. ನಿತ್ಯ ನದಿ ದಾಟಲೇ ಬೇಕಾದ ಅನಿವಾರ್ಯತೆ ಇದೆ. ನಡುಗಡ್ಡೆಗಳಲ್ಲೇ ಕೃಷಿ ಭೂಮಿ ಇರುವ ಕಾರಣ ವಾಸಿಗಳು ನಡುಗಡ್ಡೆ ಬಿಟ್ಟು ಬರಲಾರದ ಸ್ಥಿತಿಯಲ್ಲಿದ್ದಾರೆ.

ಕೃಷ್ಣಾ ನದಿ ಮಧ್ಯದಲ್ಲಿರುವ ಕರಕಲಗಡ್ಡಿಯಲ್ಲಿ ಮೂರು ಕುಟುಂಬಗಳ 22 ಜನ, ಮ್ಯಾದರಗಡ್ಡಿಯ ಹತ್ತು ಕುಟುಂಬಗಳ 68 ಜನ, ವಂಕಮ್ಮನಗಡ್ಡಿ ಒಂದೇ ಕುಟುಂಬದ 14 ಮಂದಿಯನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಬೇಕು ಎನ್ನುವ ಬೇಡಿಕೆ ಬಹಳ ವರ್ಷಗಳಿಂದ ಇದೆ.

ನಡುಗಡ್ಡೆ ಗ್ರಾಮಗಳಾದ ಕಡದರಗಡ್ಡಿ, ಯರಗೋಡಿ, ಯಳಗುಂದಿ, ಹಂಚಿನಾಳಕ್ಕೆ ಅಗತ್ಯ ಮೂಲಸೌಕರ್ಯ ಕಲ್ಪಿಸುವಂತೆ ಹಲವು ವರ್ಷಗಳಿಂದ ಗ್ರಾಮಸ್ಥರು ಚುನಾಯಿತ ಪ್ರತಿನಿಧಿಗಳಿಗೆ ಹಾಗೂ ಅಧಿಕಾರಿಗಳಿಗೆ ಮನವಿ ಮಾಡುತ್ತಲೇ ಇದ್ದಾರೆ. ಅವರಿಗೆ ಭರವಸೆ ಬಿಟ್ಟರೆ ಏನೂ ಸಿಕ್ಕಿಲ್ಲ.

ಹಿಂದೆ ಜಿಲ್ಲಾಡಳಿತ ಯಳಗುಂದಿ ಬಳಿ ಸರ್ಕಾರಿ ಜಮೀನು ಗುರುತಿಸಿ ಪುನರ್ವಸತಿಗೆ ಪ್ರಯತ್ನ ನಡೆಸಿತ್ತು. ಆದರೆ, ಅಕ್ರಮ ಸಾಗುವಳಿದಾರರು ಜಮೀನು ತಮ್ಮದೆಂದು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದರು.

ಮ್ಯಾದರಗಡ್ಡಿ ಆರು ಹಾಗೂ ಕಡದರಗಡ್ಡಿಯ ಐದು ಕುಟುಂಬಸ್ಥರಿಗೆ ನಿವೇಶನ ಹಕ್ಕು ಪತ್ರ ನೀಡಲಾಗಿದೆಯೋ ಹೊರತು ಸ್ಪಷ್ಟವಾದ ಜಾಗ ತೋರಿಸಿಲ್ಲ. 2019ರ ಪ್ರವಾಹ ಸಂದರ್ಭದಲ್ಲಿ ಕಡದರಗಡ್ಡಿ ಕುಟುಂಬಸ್ಥರಿಗೆ ₹ 50 ಸಾವಿರ ತಾತ್ಕಾಲಿಕ ಪರಿಹಾರ ನೀಡಿ ಸರ್ಕಾರ ಕೈತೊಳೆದುಕೊಂಡಿದೆ.

‘ನದಿಗೆ ನೀರು ಬಂದಾಗ ಮಾತ್ರ ಅಧಿಕಾರಿಗಳು ನಮಗೆ ಎಚ್ಚರಿಕೆ ಕೊಟ್ಟು ಹೋಗುತ್ತಾರೆ. ಇತ್ತ ನಡುಗಡ್ಡೆಯಲ್ಲಿ ಬದುಕಲು ಬಿಡುತ್ತಿಲ್ಲ, ಅತ್ತ ಪೂರ್ಣಪ್ರಮಾಣದಲ್ಲಿ ಸ್ಥಳಾಂತರವನ್ನೂ ಮಾಡುತ್ತಿಲ್ಲ’ ಎಂದು ಗ್ರಾಮಸ್ಥರಾದ ಮಲ್ಲಪ್ಪ, ಯಲ್ಲಮ್ಮ, ಹುಸನಮ್ಮ, ಅಮರಗೊಂಡ ಅಳಲು ತೋಡಿಕೊಳ್ಳುತ್ತಾರೆ.

‘ಪ್ರವಾಹ ಬಂದಾಗ ಅಧಿಕಾರಿಗಳಿಗೆ ಟಿಎ, ಡಿಎ ಕೊಟ್ಟು ಹಲವು ಸಿಬ್ಬಂದಿಯನ್ನು ನಿಯೋಜಿಸುತ್ತಾರೆ. ಅದಕ್ಕೆ ಲಕ್ಷಾಂತರ ಖರ್ಚು ಮಾಡುತ್ತಾರೆ. ಅವರಿಗೆ ಖರ್ಚು ಮಾಡುವ ವೆಚ್ಚದಲ್ಲೇ ನಮಗೆ ಎರಡು ತಿಂಗಳಿಗೆ ಅಗತ್ಯವಿರುವಷ್ಟು ದಿನಸಿ ಪೂರೈಸಿದರೆ ನಾವು ನೆಮ್ಮದಿಯಿಂದ ಬದುಕಬಹುದು. ಅನಗತ್ಯ ಹಣ ಖರ್ಚು ಮಾಡುವ ಅಧಿಕಾರಿಗಳಿಗೆ ನಮ್ಮ ಗೋಳು ಅರ್ಥವಾಗುತ್ತಿಲ್ಲ’ ಎನ್ನುತ್ತಾರೆ ಅವರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಕೃಷ್ಣಾ ನದಿ ನಡುಗಡ್ಡೆ ಪ್ರದೇಶದಲ್ಲಿರುವ ಕುಟುಂಬಗಳನ್ನು ಸ್ಥಳಾಂತರ ಮಾಡುವಂತೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ

ಅವಿನಾಶ ಶಿಂಧೆ, ಉಪ ವಿಭಾಗಾಧಿಕಾರಿ

ಜಮಖಂಡಿ ತಾಲ್ಲೂಕಿನ ಹಿರೇಪಡಸಲಗಿ ಗ್ರಾಮದ ಹತ್ತಿರ ಕೃಷ್ಣಾ ನದಿ ತೀರದಲ್ಲಿದ್ದ ಮೊಸಳೆಯನ್ನು ಗ್ರಾಮಸ್ಥರು ಸೆರೆ ಹಿಡಿದರು

ಮೊಸಳೆ ಹಿಡಿದ ಗ್ರಾಮಸ್ಥರು

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ತಾಲ್ಲೂಕಿನ ಹಿರೇಪಡಸಲಗಿ ಗ್ರಾಮದ ಹತ್ತಿರದ ಕೃಷ್ಣಾ ನದಿಯಲ್ಲಿ ಮೀನುಗಾರನ ಮೇಲೆ ದಾಳಿ ಮಾಡಿ ಗಾಯಗೊಳಿಸಿದ್ದ ಮೊಸಳೆಯನ್ನು ಗ್ರಾಮಸ್ಥರೇ ಹಿಡಿದಿದ್ದಾರೆ.

ಮೀನುಗಾರ ಮಹದೇವ ಮೋಹನ ಮೋರೆ ಮಂಗಳವಾರ ಮೀನು ಹಿಡಿಯಲು ಹೋದ ವೇಳೆ ಮೊಸಳೆ ಕಾಲು ಕಚ್ಚಿ ಎಳೆದುಕೊಳ್ಳಲು ಪ್ರಯತ್ನಿಸಿತು. ಅಲ್ಲಿಯೇ ಇದ್ದ ಇಬ್ಬರು ಮೋರೆ ಅವರನ್ನು ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಿದರು.

‘ಎರಡು ದಿನ ಹುಡುಕಾಟದ ಬಳಿಕ ಗುರುವಾರ ಬೆಳಿಗ್ಗೆ ಮೊಸಳೆ ಹಿಡಿದು, ಬಾಯಿಗೆ ಹಗ್ಗ ಕಟ್ಟಿದೆವು. ಅರಣ್ಯ ಇಲಾಖೆಗೆ ಮಾಹಿತಿ ನೀಡಿದೆವು. ನಂತರ ಮೊಸಳೆಯನ್ನು ಗ್ರಾಮ ಪಂಚಾಯತಿಯ ಕಸ ತುಂಬುವ ವಾಹನದಲ್ಲಿ ಸಾಗಿಸಿ ಆಲಮಟ್ಟಿ ಹಿನ್ನೀರಿನಲ್ಲಿ ಬಿಡಲಾಯಿತು’ ಎಂದು ಗ್ರಾಮಸ್ಥರು ತಿಳಿಸಿದರು.

ಮೊಸಳೆಯು ಸುಮಾರು 2 ಕ್ವಿಂಟಲ್ ತೂಕ ಮತ್ತು 6 ಅಡಿ ಉದ್ದ ಇದೆ.

ರೇಣುಕಾಚಾರ್ಯಗೆ ನೋಟಿಸ್

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದ ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ.

ಪಕ್ಷ ವಿರೋಧಿ ಹೇಳಿಕೆ ನೀಡುತ್ತಿರುವ ಬಗ್ಗೆ ಸಾಕಷ್ಟು ಬಾರಿ ಎಚ್ಚರಿಸಿದ್ದರೂ, ಮಾಧ್ಯಮಗಳ ಮುಂದೆ ಪಕ್ಷಕ್ಕೆ ಮುಜುಗರ ಆಗುವ ರೀತಿಯಲ್ಲಿ ಹೇಳಿಕೆ ನೀಡಲಾಗುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಿದ್ದು, ಶಿಸ್ತು ಕ್ರಮ ಏಕೆ ಕೈಗೊಳ್ಳಬಾರದು ಎಂದು ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ್ ಪಾಟೀಲ ಕೇಳಿದ್ದಾರೆ. ಪತ್ರ ತಲುಪಿದ ಒಂದು ವಾರದೊಳಗೆ ಉತ್ತರ ನೀಡಬೇಕು ಎಂದೂ ಸೂಚಿಸಿದ್ದಾರೆ.

ಮೃತ ಸನ್ಯಾಸಿ ಮನೆಯಲ್ಲಿ ₹30 ಲಕ್ಷ!

ಪ್ರಜಾವಾಣಿ ವಾರ್ತೆ

ಗಂಗಾಧರಯ್ಯ ಅವರ ಮನೆಯಲ್ಲಿ ಸಿಕ್ಕ ಹಣವನ್ನು ಭಕ್ತರು ಎಣಿಕೆ ಮಾಡುತ್ತಿರುವುದು

ಹೊಳಲ್ಕೆರೆ: ಕಳೆದ ವಾರ ಮೃತಪಟ್ಟಿದ್ದ ಸನ್ಯಾಸಿ ಗಂಗಾಧರಯ್ಯ ಶಾಸ್ತ್ರಿ ಅವರ ಮನೆಯಲ್ಲಿ ಬರೋಬ್ಬರಿ ₹30 ಲಕ್ಷ ನಗದು ಪತ್ತೆಯಾಗಿದೆ! ಇವರು ನಂದೀಶ್ವರ ಮಠದ ಅನುಯಾಯಿಯಾಗಿದ್ದರು.

₹10, ₹20, ₹50, ₹100, ₹200, ₹500 ಮುಖಬೆಲೆಯ ನೋಟುಗಳು ಮನೆಯಲ್ಲಿ ದೊರೆತಿವೆ. ಒಂದು, ಎರಡು, ಐದು ರೂಪಾಯಿ ಮುಖಬೆಲೆಯ ನಾಣ್ಯಗಳ ಮೌಲ್ಯವೇ ಸುಮಾರು ₹46,000 ದಷ್ಟಿದೆ. ಮನೆಯಲ್ಲಿ ತೆಂಗಿನಕಾಯಿ ರಾಶಿಯ ಕೆಳಗೆ ನೋಟು ತುಂಬಿದ ಹಲವು ಚೀಲಗಳು ಪತ್ತೆಯಾಗಿವೆ. ಮನೆಯ ಅಟ್ಟದ ಮೇಲೆ ಹಣ ತುಂಬಿದ ಕೊಡವೊಂದು ಸಿಕ್ಕಿದೆ.

ಗಂಗಾಧರಯ್ಯ ಅವರು ಪಟ್ಟಣದ ಮದಕರಿ ಸರ್ಕಲ್ ಬಳಿಯ ಮನೆಯಲ್ಲಿ ಒಂಟಿ ಜೀವನ ನಡೆಸುತ್ತಿದ್ದರು. ಬ್ರಹ್ಮಚಾರಿಯಾಗಿದ್ದ ಇವರು, ಬೇರೆಯವರು ಮಾಡಿದ ಅಡುಗೆ ಸೇವಿಸುತ್ತಿರಲಿಲ್ಲ. 70ರ ಹರೆಯದಲ್ಲೂ ತಾವೇ ಅಡುಗೆ ಮಾಡಿಕೊಳ್ಳುತ್ತಿದ್ದರು. ಯಾರನ್ನೂ ಮನೆ ಒಳಗೆ ಬಿಟ್ಟುಕೊಳ್ಳುತ್ತಿರಲಿಲ್ಲ. ಚಪ್ಪಲಿ ಕೂಡ ಧರಿಸುತ್ತಿರಲಿಲ್ಲ.

‘ಗಂಗಾಧರಯ್ಯ ಶಾಸ್ತ್ರಿ ಅವರಿಗೆ 4 ಎಕರೆ ತೆಂಗಿನ ತೋಟ, ಗದ್ದೆ ಇದೆ. ಇವರು ಶಾಸ್ತ್ರ ಹೇಳುತ್ತಿದ್ದರು. ಗೃಹಪ್ರವೇಶ ಸೇರಿದಂತೆ ಶುಭಕಾರ್ಯ ಮಾಡಿಸುತ್ತಿದ್ದರು. ಸರಳ ಜೀವನ ನಡೆಸುತ್ತಿದ್ದ ಇವರು, ಇಂತಿಷ್ಟೇ ಹಣ ಕೊಡಿ ಎಂದು ಯಾರ ಬಳಿಯೂ ಕೇಳುತ್ತಿರಲಿಲ್ಲ. ಭಕ್ತರು ಕೊಟ್ಟ ಕಾಣಿಕೆ ಪಡೆದು ಮನೆಯಲ್ಲಿ ಇಡುತ್ತಿದ್ದರು’ ಎಂದು ಭಕ್ತರೊಬ್ಬರು ತಿಳಿಸಿದ್ದಾರೆ.

‘ಅವರ ಸಾವಿನ ನಂತರ ಭಕ್ತರ ಸಮ್ಮುಖದಲ್ಲಿ ಮನೆಯಲ್ಲಿದ್ದ ಹಣವನ್ನು ಎಣಿಕೆ ಮಾಡಿ ಅದನ್ನು ಬ್ಯಾಂಕ್‌ನಲ್ಲಿ ಠೇವಣಿ ಇಡಲಾಗಿದೆ. ಗಂಗಯ್ಯ ಅವರಿಂದ ಕೆಲವರು ಸಾಲ ಪಡೆದಿರಬಹುದು. ಅವರ ಸಾವಿನ ಹಿಂದಿನ ದಿನ ಭಕ್ತರೊಬ್ಬರು ₹1 ಲಕ್ಷ ನಗದು ತಂದು ಕೊಟ್ಟಿದ್ದರು ಎಂದು ಹೇಳಲಾಗಿದೆ. ತಾವು ಶಾಸ್ತ್ರಿಗಳಿಂದ ₹2 ಲಕ್ಷ ಹಣ ಪಡೆದಿದ್ದು, ಅದನ್ನು ಹಿಂದಿರುಗಿಸುತ್ತೇನೆ’ ಎಂದು ಮತ್ತೊಬ್ಬ ಭಕ್ತರು ಹೇಳಿದ್ದಾರೆ.

ಗಂಗಾಧರಯ್ಯ ಅವರು ತೆಂಗಿನ ತೋಟದಿಂದ ಬಂದ ಆದಾಯ ಹಾಗೂ ಭಕ್ತರು ನೀಡಿದ ಕಾಣಿಕೆಯನ್ನು ಹಲವು ವರ್ಷಗಳಿಂದ ಮನೆಯಲ್ಲಿಯೇ ಸಂಗ್ರಹಿಸಿಟ್ಟಿದ್ದರು. ಅವರಿಗೆ ವಾರಸುದಾರರಿಲ್ಲ.

‘ಮುಂದಿನ ಶುಕ್ರವಾರ ಭಕ್ತರ ಸಭೆ ಕರೆದು, ಆಸ್ತಿಯ ದಾಖಲೆಗಳನ್ನು ಪರಿಶೀಲಿಸಲಾಗುವುದು. ಸ್ವಲ್ಪ ಹಣದಲ್ಲಿ ಅವರ ಜಮೀನಿನಲ್ಲಿ ಗದ್ದುಗೆ ನಿರ್ಮಿಸಿ ಭಕ್ತರ ಪೂಜೆಗೆ ಅವಕಾಶ ಕಲ್ಪಿಸಲಾಗುವುದು. ಉಳಿದ ಹಣವನ್ನು ಟ್ರಸ್ಟ್ ರಚಿಸಿ ಸಮಾಜಸೇವೆಗೆ ಬಳಸಲಾಗುವುದು’ ಎಂದು ಭಕ್ತ ವೀರಭದ್ರಪ್ಪ ತಿಳಿಸಿದ್ದಾರೆ.

ಆಷಾಢ ಏಕಾದಶಿ: ಪಂಢರಪುರದಲ್ಲಿ ಭಕ್ತಸಾಗರ

ಪ್ರಜಾವಾಣಿ ವಾರ್ತೆ

ಪಂಢರಪುರಕ್ಕೆ ಬಂದ ಭಕ್ತ ಸಾಗರ

ಪಂಢರಪುರ: ಪಂಢರಪುರದಲ್ಲಿ ಆಷಾಢ ಏಕಾದಶಿ ಪ್ರಯುಕ್ತ ಗುರುವಾರ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ಗೋವಾ, ತೆಲಂಗಾಣ ರಾಜ್ಯಗಳ ಲಕ್ಷಾಂತರ ಭಕ್ತರು ಬಂದು ವಿಠಲ- ರುಕ್ಮಿಣಿ ದರ್ಶನ ಪಡೆದರು.

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂಧೆ ದಂಪತಿ ಬೆಳಿಗ್ಗೆ ದೇವರಿಗೆ ವಿಶೇಷ ಪೂಜೆ, ಕಾಕಡಾರತಿ ಸಲ್ಲಿಸಿದ ಬಳಿಕ ಭಕ್ತರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು.

ಚಂದ್ರಭಾಗಾ (ಭೀಮಾ) ನದಿಯಲ್ಲಿ ಮಿಂದು ಭಕ್ತರು ನದಿಗೆ ವಿಶೇಷ ಪೂಜೆ ಸಲ್ಲಿಸಿ, ಆರತಿ ತೇಲಿ ಬಿಟ್ಟರು. ‘ವಿಠಲ, ವಿಠಲ’ ಎಂದು ಅಭಂಗಗಳನ್ನು (ಭಜನೆ) ಹಾಡುತ್ತ ಸರದಿಯಲ್ಲಿ ನಿಂತು ದೇವರ ದರ್ಶನ ಪಡೆದರು. ವಿಠಲನಿಗೆ ಬಗೆಬಗೆಯ ಪುಷ್ಪಾಲಂಕಾರ, ವಿಶೇಷ ಪೂಜೆ ನಡೆದವು. ಭಕ್ತರು ಹಾಡುತ್ತ, ಕುಣಿಯುತ್ತ ಭಜನೆ, ನಾಮ ಸಂಕೀರ್ತನಗಳಲ್ಲಿ ಮೈಮರೆತರು.

ದಿಂಡಿಯಾತ್ರೆಯಲ್ಲಿ (ಪಾದಯಾತ್ರೆ) ಬಂದ ವಾರಕಾರಿಗಳು ವಿಠಲನ ನಾಮಸ್ಮರಣೆಯಲ್ಲಿ ಹೆಜ್ಜೆ ಹಾಕಿದರು. ಪಾದಯಾತ್ರಿ ವಾರಕಾರಿಗಳಿಗೆ ಪಂಢರಪುರದ ನಾಲ್ಕೂ ದಿಕ್ಕಿನಲ್ಲಿ ಊಟೋಪಹಾರದ ವ್ಯವಸ್ಥೆಯಿತ್ತು. ‘ಕಳೆದ ಎರಡು ವರ್ಷಗಳಿಗೆ ಹೋಲಿಸಿದರೆ ಈ ವರ್ಷ ಭಕ್ತರ ಸಂಖ್ಯೆ ಹೆಚ್ಚಿದೆ’ ಎಂದು ಸ್ಥಳೀಯರು ತಿಳಿಸಿದ್ದಾರೆ.

ಭಕ್ತರಿಗೆ ಯಾವುದೇ ರೀತಿ ತೊಂದರೆ ಆಗದಿರಲಿಯೆಂದು ಜಿಲ್ಲಾಡಳಿತ ಮತ್ತು ದೇವಸ್ಥಾನ ಸಮಿತಿಯು ಸಕಲ ಸಿದ್ಧತೆ ಮಾಡಿದ್ದರು. ಮಹಾಪೂಜೆ ವೇಳೆ ವಿಠಲನ ದರ್ಶನಕ್ಕೆ ಗಂಟೆಗೆ 1,200 ರಿಂದ 1,300 ಭಕ್ತರು ದರ್ಶನ ಪಡೆಯುವ ವ್ಯವಸ್ಥೆ ಕಲ್ಪಿಸಲಾಗಿತ್ತು. ಸಂತ ಜ್ಞಾನೇಶ್ವರ, ಸಂತ ತುಕಾರಾಮ ಮಹಾರಾಜರ ಪಲ್ಲಕ್ಕಿ ಸಾಗುವ ಮಾರ್ಗಗಳಲ್ಲಿ ಪ್ರತಿ 2 ಕಿ.ಮೀ ಗೆ ಮಹಿಳೆಯರಿಗೆ ವಿಶ್ರಾಂತಿ ಸ್ಥಳಗಳನ್ನು ನಿರ್ಮಿಸಲಾಗಿತ್ತು.

ಸುರಕ್ಷತೆ ದೃಷ್ಟಿಯಿಂದ 300 ಸಿಸಿಟಿವಿ ಕ್ಯಾಮೆರಾ, 65 ಎಕರೆ ಜಾಗದಲ್ಲಿ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ, ಶೌಚಾಲಯ, ಸ್ನಾನಗೃಹ, ಕುಡಿಯುವ ನೀರು, ಆರೋಗ್ಯ, ವೈದ್ಯಕೀಯ ವ್ಯವಸ್ಥೆ, ಮಹಿಳಾ ಭಕ್ತರಿಗೆ ಪ್ರತ್ಯೇಕವಾಗಿ ಸ್ನಾನಗೃಹ, ಶೌಚಾಲಯ ವ್ಯವಸ್ಥೆ ಮಾಡಲಾಗಿತ್ತು.

ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ ಫಲಿತಾಂಶ ಇಂದು

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯ ಫಲಿತಾಂಶ ಜೂನ್ 30ರಂದು ಬೆಳಿಗ್ಗೆ 11ಕ್ಕೆ ಪ್ರಕಟವಾಗಲಿದೆ. ವಿದ್ಯಾರ್ಥಿಗಳು ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಜಾಲತಾಣ https://karresults.nic.in ನಲ್ಲಿ ವೀಕ್ಷಿಸಬಹುದು.

ರಾಜ್ಯದ 458 ಕೇಂದ್ರಗಳಲ್ಲಿ ಜೂನ್ 12ರಿಂದ 19ರವರೆಗೆ ಪೂರಕ ಪರೀಕ್ಷೆಗಳು ನಡೆದಿದ್ದವು. ರಾಜ್ಯದ 11,810 ಪ್ರೌಢಶಾಲೆಗಳ 1,11,689 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದರು.

2022–23ನೇ ಸಾಲಿನಲ್ಲಿ ಪರೀಕ್ಷೆ ಬರೆದಿದ್ದ 8,35,102 ವಿದ್ಯಾರ್ಥಿಗಳಲ್ಲಿ 1,34,483 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದರು.

ವಾಂತಿ-ಭೇದಿಯಿಂದ ಯುವಕ ಸಾವು

ಪ್ರಜಾವಾಣಿ ವಾರ್ತೆ

ಸುನೀಲ

ಕನಕಗಿರಿ (ಕೊಪ್ಪಳ ಜಿಲ್ಲೆ): ಸಮೀಪದ ಬಸರಿಹಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಲಸನಹಟ್ಟಿ ಗ್ರಾಮದಲ್ಲಿ ಗುರುವಾರ ಸುನೀಲ ಗಿಡ್ಡಪ್ಪ ಕಂದಕೂರು (23) ವಾಂತಿ–ಭೇದಿಯಿಂದ ಮೃತಪಟ್ಟಿದ್ದಾರೆ.

‘ಬುಧವಾರ ರಾತ್ರಿ ಮಾಂಸದೂಟ ಮಾಡಿದ್ದ ಯುವಕನಿಗೆ ವಾಂತಿ–ಭೇದಿಯಾಗಿದೆ. ತೀವ್ರ ಅಸ್ವಸ್ಥಗೊಂಡ ಸುನೀಲ ಅವರನ್ನು ಗುರುವಾರ ಬೆಳಿಗ್ಗೆ ಮುಸಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿತ್ತು. ನಿತ್ರಾಣಗೊಂಡಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಕೊಪ್ಪಳ ಅಥವಾ ಗಂಗಾವತಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಅಲ್ಲಿನ ಸಿಬ್ಬಂದಿ ಸಲಹೆ ನೀಡಿದ್ದರು. ಅಲ್ಲಿಂದ ಮತ್ತೆ ಸ್ವಗ್ರಾಮಕ್ಕೆ ಬಂದು ಗಂಗಾವತಿಗೆ ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟಿದ್ದಾನೆ’ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಬಾಲಕನ ರಕ್ಷಣೆ ಯತ್ನ: ತಂದೆ, ತಾತ ಸಾವು

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ತಾಲ್ಲೂಕಿನ ಮುಂಗಾನಹಳ್ಳಿ ಹೋಬಳಿಯ ಅಂಕಾಲಮಡುಗು ಗ್ರಾಮದಲ್ಲಿ ಗುರುವಾರ ಕಾಲುಜಾರಿ ಕೃಷಿ ಹೊಂಡಕ್ಕೆ ಬಿದ್ದ ಮಗನ ರಕ್ಷಣೆಗೆ ಇಳಿದ ಆತನ ತಂದೆ ಮತ್ತು ತಾತ ಹೊಂಡದ ಪಾಚಿಯಲ್ಲಿ ಸಿಲುಕಿ ಮೃತಪಟ್ಟಿದ್ದಾರೆ.

ಕೃಷಿ ಹೊಂಡಕ್ಕೆ ಬಿದ್ದ ಬಾಲಕ ಸಂಜಯ್‌ನನ್ನು ಅಕ್ಕಪಕ್ಕದ ಜಮೀನಿನಲ್ಲಿದ್ದವರು ರಕ್ಷಿಸಿದ್ದು, ಆತನ ತಾತ ವೆಂಕಟರಾಯಪ್ಪ(70) ಮತ್ತು ತಂದೆ ಚೌಡರೆಡ್ಡಿ(50) ಮೃತಪಟ್ಟಿದ್ದಾರೆ.

ತಾತ, ತಂದೆ ಜೊತೆ ಬಾಲಕ ತೋಟಕ್ಕೆ ಹೋಗಿದ್ದ. ಕೃಷಿ ಹೊಂಡದಲ್ಲಿ ನೀರು ಕುಡಿಯಲು ಹೋಗಿದ್ದ ಬಾಲಕ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದ. ಅವನ ರಕ್ಷಣೆಗಾಗಿ ಇಳಿದ ತಾತ ರಕ್ಷಣೆ ಮಾಡಲಾಗದೆ ಕೂಗಿಕೊಂಡಿದ್ದಾರೆ. ಸ್ವಲ್ಪ ದೂರದಲ್ಲಿದ್ದ ಆತನ ತಂದೆ ಕೂಡ ಕೃಷಿ ಹೊಂಡಕ್ಕೆ ಇಳಿದಿದ್ದಾರೆ.

ಆದರೆ, ಇಬ್ಬರೂ ಪಾಚಿಯಲ್ಲಿ ಸಿಲುಕಿದ ಕಾರಣ ರಕ್ಷಣೆಗಾಗಿ ಜೋರಾಗಿ ಕೂಗಿಕೊಂಡಿದ್ದಾರೆ. ಅವರ ಕೂಗು ಕೇಳಿ ಪಕ್ಕದ ಜಮೀನಿನಲ್ಲಿದ್ದ ಪೆದ್ದ ಚೌಡರೆಡ್ಡಿ ಹಾಗೂ ಸುದೀಪ್ ಸ್ಥಳಕ್ಕೆ ಧಾವಿಸಿ ಹೊಂಡಕ್ಕೆ ಇಳಿದಿದ್ದಾರೆ. ಆದರೆ, ಅವರು ಕೂಡ ಪಾಚಿಯಲ್ಲಿ ಸಿಲುಕಿಕೊಂಡು ಹೊರ ಬರಲಾಗದೆ ಒದ್ದಾಡುತ್ತಿದ್ದರು.

ಆ ವೇಳೆಗೆ ಅಲ್ಲಿಗೆ ಬಂದ ಪ್ರಮೀಳಮ್ಮ ಎಂಬುವರು ತಮ್ಮ ಸೀರೆ ಬಿಚ್ಚಿ ಕೃಷಿ ಹೊಂಡಕ್ಕೆ ಎಸೆದಿದ್ದಾರೆ. ಬಾಲಕನನ್ನು ಎತ್ತಿಕೊಂಡು ಇಬ್ಬರೂ ದಡಕ್ಕೆ ಬಂದಿದ್ದಾರೆ. ಅಸ್ವಸ್ಥಗೊಂಡಿರುವ ಬಾಲಕನನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಹುಲಿ ದಾಳಿ: ವ್ಯಕ್ತಿಗೆ ಗಂಭೀರ ಗಾಯ

ತುಮರಿ, ಶಿವಮೊಗ್ಗ: ಸಮೀಪದ ಅಂಬಾರಗುಡ್ಡ ತಪ್ಪಲಿನ ಮರಾಠಿ ಗ್ರಾಮದಲ್ಲಿ ಬುಧವಾರ ತಡರಾತ್ರಿ ಗಣೇಶ ಕಂಚಿಕೇರಿ (42) ಎಂಬುವರ ಮೇಲೆ ಹುಲಿ ದಾಳಿ ನಡೆಸಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ.

ಕೆಲ ದಿನಗಳಿಂದ ಗ್ರಾಮದಲ್ಲಿ ಕಾಣಿಸಿಕೊಳ್ಳುತ್ತಿರುವ ಹುಲಿ, ಮನೆಯಲ್ಲಿ ಮಲಗಿದ್ದ ಗಣೇಶ ಅವರ ಮೇಲೆ ಏಕಾಏಕಿ ದಾಳಿ ಮಾಡಿ ಬಲಗೈಗೆ ಕಚ್ಚಿದೆ. ಅವರು ಕುಂದಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹುಲಿ ದಾಳಿಯಿಂದಾಗಿ ತೀವ್ರವಾಗಿ ಗಾಯಗೊಂಡಿರುವ ಮರಾಠಿ ಗ್ರಾಮದ ಗಣೇಶ

‘ಘಟನೆಯಿಂದಾಗಿ ಗ್ರಾಮಸ್ಥರು ಮನೆಯಿಂದ ಹೊರಗೆ ಬರಲು ಭಯ ಪಡುವಂತಾಗಿದೆ. ಅರಣ್ಯ ಇಲಾಖೆ ಶೀಘ್ರವೇ ಹುಲಿಯನ್ನು ಸೆರೆ ಹಿಡಿಯಬೇಕು’ ಎಂದು ಗ್ರಾಮದ ಶಶಿ ಜೈನ್ ಆಗ್ರಹಿಸಿದ್ದಾರೆ.

ಗೃಹಲಕ್ಷ್ಮಿ ಅರ್ಜಿಗೆ ಹಣ ಕೊಡಬೇಡಿ: ಸಚಿವೆ ಹೆಬ್ಬಾಳಕರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಗೃಹಲಕ್ಷ್ಮಿ’ ಯೋಜನೆ ಸೇವಾ ಕೇಂದ್ರ ಮತ್ತು ವ್ಯಕ್ತಿಗಳಿಗೆ ಸರ್ಕಾರವೇ ‘ಸೇವಾ ಶುಲ್ಕ’ ಎಂದು ಒಂದು ಅರ್ಜಿಗೆ ₹20 ನೀಡಲು ನಿರ್ಧರಿಸಿದ್ದು, ಅರ್ಜಿಗಾಗಿ ಯಾರೂ ಹಣ ನೀಡಬಾರದು’ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ತಿಳಿಸಿದರು.

‘ಕೆಲ ಕಡೆ ಮಧ್ಯವರ್ತಿಗಳು ಹಣ ವಸೂಲಿ ಮಾಡಿರುವ ಬಗ್ಗೆ ಮಾಹಿತಿ ಬಂದಿದೆ. ಭ್ರಷ್ಟಾಚಾರಕ್ಕೆ ಅವಕಾಶವಿಲ್ಲದೆ ಮಹಿಳೆಯರ ಖಾತೆಗೆ ಹಣ ತಲುಪಿಸಲಾಗುವುದು. ಅರ್ಜಿ ಸಲ್ಲಿಸಲು ಸಮಯದ ಮಿತಿ ಇಲ್ಲ’ ಎಂದು ಅವರು ಸುದ್ದಿಗಾರರಿಗೆ ಹೇಳಿದರು.

‘ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಹಾಲಿನ ಪುಡಿ ಪೂರೈಕೆಯಾಗುತ್ತಿಲ್ಲ. ಶೀಘ್ರದಲ್ಲೇ ಪರ್ಯಾಯ ವ್ಯವಸ್ಥೆ ಮಾಡಲಾಗುವುದು’ ಎಂದು ತಿಳಿಸಿದರು.

ಕುಂದಾಪುರ ತಾಲ್ಲೂಕಿನ ಹಾಲಾಡಿ ರಾಜ್ಯ ಹೆದ್ದಾರಿಯಲ್ಲಿ ಉರುಳಿ ಬಿದ್ದಿದ್ದ ಮರದ ತೆರವು ಕಾರ್ಯಾಚರಣೆಯಲ್ಲಿ ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಭಾಗಿಯಾಗಿದ್ದರು

ಮರ ತೆರವು: ಗಂಟಿಹೊಳೆ ಭಾಗಿ

ಪ್ರಜಾವಾಣಿ ವಾರ್ತೆ

ಕುಂದಾಪುರ (ಉಡುಪಿ): ಮಳೆಯಿಂದಾಗಿ ರಸ್ತೆಗೆ ಅಡ್ಡಲಾಗಿ ಬಿದ್ದಿದ್ದ ಮರವೊಂದನ್ನು ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಹಾಗೂ ಅವರ ಸಂಗಡಿಗರು ಗುರುವಾರ ತೆರವುಗೊಳಿಸಿದರು. ತೆರವು ಕಾರ್ಯಾಚರಣೆ ನಡೆಯುತ್ತಿದ್ದ ವೇಳೆ ಇನ್ನೊಂದು ಮರ ಬಿತ್ತು. ಶಾಸಕ ಸ್ವಲ್ಪದರಲ್ಲೇ ಅಪಾಯದಿಂದ ಪಾರಾದರು.

ಹಾಲಾಡಿ ಸಮೀಪದ ರಾಜ್ಯ ಹೆದ್ದಾರಿಯಲ್ಲಿ ಶಾಸಕ ಹಾಗೂ ಸಂಗಡಿಗರು ಸಾಗುತ್ತಿದ್ದರು. ಈ ವೇಳೆ ಭಾರಿ ಮಳೆಯಿಂದಾಗಿ ರಸ್ತೆಗೆ ಮರವೊಂದು ಉರುಳಿ ಬಿದ್ದ ಕಾರಣದಿಂದಾಗಿ ಸುಗಮ ಸಂಚಾರಕ್ಕೆ ತೊಡಕಾಗಿತ್ತು.

ಮರವನ್ನು ರಸ್ತೆಯಿಂದ ತೆರವು ಮಾಡಲು ಮುಂದಾದ ಶಾಸಕರು, ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಈ ಸಂದರ್ಭದಲ್ಲೇ, ಮಳೆಯಿಂದಾಗಿ ಬುಡ ಸಡಿಲವಾದ ಇನ್ನೊಂದು ಮರ ಉರುಳಿತು. ಮರ ಬೀಳುತ್ತಿರುವ ಸದ್ದು ಆಲಿಸಿದ ಶಾಸಕರು ಹಾಗೂ ಸಂಗಡಿಗರು ದೂರ ಓಡಿದ್ದರಿಂದಾಗಿ ಯಾವುದೇ ಅಪಾಯ ಸಂಭವಿಸಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ತಪ್ತ ಮುದ್ರಾಧಾರಣೆ

ಬೆಂಗಳೂರು ಜಯನಗರದ ನಂಜನಗೂಡು ರಾಘವೇಂದ್ರ ಸ್ವಾಮಿ ಮಠದಲ್ಲಿ ಮಂತ್ರಾಲಯದ ಸುಬುಧೇಂದ್ರ ಸ್ವಾಮೀಜಿ ಭಕ್ತರಿಗೆ ತಪ್ತ ಮುದ್ರಾಧಾರಣೆ ಮಾಡಿದರು

ಬೆಂಗಳೂರಿನಲ್ಲಿ ಉತ್ತರಾದಿ ಮಠದ ಸತ್ಯಾತ್ಮ ತೀರ್ಥ ಸ್ವಾಮೀಜಿ ಅವರಿಂದ ಮುದ್ರಾಧಾರಣೆ (ಎಡಚಿತ್ರ) ಉಡುಪಿ ಜಿಲ್ಲೆಯ ಪೆರ್ಡೂರು ಶ್ರೀ ಅನಂತಪದ್ಮನಾಭ ದೇವಸ್ಥಾನದಲ್ಲಿ ಶೀರೂರು ಮಠದ ಶ್ರೀ ವೇದವರ್ಧನತೀರ್ಥ ಸ್ವಾಮೀಜಿ ಅವರಿಂದ ಭಕ್ತರಿಗೆ ಮುದ್ರಾಧಾರಣೆ –ಪ್ರಜಾವಾಣಿ ಚಿತ್ರಗಳು

ದ.ಕ, ಉಡುಪಿ ಜಿಲ್ಲೆಗಳಲ್ಲಿ ಮುಂಗಾರು ಚುರುಕು: ಬಿರುಗಾಳಿಗೆ ಹಾರಿದ ತಗಡಿನ ಶೀಟ್

ಮಳೆ: ತೋಡಿಗೆ ಬಿದ್ದು ಹೋಟೆಲ್ ನೌಕರ ಮೃತ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣದ ಕಾಳಮ್ಮನ ಗುಡಿ ಬೀದಿಯಲ್ಲಿ ಗುರುವಾರ ಬಿರುಗಾಳಿಗೆ ಟೈಲರ್ ಹರಿ ಅವರ ಮನೆಯ ಚಾವಣಿಯ ತಗಡಿನ ಶೀಟ್‌ಗಳು ಹಾರಿ ಹೋಗಿ ವಿದ್ಯುತ್ ತಂತಿಗಳ ಮೇಲೆ ಬಿದ್ದಿರುವುದು

ಬೆಂಗಳೂರು: ರಾಜ್ಯದ ಮಂಗಳೂರು, ಉಡುಪಿ, ಹುಬ್ಬಳ್ಳಿ, ಉತ್ತರ ಕನ್ನಡ, ದಾವಣಗೆರೆ, ಶಿವಮೊಗ್ಗ ಸೇರಿದಂತೆ ವಿವಿಧೆಡೆ ಗುರುವಾರ ಉತ್ತಮ ಮಳೆಯಾಗಿದೆ. ಮಳೆ ಸಂಬಂಧಿತ ಅವಘಡದಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಮುಂಗಾರು ಬಿರುಸುಗೊಂಡಿದ್ದು, ಆಗಾಗ ಬಿಡುವು ನೀಡಿ ರಭಸದ ಮಳೆಯಾಗಿದೆ. ಉಡುಪಿಯ ಮಠದಬೆಟ್ಟು ಬಳಿ ತೋಡಿಗೆ ಬಿದ್ದು ಹೋಟೆಲ್ ನೌಕರ ಸತೀಶ್ (33) ಮೃತಪಟ್ಟಿದ್ದಾರೆ. ಬೈಂದೂರು ಮೂಲದ ಮಠದಬೆಟ್ಟು ನಿವಾಸಿ ಸತೀಶ್ ಬುಧವಾರ ನಾಪತ್ತೆಯಾಗಿದ್ದು ಗುರುವಾರ ಮಧ್ಯಾಹ್ನ ತೋಡಿನಲ್ಲಿ ಮೃತದೇಹ ಪತ್ತೆಯಾಗಿದೆ. ಮುಳುಗುತಜ್ಞ ಈಶ್ವರ್ ಮಲ್ಪೆ ಮೃತದೇಹವನ್ನು ಮೇಲೆತ್ತಿದರು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮುಂದಿನ 10 ದಿನಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿಗಾ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ಮುನ್ನೆಚ್ಚರಿಕೆ ನೀಡಿದೆ. ಕರಾವಳಿಯಲ್ಲಿ 45ರಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದ್ದು, 3ರಿಂದ 3.2 ಮೀಟರ್ ಎತ್ತರದಲ್ಲಿ ಸಮುದ್ರದ ಅಲೆಗಳು ಏಳುವ ಸಾಧ್ಯತೆ ಇದೆ. ಮಳೆಯಿಂದ ಅವಘಡಗಳು ಸಂಭವಿಸಿದರೆ, ತಕ್ಷಣ ಕಾರ್ಯಾಚರಣೆ ಕೈಗೊಳ್ಳಲು ಅನುವಾಗುವಂತೆ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಪಡೆಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇಡುವಂತೆ ಕೆಎಸ್‌ಎನ್‌ಡಿಎಂಸಿ ಸಲಹೆ ನೀಡಿದೆ.

ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆ ಸುರಿಯಿತು. ಹುಬ್ಬಳ್ಳಿ ನಗರದಲ್ಲಿ ಸಾಧಾರಣ ಮಳೆಯಾದರೆ, ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಬುಧವಾರ ತಡರಾತ್ರಿಯಿಂದಲೂ ನಿರಂತರ ಮಳೆ ಸುರಿಯುತ್ತಿದೆ. ಭಟ್ಕಳ, ಕಾರವಾರ, ಹೊನ್ನಾವರ, ಕುಮಟಾ ಮತ್ತು ಅಂಕೋಲಾದಲ್ಲಿ ಮಳೆ ಹೆಚ್ಚಿದೆ.

ವಿಜಯನಗರ ಜಿಲ್ಲೆಯ ಹೊಸಪೇಟೆ, ಕಮಲಾಪುರ, ಹಂಪಿ, ಕೂಡ್ಲಿಗಿ, ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ತೋರಣಗಲ್ಲು, ಕುಡಿತಿನಿಯಲ್ಲಿ ಸಾಧಾರಣ ಮಳೆಯಾಗಿದೆ.

ಬೆಳಗಾವಿಯ ಎಂ.ಕೆ.ಹುಬ್ಬಳ್ಳಿಯಲ್ಲಿ ಮಳೆಗಾಗಿ ಪ್ರಾರ್ಥಿಸಿ ಭಕ್ತರು ಪಟ್ಟಣದ ಕಲ್ಮೇಶ್ವರ ದೇವಸ್ಥಾನದಲ್ಲಿ 24 ಗಂಟೆ ನಿರಂತರ ಭಜನೆ, ಪ್ರಾರ್ಥನೆ ಸಲ್ಲಿಸಿದರು.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಬಿರುಗಾಳಿಗೆ ಕಾಳಮ್ಮನ ಗುಡಿ ಬೀದಿಯ ಮನೆಯೊಂದರ ಚಾವಣಿಯ ತಗಡಿನ ಶೀಟ್‌ಗಳು ಹಾರಿ ವಿದ್ಯುತ್ ತಂತಿಗಳ ಮೇಲೆ ಬಿದ್ದವು. ಇದರಿಂದಾಗಿ ನಿವಾಸಿಗಳು ಭಯ ಭೀತರಾಗಿದ್ದರು. ಕೂಡಲೇ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದರಿಂದ ಹೆಚ್ಚಿನ ಅನಾಹುತ ತಪ್ಪಿತು.

ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿ ಹಾಗೂ ವಿವಿಧೆಡೆ ಜೋರು ಮಳೆ ಬಿದ್ದಿತು.

ಕರಾವಳಿಯಲ್ಲಿ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ಕರಾವಳಿ ಮತ್ತು ಒಳನಾಡಿನ ಜಿಲ್ಲೆಗಳಲ್ಲಿ ಶುಕ್ರವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಂದಿನ ಐದು ದಿನ ಭಾರಿ ಮಳೆಯಾಗಲಿದೆ. ಈ ಮೂರು ಜಿಲ್ಲೆಗಳಿಗೆ ಶುಕ್ರವಾರ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಈ ಮೂರು ಜಿಲ್ಲೆಗಳಲ್ಲದೇ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗಿನಲ್ಲಿ ಜುಲೈ 3ರಿಂದ ಭಾರಿ ಮಳೆಯಾಗುವ ಸಾಧ್ಯತೆ ಇದೆ.

❦ ಸುಭಾಷಿತ ❦

ನಿಮಗೆ ಮಿಕ್ಕೆಲ್ಲದಕ್ಕಿಂತ ಹಣವೇ ಹೆಚ್ಚು ಮುಖ್ಯ ಅನ್ನಿಸಿದರೆ, ಜೀವನವಿಡೀ ನೀವು ಖರೀದಿಗೆ ಒಳಗಾಗುತ್ತೀರಿ.

–ರೂಮಿ

ಭಾರತದಲ್ಲಿ ವಿಶ್ವಕಪ್ ಕ್ರಿಕೆಟ್ ಗರಿಗೆದರಿದ ನಿರೀಕ್ಷೆ

ಕಪಿಲ್ ದೇವ್ ನಾಯಕತ್ವದ ಭಾರತ ತಂಡವು ಮೊದಲ ಬಾರಿಗೆ ಕ್ರಿಕೆಟ್ ವಿಶ್ವಕಪ್ ಜಯಿಸಿ ಈಗ ನಾಲ್ಕು ದಶಕಗಳು ಸಂದಿವೆ. ಭಾರತ ಈಗ ಮತ್ತೊಂದು ಏಕದಿನ ವಿಶ್ವಕಪ್ ಟೂರ್ನಿಯ ಆತಿಥ್ಯಕ್ಕೆ ಸಜ್ಜಾಗಿದೆ. ಅಕ್ಟೋಬರ್ ಐದರಿಂದ ನವೆಂಬರ್ 19ರವರೆಗೆ ಟೂರ್ನಿ ನಡೆಯಲಿದೆ. ವಿಶ್ವಕಪ್ ಜಯಿಸುವುದೆಂದರೆ ತಂಡಗಳಿಗೆ ಪ್ರತಿಷ್ಠೆಯ ವಿಷಯ. ಆತಿಥ್ಯ ನೀಡುವುದು ಕೂಡ ಗೌರವದ ಸಂಗತಿ. ಭಾರತಕ್ಕೆ ಈ ಅವಕಾಶ ದೊರೆಯುತ್ತಿರುವುದು ನಾಲ್ಕನೇ ಸಲ. 1987, 1996 ಮತ್ತು 2011ರಲ್ಲಿ ನೆರೆರಾಷ್ಟ್ರಗಳ ಪಾಲುದಾರಿಕೆಯಲ್ಲಿ ಟೂರ್ನಿಗಳನ್ನು ಆಯೋಜಿಸಿತ್ತು. ಆದರೆ ಈ ಸಲ ಭಾರತ ಪೂರ್ಣಪ್ರಮಾಣದ ಆತಿಥ್ಯ ವಹಿಸಲಿದೆ. ವಿಶ್ವದ ಶ್ರೀಮಂತ ಕ್ರೀಡಾ ಸಂಸ್ಥೆಗಳಲ್ಲಿ ಒಂದಾಗಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ) ಇದು ಹೆಗ್ಗಳಿಕೆಯ ಸಂಗತಿ. ಹತ್ತು ತಂಡಗಳಷ್ಟೇ ಆಡಿದರೂ ಜಗತ್ತಿನ ಹಲವಾರು ರಾಷ್ಟ್ರಗಳ ಗಮನ ಟೂರ್ನಿಯ ಮೇಲೆ ನೆಟ್ಟಿರುತ್ತದೆ. ಜೊತೆಗೆ ಹತ್ತಾರು ನಿರೀಕ್ಷೆಗಳೂ ಗರಿಗೆದರಿರುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಪ್ರಸ್ತುತ ಕಾಲಘಟ್ಟದಲ್ಲಿ ಟ್ವೆಂಟಿ–20 ಕ್ರಿಕೆಟ್ ಭರಾಟೆಯ ನಡುವೆ ಸೊರಗುತ್ತಿರುವ ಫಿಫ್ಟಿ–50 ಮಾದರಿಯ ಕ್ರಿಕೆಟ್‌ಗೆ ಮರುಜೀವ ತುಂಬಲು ಈ ಬಾರಿಯ ವಿಶ್ವಕಪ್ ಟೂರ್ನಿಯು ಹೊಸ ದಿಕ್ಕು ತೋರಬೇಕೆಂಬ ಆಶಯವೂ ಸೇರಿಕೊಂಡಿದೆ. ಟೆಸ್ಟ್ ಉಳಿವಿಗಾಗಿ ನಾಲ್ಕು ವರ್ಷಗಳ ಹಿಂದೆ ಆರಂಭವಾದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಟೂರ್ನಿಯ ಎರಡು ಆವೃತ್ತಿಗಳು ಯಶಸ್ವಿಯಾಗಿ ಮುಗಿದಿವೆ. ಟೆಸ್ಟ್ ಮಾದರಿಯ ಕಲಾತ್ಮಕತೆ ಮತ್ತು ಚುಟುಕು ಕ್ರಿಕೆಟ್‌ನ ಬೀಸಾಟದ ಗುಣಗಳೆರಡನ್ನೂ ಕಣ್ತುಂಬಿಕೊಳ್ಳುವ ಅವಕಾಶ ಇರುವ ಏಕದಿನ ಮಾದರಿ ಉಳಿಯಬೇಕು ಎಂಬುದು ಹಲವು ದಿಗ್ಗಜರ ಒತ್ತಾಸೆಯಾಗಿದೆ.

ತವರಿನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲಲು, ರೋಹಿತ್ ಶರ್ಮಾ ನಾಯಕತ್ವದಲ್ಲಿ ಉತ್ತಮ ತಂಡವನ್ನು ಸಿದ್ಧಗೊಳಿಸುವ ಅವಶ್ಯಕತೆ ಇದೆ

ಭಾರತ ತಂಡ ಹತ್ತು ವರ್ಷಗಳಿಂದ ಎದುರಿಸುತ್ತಿರುವ ಐಸಿಸಿ (ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್) ಪ್ರಶಸ್ತಿಗಳ ಗೆಲುವಿನ ಬರ ಅಂತ್ಯಗೊಳ್ಳುವುದು ಯಾವಾಗ ಎಂದು ಅಭಿಮಾನಿಗಳು ಕಾದಿದ್ದಾರೆ. 2013ರಲ್ಲಿ ಮಹೇಂದ್ರ ಸಿಂಗ್ ಧೋನಿ ಬಳಗವು ಐಸಿಸಿ ಚಾಂಪಿಯನ್ಸ್ ಟ್ರೋಫಿ ಗೆದ್ದ ನಂತರ ಭಾರತ ತಂಡವು ಯಾವುದೇ ಮಾದರಿಯಲ್ಲಿಯೂ ಪ್ರಶಸ್ತಿ ಜಯಿಸಿಲ್ಲ. ತವರಿನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲಲು ರೋಹಿತ್ ಶರ್ಮಾ ನಾಯಕತ್ವದ ಭಾರತಕ್ಕೆ ಇದು ಸದವಕಾಶವಾಗಿದೆ. ಆದರೆ 2011ರಲ್ಲಿ ಏಕದಿನ ವಿಶ್ವಕಪ್ ದೊರಕಿಸಿಕೊಟ್ಟಂತಹ ಉತ್ತಮ ತಂಡವನ್ನು ಈಗ ಸಿದ್ಧಗೊಳಿಸುವ ಅವಶ್ಯಕತೆ ಇದೆ. ಅನುಭವಿ ಬ್ಯಾಟರ್ ಮತ್ತು ಅತ್ಯುತ್ತಮ ಫಿಟ್‌ನೆಸ್ ಹೊಂದಿರುವ ವಿರಾಟ್ ಕೊಹ್ಲಿ ಅವರೊಬ್ಬರ ಮೇಲಷ್ಟೇ ಹೆಚ್ಚು ಅವಲಂಬನೆಯಾಗುವ ಸ್ಥಿತಿ ಈಗಿದೆ. ಹೀಗಾಗಿ ಈ ಹಿಂದಿನ ಸೋಲುಗಳಿಗೆ ಕಾರಣವಾದ ಲೋಪಗಳನ್ನು ಸರಿಪಡಿಸಿಕೊಳ್ಳಬೇಕಿದೆ. ಇನ್ನೂ ಬಾಕಿ ಇರುವ ಮೂರು ತಿಂಗಳ ಅವಧಿಯಲ್ಲಿ ನಡೆಯುವ ಪ್ರತಿಯೊಂದು ಟೂರ್ನಿಯೂ ಪ್ರತಿಭಾಶೋಧದ ವೇದಿಕೆಯಾಗಬೇಕು. ಉತ್ತಮ ಆಟಗಾರರಿಗೆ ಮಣೆ ಹಾಕಬೇಕು. ಫಾರ್ಮ್ ಮತ್ತು ಫಿಟ್‌ನೆಸ್ ಇಲ್ಲದ ಆಟಗಾರರು ಯಾರೇ ಆಗಿರಲಿ ನಿರ್ದಾಕ್ಷಿಣ್ಯವಾಗಿ ಅವರನ್ನು ಕೈಬಿಡಬೇಕು. ಬಲಾಢ್ಯ ತಂಡಗಳಾದ ಆಸ್ಟ್ರೇಲಿಯಾ, ಹಾಲಿ ಚಾಂಪಿಯನ್ ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್ ತಂಡಗಳಿಗೆ ಕಠಿಣ ಪೈಪೋಟಿಯೊಡ್ಡಲು ಆತಿಥೇಯರು ಸಿದ್ಧರಾಗಬೇಕಿದೆ. ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್ ಮತ್ತು ಒಂದು ಸಲ ಪ್ರಶಸ್ತಿ ಗೆದ್ದಿದ್ದ ಶ್ರೀಲಂಕಾ ತಂಡಗಳು ಈ ಬಾರಿ ಅರ್ಹತಾ ಸುತ್ತಿನಲ್ಲಿ ಗೆದ್ದು ಮುಖ್ಯ ಸುತ್ತಿಗೆ ಪ್ರವೇಶಿಸುವಂತಹ ಅನಿವಾರ್ಯಕ್ಕೆ ಸಿಲುಕಿವೆ. ಭಾರತ ಮತ್ತು ಪಾಕಿಸ್ತಾನ ನಡುವಣ ರಾಜತಾಂತ್ರಿಕ ವಿಷಯವೂ ಈಗ ಮುನ್ನೆಲೆಗೆ ಬಂದಿದೆ. ಪಾಕ್ ತಂಡವು ಭಾರತಕ್ಕೆ ಬರಲು ಅಲ್ಲಿಯ ಸರ್ಕಾರ ಅನುಮತಿ ಕೊಡುವುದೋ ಇಲ್ಲವೋ ಎಂಬ ಚರ್ಚೆ ನಡೆಯುತ್ತಿದೆ. ಅಲ್ಲದೆ ವೇಳಾಪಟ್ಟಿ ಬಿಡುಗಡೆಯಾದ ಬೆನ್ನಲ್ಲಿಯೇ ದೇಶದ ಪ್ರಮುಖ ತಾಣಗಳಿಗೆ ಪಂದ್ಯಗಳ ಆಯೋಜನೆಯ ಅವಕಾಶ ಸಿಕ್ಕಿಲ್ಲವೆಂಬ ಅಪಸ್ವರಗಳು ಕೇಳಿಬಂದಿವೆ. ಇದೆಲ್ಲದರಾಚೆ ವಿಜಯದಶಮಿ ಮತ್ತು ದೀಪಾವಳಿ ಹಬ್ಬಗಳ ಋತುವಿನಲ್ಲಿಯೇ ನಡೆಯಲಿರುವ ಕ್ರಿಕೆಟ್ ಉತ್ಸವದಲ್ಲಿ ಸಂಭ್ರಮಿಸಲು ಕ್ರಿಕೆಟ್‌ಪ್ರೇಮಿಗಳು ತುದಿಗಾಲಿನಲ್ಲಿ ನಿಂತಿದ್ದಾರೆ.

ದಿನದ ಟ್ವೀಟ್

ಭಾವಚಿತ್ರ ಹಾಕಬಾರದೇಕೆ?

ಬಸ್ಸು ಮತ್ತು ಲಾರಿಗಳಲ್ಲಿ ದೇವರ ಫೋಟೊ ಬಹುತೇಕ ಇದ್ದೇ ಇರುತ್ತದೆ. ಅದರ ಜೊತೆಗೆ ಚಾಲಕರ ಆಪ್ತರು ಅಂದರೆ ಹೆಂಡತಿ, ಮಕ್ಕಳು, ಅಪ್ಪ, ಅಮ್ಮ ಈ ರೀತಿ ಒಂದಿಬ್ಬರ ಭಾವಚಿತ್ರ ಹಾಕುವುದನ್ನು ಕಡ್ಡಾಯ ಮಾಡಬೇಕು. ಕೊನೇಪಕ್ಷ ಅದನ್ನು ನೋಡಿಯಾದರೂ ಜವಾಬ್ದಾರಿಯುತವಾಗಿ ಚಾಲನೆ ಮಾಡಬಹುದು. ಇದರಿಂದ ಅಪಘಾತಗಳನ್ನು ಸ್ವಲ್ಪಮಟ್ಟಿಗೆ ತಗ್ಗಿಸಬಹುದು. ಸರ್ಕಾರ ಯೋಚಿಸಬೇಕು.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ತಮಿಳುನಾಡಿನ ರಾಜ್ಯಪಾಲ ಆರ್.ಎನ್.ರವಿ ಅವರು ಸೆಂಥಿಲ್ ಬಾಲಾಜಿ ಅವರನ್ನು ರಾಜ್ಯ ಸಚಿವ ಸಂಪುಟದಿಂದ ವಜಾ ಮಾಡುತ್ತಾರೆ. ರಾಜಭವನವು ಮುಖ್ಯಮಂತ್ರಿ ಜತೆ ಸಮಾಲೋಚಿಸದೆ ಸಚಿವರನ್ನು ಈ ಹಿಂದೆ ವಜಾ ಮಾಡಿದ ನಿದರ್ಶನ ಇದೆಯೇ ಎಂಬುದು ನನಗಂತೂ ತಿಳಿಯದು! ಸಂವಿಧಾನದ ಅಡಿಯಲ್ಲಿ, ರಾಜ್ಯಪಾಲರು ಮಂತ್ರಿಮಂಡಲದ ಸಹಾಯ ಮತ್ತು ಸಲಹೆಯ ಮೇರೆಗೆ ಕಾರ್ಯನಿರ್ವಹಿಸುತ್ತಾರೆ. ರಾಷ್ಟ್ರಪತಿ ನಾಳೆ ಪ್ರಧಾನಮಂತ್ರಿ ಅವರೊಂದಿಗೆ ಸಮಾಲೋಚನೆ ನಡೆಸದೆಯೇ ಕೇಂದ್ರ ಸಚಿವರೊಬ್ಬರನ್ನು ವಜಾಗೊಳಿಸಬಹುದೇ?

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಮಂಗಳವಾರ, 30-6-1998

- **ದಕ್ಷಿಣ ಕನ್ನಡದಲ್ಲಿ ಮಳೆಗೆ 4 ಬಲಿ**

ಮಂಗಳೂರು, ಜೂನ್ 29– ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮುಂಗಾರು ತೀವ್ರವಾಗಿದೆ. ಕಳೆದ ಮೂರು ದಿನಗಳಿಂದ ಸತತವಾಗಿ ಸುರಿಯುತ್ತಿರುವ ಮಳೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ವರನ್ನು ಬಲಿ ತೆಗೆದುಕೊಂಡಿದೆ.

- **ವರುಣಾ ನಾಲೆ ಕಾಮಗಾರಿ ನಿಲ್ಲದು– ಸಿದ್ದರಾಮಯ್ಯ**

ಮೈಸೂರು, ಜೂನ್ 29– ಯಾವುದೇ ಕಾರಣಕ್ಕೂ ವರುಣಾ ನಾಲೆ ಕಾಮಗಾರಿ ನಿಲ್ಲುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ.

ಜುಲೈ ವೇಳೆಗೆ ನೀರು ಬಿಡಲು ಸಾಧ್ಯವಾಗುವುದಾಗಿ ಈ ಮೊದಲು ಭಾವಿಸಲಾಗಿತ್ತು. ಆದರೆ ಸದ್ಯದ ಪರಿಸ್ಥಿತಿಯಲ್ಲಿ 52 ಕಿ.ಮೀ. ವರೆಗೆ ಸೆಪ್ಟೆಂಬರ್– ಅಕ್ಟೋಬರ್ ವೇಳೆಗೆ ವರುಣಾ ನಾಲೆ ಮೂಲಕ ಬೇಸಾಯಕ್ಕೆ ನೀರು ಬಿಡಲು ಸಾಧ್ಯವಾಗಬಹುದು ಎಂದು ಇಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಮಂಡ್ಯ ಜಿಲ್ಲಾ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಕನ್ನಂಬಾಡಿಯಲ್ಲಿ ಕೆಲ ಜನ ನಡೆಸಿದ ದಾಂದಲೆಯನ್ನು ಪ್ರಸ್ತಾಪಿಸಿದ ಅವರು, 1979ರಲ್ಲಿ ಆದ ವರುಣಾ ನಾಲೆ ಒಪ್ಪಂದಕ್ಕೆ ಜಿಲ್ಲೆಯ ಅನೇಕ ಪ್ರಮುಖರು ಸಹಿ ಹಾಕಿರುತ್ತಾರೆ. ಆ ರೀತಿ ಸಹಿ ಹಾಕಿದವರಲ್ಲಿ ಮಾಜಿ ಸಂಸತ್ ಸದಸ್ಯ ಜಿ.ಮಾದೇಗೌಡ ಕೂಡ ಒಬ್ಬರಿದ್ದಿರಬಹುದು ಎಂದರು.

ಆದರೆ, ವರುಣಾ ನಾಲೆ ಕಾಮಗಾರಿ ವಿರುದ್ಧ ಈಗ ಜನರನ್ನು ಎತ್ತಿ ಕಟ್ಟುವ ಕೆಲಸ ಮಾಡಲಾಗುತ್ತಿದೆ ಎಂದು ವಿಷಾದಿಸಿದರು.

50 ವರ್ಷಗಳ ಹಿಂದೆ

ಶನಿವಾರ, 30-6-1973

- **‘ವಂಶವೃಕ್ಷ’ ನಟ ತಲಗೇರಿ ಅವರಿಗೆ ಹೃದಯಾಘಾತ**

ಮುಂಬಯಿ, ಜೂನ್ 29– ‘ವಂಶವೃಕ್ಷ’ ಖ್ಯಾತಿಯ ನಟ ಶ್ರೀ ತಲಗೇರಿ ವೆಂಕಟರಾವ್ ಅವರಿಗೆ ಇಂದು ಲಘು ಹೃದಯಾಘಾತ ಆಯಿತು. ಅವರು ಈಗ ಚೇತರಿಸಿಕೊಳ್ಳುತ್ತಿದ್ದಾರೆ. ಪೂರ್ಣ ವಿಶ್ರಾಂತಿ ಪಡೆಯಬೇಕೆಂದು ಅವರಿಗೆ ವೈದ್ಯರು ಶಿಫಾರಸು ಮಾಡಿದ್ದಾರೆ.

‘ಪ್ರಜಾವಾಣಿ’ ಪ್ರತಿನಿಧಿ ಕೆ.ಇ.ಎಂ. ಆಸ್ಪತ್ರೆಯಲ್ಲಿ ಅವರನ್ನು ಕಂಡಾಗ ಎಂದಿನಂತೆ ಶ್ರೀ ತಲಗೇರಿ ಅವರು ಸರಸವಾಗಿ ಮಾತನಾಡಿದರು.

ತಲಗೇರಿ ಅವರ ಕಿರಿಯ ಪುತ್ರಿ ಹಾಗೂ ಗುಜರಾತಿನ ಖ್ಯಾತ ನಟಿ ವೃಂದಾ ಅವರು ಅಹಮದಾಬಾದಿಗೆ ಹೊರಡಲು ರೈಲು ಹತ್ತಲಿದ್ದಾಗ ಅಪಘಾತ ಸಂಭವಿಸಿ ಅವರ ಕಾಲು ಮೂಳೆ ಮುರಿದಿದೆ. ಈ ಸುದ್ದಿ ಕೇಳಿದಾಗ ಶ್ರೀ ತಲಗೇರಿ ಅವರಿಗೆ ಲಘು ಹೃದಯಾಘಾತ ಆಯಿತು.

- **ಪಾಕ್ ಪತ್ರಕ್ಕೆ ಇನ್ನೂ ಭಾರತದ ಉತ್ತರವಿಲ್ಲ**

ನವದೆಹಲಿ, ಜೂನ್ 29– 1971ರ ಯುದ್ಧದಿಂದ ಉದ್ಭವಿಸಿದ ಮಾನವೀಯ ಸಮಸ್ಯೆಗಳನ್ನು ಬಗೆಹರಿಸುವುದರ ಬಗ್ಗೆ ಭಾರತ– ಬಾಂಗ್ಲಾದೇಶ ಸಮಿತಿ ನೀಡಿರುವ ಸಲಹೆ ಕುರಿತ ಪಾಕಿಸ್ತಾನದ ಇತ್ತೀಚಿನ ಪತ್ರಕ್ಕೆ ಭಾರತ ಇನ್ನೂ ಉತ್ತರ ಕಳುಹಿಸಬೇಕಾಗಿದೆ.

ಜೂನ್ 24ರಂದು ತಲುಪಿದ ಪಾಕ್ ಪತ್ರದ ಬಗ್ಗೆ ಬಾಂಗ್ಲಾದೇಶದ ಜೊತೆ ಇನ್ನೂ ಸಮಾಲೋಚನೆ ನಡೆಯುತ್ತಿದೆಯೆಂದು ಅಧಿಕೃತ ಮೂಲಗಳು ಇಲ್ಲಿ ಇಂದು ಹೇಳಿದವು.

ಬದ್ಧತೆ, ಸಹನೆ, ಪ್ರಾಮಾಣಿಕತೆ, ಖಚಿತ ಗುರಿ ಹೊಸ ರಾಜಕಾರಣದ ಹಾದಿ ತೆರೆಯಬಲ್ಲವು

ವಿರೋಧ ಪಕ್ಷಗಳ ಒಕ್ಕೂಟ: ಸಾಧ್ಯತೆಯ ದಿಕ್ಸೂಚಿ

ವಿಶ್ಲೇಷಣೆ

ನಟರಾಜ್ ಹುಳಿಯಾರ್

ಹಿಂದಿನ ನಲವತ್ತು ವರ್ಷಗಳ ಭಾರತದ ಕಾಯಂ ಅಧಿಕಾರಸ್ಥ ರಾಜಕಾರಣಿ ನಿತೀಶ್ ಕುಮಾರ್ ಕೊನೆಗೂ ಪಟ್ನಾದಲ್ಲಿ 15 ವಿರೋಧ ಪಕ್ಷಗಳನ್ನು ಒಟ್ಟಿಗೆ ಸೇರಿಸಿದ್ದಾರೆ. ಅಧಿಕಾರದಲ್ಲಿ ಉಳಿಯಲು ಎಲ್ಲ ರಾಜಕೀಯ ಅಸ್ತ್ರಗಳನ್ನೂ ಬಳಸಿರುವ ನಿತೀಶ್, ಈ ಸಲ ದೇಶದ ಅತ್ಯುನ್ನತ ಹುದ್ದೆ ಹಿಡಿಯುವ ಮಹತ್ವಾಕಾಂಕ್ಷೆಯನ್ನು ಕೊಂಚ ಹಿನ್ನೆಲೆಯಲ್ಲಿಟ್ಟು ದೇಶದುದ್ದಕ್ಕೂ ಓಡಾಡುತ್ತಿದ್ದಾರೆ.

ಬಿಜೆಪಿಯ ಜೊತೆ ಸರಸವಾಡಿದ್ದರೂ ಬಿಹಾರದಲ್ಲಿ ಕೋಮುವಾದಕ್ಕೆ ತಕ್ಕಮಟ್ಟಿಗೆ ಕಡಿವಾಣ ಹಾಕಿದ್ದ ನಿತೀಶ್, ಹಲಬಗೆಯ ರಾಜಕೀಯ ಪಕ್ಷಗಳ ನಾಯಕರನ್ನು ಒಪ್ಪಿಸಬಲ್ಲ ನುಡಿಗಟ್ಟು, ತರ್ಕ, ವಾದಗಳನ್ನು ಬಳಸಬಲ್ಲರು. ಈ ಸಲ ನಿತೀಶ್ ಬಹಳಷ್ಟು ಹೋಮ್‌ವರ್ಕ್ ಮಾಡಿ ಅಖಾಡಕ್ಕಿಳಿದಿದ್ದಾರೆ. 2024ರ ಲೋಕಸಭಾ ಚುನಾವಣೆಗೆ ಮುನ್ನ ಬದಲಾವಣೆಯ ಗಾಳಿ ಸ್ಪಷ್ಟವಾಗಿ ಬೀಸುತ್ತಿರುವುದರ ಜಾಡು ಹಿಡಿದು ಖಚಿತ ಹೆಜ್ಜೆಗಳನ್ನಿಟ್ಟಿದ್ದಾರೆ. ಕೊಂಚ ಚೇತರಿಸಿಕೊಂಡಿರುವ ಲಾಲೂ ಪ್ರಸಾದ್ ಅಖಾಡಕ್ಕೆ ಇಳಿದಿರುವುದು ವಿರೋಧ ಪಕ್ಷಗಳ ಒಕ್ಕೂಟದ ಬಲ ಹೆಚ್ಚಿಸಿದೆ.

ಹಲವು ಪಕ್ಷಗಳು ಒಗ್ಗೂಡಿ ಕೇಂದ್ರದಲ್ಲಿ ಆಡಳಿತ ಹಿಡಿಯುವ ಪರಿಪಾಟ 1977ರಿಂದಲೂ ನಡೆದುಕೊಂಡು ಬಂದಿದೆ, ಇವತ್ತಿಗೂ ಮುಂದುವರಿದಿದೆ. ಈ ಎರಡು ಅವಧಿಯಲ್ಲಿ ಬಿಜೆಪಿ ಕೇಂದ್ರದಲ್ಲಿ ಸರ್ಕಾರ ರಚಿಸುವಷ್ಟು ಬಹುಮತ ಪಡೆದಿದ್ದರೂ, ಅದು ಕೂಡ ಕೇಂದ್ರ, ರಾಜ್ಯಗಳಲ್ಲಿ ಸುಮಾರು ಹದಿನೈದಿಪ್ಪತ್ತು ಪಕ್ಷಗಳ ಕೂಟವಾಗಿದೆ. ಬಿಜೆಪಿ ಹಲವು ರಾಜ್ಯಗಳಲ್ಲಿ ಸ್ಥಳೀಯ ಪಕ್ಷಗಳ ಜೊತೆಗಿನ ಹೊಂದಾಣಿಕೆಯಿಂದ ಆಡಳಿತ ನಡೆಸುತ್ತಿದೆ. ಅದು ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರಗಳಲ್ಲಿ ಪಕ್ಷಾಂತರದ ಮೂಲಕ ಅಧಿಕಾರ ಪಡೆದ ಅಸಹ್ಯ ಕೂಡ ನಮ್ಮ ಕಣ್ಣ ಮುಂದಿದೆ. ಹೀಗಾಗಿ ವಿರೋಧ ಪಕ್ಷಗಳ ಒಕ್ಕೂಟವನ್ನು ತಮಾಷೆ ಮಾಡುವ ಯಾವ ಹಕ್ಕೂ ಬಿಜೆಪಿಗಿಲ್ಲ.

ಹೊಸ ಒಕ್ಕೂಟದಲ್ಲಿರುವ ವಿರೋಧ ಪಕ್ಷಗಳು ಕೇಂದ್ರದಲ್ಲಿ ಅಧಿಕಾರದಲ್ಲಿಲ್ಲ ಎನ್ನುವುದನ್ನು ಬಿಟ್ಟರೆ, ಉಳಿದಂತೆ ಅವು ಹಲವು ರಾಜ್ಯಗಳಲ್ಲಿ ಆಡಳಿತ ಪಕ್ಷಗಳಾಗಿವೆ. ಎಎಪಿ ದೆಹಲಿ, ಪಂಜಾಬ್‌ನಲ್ಲಿ ಅಧಿಕಾರದಲ್ಲಿದೆ. ಕಾಂಗ್ರೆಸ್ ನಾಲ್ಕು ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ತಮಿಳುನಾಡು, ಜಾರ್ಖಂಡ್, ಬಿಹಾರ ರಾಜ್ಯಗಳಲ್ಲಿ ಮೈತ್ರಿ ಸರ್ಕಾರದ ಭಾಗವಾಗಿದೆ. ತೃಣಮೂಲ ಕಾಂಗ್ರೆಸ್ ಪಶ್ಚಿಮ ಬಂಗಾಳದಲ್ಲಿ ಅಧಿಕಾರದಲ್ಲಿದೆ. ಡಿಎಂಕೆ ತಮಿಳುನಾಡಿನಲ್ಲಿ, ಜಾರ್ಖಂಡ್ ಮುಕ್ತಿ ಮೋರ್ಚಾ ಜಾರ್ಖಂಡ್‌ನಲ್ಲಿ, ಆರ್‌ಜೆಡಿ- ಜೆಡಿಯು ಬಿಹಾರದಲ್ಲಿ ಅಧಿಕಾರದಲ್ಲಿವೆ. ಸಮಾಜವಾದಿ ಪಕ್ಷ ಉತ್ತರಪ್ರದೇಶದ ಪ್ರಧಾನ ವಿರೋಧ ಪಕ್ಷವಾಗಿದೆ.

ಇದೆಲ್ಲದರ ಜೊತೆಗೆ, ನಿತೀಶ್ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ದಶಕಗಳ ರಾಜಕೀಯಾನುಭವ ಹಾಗೂ ಸಹನೆಯ ರಾಜಕಾರಣ ಒಕ್ಕೂಟವನ್ನು ಸಮರ್ಥವಾಗಿ ಮುನ್ನಡೆಸಬಲ್ಲವು. ಹಿಂದಿನ ವರ್ಷ ಅನಿರೀಕ್ಷಿತವಾಗಿ ಕಾಂಗ್ರೆಸ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಪಕ್ಷದಲ್ಲಿ ಅಪರೂಪದ ಹೊಂದಾಣಿಕೆಯ ವಾತಾವರಣವನ್ನು ಸಮರ್ಥವಾಗಿ ನಿರ್ಮಿಸಿದ್ದಾರೆ. ಇದೀಗ ಛತ್ತೀಸಗಢದಲ್ಲಿ ಭೂಪೇಶ್ ಬಘೇಲ್ ನೇತೃತ್ವದ ಸರ್ಕಾರದಲ್ಲಿ ಮತ್ತೊಬ್ಬ ಪ್ರಭಾವಶಾಲಿ ನಾಯಕ ಸಿಂಗ್ ದೇವ್ ಅವರನ್ನು ಉಪಮುಖ್ಯಮಂತ್ರಿ ಮಾಡಿರುವ ಖರ್ಗೆ, ಛತ್ತೀಸಗಢದ ವಿಧಾನಸಭಾ, ಲೋಕಸಭಾ ಚುನಾವಣೆಗಳೆರಡರಲ್ಲೂ ಪಕ್ಷದ ಗೆಲುವಿಗೆ ಹಾದಿ ನಿರ್ಮಿಸಿದ್ದಾರೆ.

ಇನ್ನು ನಿತೀಶ್ ತಂಡ ರೂಪಿಸಿರುವ ಚುನಾವಣಾ ಕ್ಷೇತ್ರಗಳ ಹಂಚಿಕೆಯ ಸೂತ್ರ ಕೂಡ ವೈಜ್ಞಾನಿಕವಾಗಿದೆ: ಪ್ರತಿ ರಾಜ್ಯದ ಲೋಕಸಭಾ ಕ್ಷೇತ್ರಗಳಲ್ಲಿ ಯಾವ ಪಕ್ಷದ ವೋಟು ಗಳಿಕೆ ಈವರೆಗೆ ಎಷ್ಟಿದೆಯೆಂಬ ಅಂಕಿ- ಅಂಶಗಳ ಖಚಿತ ಲೆಕ್ಕಾಚಾರ; ಆ ಆಧಾರದಲ್ಲಿ ವಸ್ತುನಿಷ್ಠವಾಗಿ ಸೀಟು ಹಂಚಿಕೆ. ಒಕ್ಕೂಟ ಒಪ್ಪಿದ ಪಕ್ಷದ ಅಭ್ಯರ್ಥಿಯ ಗೆಲುವಿಗಾಗಿ ಎಲ್ಲ ಪಕ್ಷಗಳೂ ಬದ್ಧತೆಯಿಂದ ಕೆಲಸ ಮಾಡಬೇಕು. ಒಕ್ಕೂಟದಲ್ಲಿರುವ ಎಲ್ಲ ಪಕ್ಷಗಳ ವೋಟುಗಳೂ ಒಬ್ಬ ಸಾಮಾನ್ಯ ಅಭ್ಯರ್ಥಿಗೆ ವರ್ಗಾವಣೆ ಆಗಬೇಕು. ಈ ಸೂತ್ರ ಬಿಹಾರ, ತಮಿಳುನಾಡಿನಲ್ಲಿ ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ದಕ್ಷವಾಗಿ ಕೆಲಸ ಮಾಡಿದೆ. ನಿತೀಶ್ ಅವರ ಈ ಸೂತ್ರಕ್ಕೆ ಸದ್ಯಕ್ಕೆ ಒಕ್ಕೂಟದ ಪಕ್ಷಗಳ ಒಪ್ಪಿಗೆ ಇರುವಂತಿದೆ.

ಇನ್ನು ದೇಶದುದ್ದಕ್ಕೂ ಓಡಾಡಿ ಇಡೀ ಒಕ್ಕೂಟದ ಅಭ್ಯರ್ಥಿಗಳತ್ತ ಮತಗಳನ್ನು ತಿರುಗಿಸಬಲ್ಲ ನಾಯಕರ ಪಡೆಯೇ ಇಲ್ಲಿದೆ. ರಾಹುಲ್ ಇವರ ಮುಂಚೂಣಿಯಲ್ಲಿದ್ದಾರೆ. ಕೊಂಚ ಸೆಡವು ಬಿಟ್ಟು, ಉದಾರವಾಗಿ ನಡೆದುಕೊಂಡರೆ, ಅರವಿಂದ ಕೇಜ್ರಿವಾಲ್ ದೇಶದುದ್ದಕ್ಕೂ ಒಕ್ಕೂಟಕ್ಕೆ ಮಧ್ಯಮ ವರ್ಗದ ಮತಗಳನ್ನು ಸೆಳೆಯಬಲ್ಲರು. ಕೇಜ್ರಿವಾಲ್ ಎತ್ತರದ ನಾಯಕರಾಗಬೇಕೆಂದರೆ, ಪಟ್ನಾ ಸಭೆಯಲ್ಲಿ ಕಾಂಗ್ರೆಸ್ಸನ್ನು ಮಣಿಸಲು ಅನುಸರಿಸಿದ ಪಿಳ್ಳೆ ನೆವವನ್ನು ಕೈಬಿಡಬೇಕು. ‘ಮಾಡು ಇಲ್ಲವೆ ಮಡಿ’ಯ ದೊಡ್ಡ ಚುನಾವಣಾ ಗುರಿ ಎದುರಿಗಿರುವಾಗ ಸಣ್ಣಪುಟ್ಟ ಕಲಹಗಳಲ್ಲಿ ಕಾಲ ಕಳೆಯುವುದು ಮುತ್ಸದ್ದಿಗಳ ಲಕ್ಷಣವಲ್ಲ. ಈ ಮಾತು ಉಳಿದವರಿಗೂ ಅನ್ವಯಿಸುತ್ತದೆ.

ಅಷ್ಟೇ ಮುಖ್ಯವಾಗಿ, ಒಕ್ಕೂಟ ನಿಜವಾದ ಅರ್ಥದಲ್ಲಿ ದೇಶ ನವನಿರ್ಮಾಣದ ಒಕ್ಕೂಟವಾದಾಗ ಮಾತ್ರ ಜನ ದೊಡ್ಡ ಮಟ್ಟದಲ್ಲಿ ಒಕ್ಕೂಟದೆಡೆಗೆ ಓಡೋಡಿ ಬರುತ್ತಾರೆ. ಕರ್ನಾಟಕದ ಫಲಿತಾಂಶದ ನಂತರ ಈ ಹೊಸ ದಿಕ್ಸೂಚಿಯನ್ನು ಗ್ರಹಿಸಿ ಬೆಚ್ಚಿದ ಬಿಜೆಪಿ, ಜನತಾದಳ, ಅಕಾಲಿದಳಗಳನ್ನೂ ತನ್ನ ಕೂಟಕ್ಕೆ ಆಹ್ವಾನಿಸಿದೆ! ಈ ಬೆಳವಣಿಗೆ ನೋಡಿದರೆ, ‘ವಿರೋಧಿ ಒಕ್ಕೂಟದಲ್ಲಿ ಪ್ರಧಾನಿ ಪಟ್ಟಕ್ಕೆ ಯಾರಿದ್ದಾರೆ?’ ಎಂಬ ಬಿಜೆಪಿ- ಬಿಜೆಪಿಪರ ಮಾಧ್ಯಮಗಳ ಹುಸಿ ಅಟ್ಟಹಾಸ ಈ ಚುನಾವಣೆಯಲ್ಲಿ ಮುಖ್ಯವಾಗಲಾರದು ಎನ್ನಿಸುತ್ತದೆ.

ಪ್ರಧಾನಿ ಪಟ್ಟದ ಪ್ರಶ್ನೆಯನ್ನು ಯಾವ ಪಕ್ಷ ಹೆಚ್ಚುಹೆಚ್ಚು ಸೀಟುಗಳನ್ನು ಪಡೆಯುತ್ತದೆ ಎಂಬುದರ ಮೇಲೋ, ಸಾಮರ್ಥ್ಯದ ಮೇಲೋ ಒಮ್ಮತದಿಂದ ನಿರ್ಧರಿಸಬಹುದು. ಈ ಒಕ್ಕೂಟದಲ್ಲಿ ಪ್ರಧಾನಿ ಪಟ್ಟಕ್ಕೆ ಅರ್ಹರಾದ ಸಮರ್ಥ ನಾಯಕರಿದ್ದಾರೆ. ‘ಭಾರತ್ ಜೋಡೊ’ ಯಾತ್ರೆಯ ಪ್ರೀತಿ ಸಂದೇಶದಿಂದ ರಾಹುಲ್ ಗಾಂಧಿಯವರ ವರ್ಚಸ್ಸು ಬಹು ದೊಡ್ಡ ಮಟ್ಟದಲ್ಲಿ ಜಿಗಿದಿರುವುದನ್ನು ಸಮೀಕ್ಷೆಗಳು ತೋರಿಸಿವೆ. ಕೇಂದ್ರ, ರಾಜ್ಯಗಳಲ್ಲಿ ದಶಕಗಟ್ಟಲೆ ಅಧಿಕಾರ ನಡೆಸಿರುವ ನಿತೀಶ್ ಹಾಗೂ ಈಚಿನ ವರ್ಷಗಳಲ್ಲಿ ರೂಪುಗೊಂಡಿರುವ ಕೇಜ್ರಿವಾಲ್ ಈ ಇಬ್ಬರ ರಾಷ್ಟ್ರೀಯ ವರ್ಚಸ್ಸು ಕೂಡ ಬೆಳೆದಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್ ಪಕ್ಷದಲ್ಲಿ ಮಾತುಕತೆಯ ಸೌಹಾರ್ದ ವಾತಾವರಣ ನಿರ್ಮಿಸಿ ಜನಪ್ರಿಯರಾಗಿದ್ದಾರೆ. ಮಧ್ಯಪ್ರದೇಶದ ದಿಗ್ವಿಜಯ್ ಸಿಂಗ್, ಎರಡನೇ ಬಾರಿಗೆ ಕರ್ನಾಟಕದ ಮುಖ್ಯಮಂತ್ರಿಯಾಗಿ ದೊಡ್ಡ ನಾಯಕರಾಗಿ ಬೆಳೆದಿರುವ ಸಿದ್ದರಾಮಯ್ಯ... ಹೀಗೆ ಹಲವು ದಕ್ಷ ನಾಯಕರಿದ್ದಾರೆ. ಡಿಎಂಕೆಯ ಸ್ಟಾಲಿನ್ ಜನಪ್ರಿಯತೆ ಕಾಯ್ದಿಟ್ಟುಕೊಂಡಿದ್ದಾರೆ. ಇವರಲ್ಲಿ ಯಾರಾದರೂ ಪ್ರಧಾನಿ ಸ್ಥಾನಕ್ಕೆ ಅರ್ಹರಾಗಬಲ್ಲರು; ಒಕ್ಕೂಟಕ್ಕೆ ಹೊಸ ಮತದಾರರನ್ನು ಸೆಳೆಯಬಲ್ಲರು. ಶರದ್ ಪವಾರ್, ಉದ್ಧವ್ ಠಾಕ್ರೆ ಥರದವರು ಅಕ್ಕಪಕ್ಕದ ರಾಜ್ಯಗಳಲ್ಲೂ ಪ್ರಭಾವ ಬೀರಬಲ್ಲರು.

ಒಕ್ಕೂಟದಲ್ಲಿ ಭಾಗಿಯಾಗಿರುವ ಕಮ್ಯುನಿಸ್ಟ್ ಪಕ್ಷಗಳು ಸಂಘಟನಾ ಶಕ್ತಿ, ತಾತ್ವಿಕ ಭಾಷೆ, ಸಾಮಾಜಿಕ ಜಾಲತಾಣಗಳ ಮೂಲಕ ದೇಶದಾದ್ಯಂತ ಅಭಿಪ್ರಾಯ ರೂಪಿಸುವ ಕ್ರಿಯಾಶೀಲ ಪಡೆಗಳನ್ನು ರೂಪಿಸಬಲ್ಲವು. ದೇಶದ ರೈತ ಚಳವಳಿ, ದಲಿತ, ಪ್ರಗತಿಪರ ಚಳವಳಿಗಳು ಸ್ವಯಂಪ್ರೇರಿತವಾಗಿ ಒಕ್ಕೂಟದ ಪರ ನಿಲ್ಲಬಲ್ಲವು. ನೊಂದಿರುವ ಅಲ್ಪಸಂಖ್ಯಾತರಂತೂ ಈ ಬೆಳವಣಿಗೆಯನ್ನು ಮನದುಂಬಿ ಬೆಂಬಲಿಸಬಲ್ಲರು.

ಈ ಎಲ್ಲರೂ ಒಗ್ಗೂಡಿ ರೂಪಿಸಬಲ್ಲ ದೇಶ ಜೋಡಣೆಯ ಹೊಸ ರಾಜಕಾರಣದ ಸಾಧ್ಯತೆಯಿಂದ ಇಡೀ ದೇಶದಲ್ಲಿ ವಿರೋಧ ಪಕ್ಷಗಳ ಒಕ್ಕೂಟಕ್ಕೆ ದೊಡ್ಡ ಬಲ ಮೂಡಬಹುದು. ಹೊಸ ಅಲೆ ಏಳಬಹುದು. ಇದಕ್ಕೆ ಕರ್ನಾಟಕವೇ ಸಮರ್ಥ ಮಾದರಿಯನ್ನು ತೋರಿಸಿದೆ. ಕಾಂಗ್ರೆಸ್, ಕರ್ನಾಟಕದಲ್ಲಿ ಖಚಿತ ಆಡಳಿತ ವಿರೋಧಿ ಅಲೆ ರೂಪಿಸಿ, ಸ್ಪಷ್ಟವಾದ ಸಾಮರಸ್ಯ, ಸಾಮಾಜಿಕ ನ್ಯಾಯದ ಸಂದೇಶ ಕೊಟ್ಟು, ಚುರುಕಾಗಿ ಕೆಲಸ ಮಾಡತೊಡಗಿದೆ. ಈ ಕರ್ನಾಟಕ ಮಾದರಿಯು ಮಧ್ಯಪ್ರದೇಶದ ಮುಂದಿನ ವಿಧಾನಸಭಾ ಚುನಾವಣೆಯಲ್ಲೂ ಮುಖ್ಯ ಪಾತ್ರ ವಹಿಸಲಿದೆ. ಕರ್ನಾಟಕದಂತೆಯೇ ಪಕ್ಷಾಂತರಿ ಸರ್ಕಾರಗಳನ್ನು ಸೋಲಿಸುವ ಸಾಧ್ಯತೆಗಳು ಮಧ್ಯಪ್ರದೇಶ, ಮಹಾರಾಷ್ಟ್ರಗಳಲ್ಲೂ ಹೆಚ್ಚಿವೆ.

ರಾಜಕೀಯ ಎನ್ನುವುದು ಅಂತಿಮವಾಗಿ ಅಧಿಕಾರದ ಆಟವಿರಬಹುದು. ಆದರೆ ಎಲ್ಲ ಕಾಲದಲ್ಲೂ ರಾಜಕೀಯಕ್ಕೆ ದೇಶದ ಜನರನ್ನು ಬೆಸೆಯುವ ಹಾಗೂ ದೇಶದ ಸಕಲ ಸಮಸ್ಯೆಗಳಿಗೂ ನಿಜವಾದ ಪರಿಹಾರ ಹುಡುಕುವ ಆದ್ಯ ಕರ್ತವ್ಯವಿದೆ. ಈ ರಾಷ್ಟ್ರೀಯ ಸಂದೇಶವನ್ನು ದೇಶದುದ್ದಕ್ಕೂ ಹಬ್ಬಿಸುವಲ್ಲಿ ಒಕ್ಕೂಟ ಸಫಲವಾದರೆ ಹೊಸ ಬದಲಾವಣೆಯ ಅಲೆಯನ್ನು ಯಾವ ಶಕ್ತಿಗಳೂ ತಡೆಯಲಾರವು.

ಚುರುಮುರಿ

ಮನೆ ಮನೆ ಕಥೆ!

• ಬಿ.ಎನ್.ಮಲ್ಲೇಶ್

ಕಮಲವ್ವ, ತೆನೆಯಕ್ಕ ಚಾ ಕುಡೀತಾ ಕಷ್ಟ ಸುಖ ಮಾತಾಡ್ತಾ ಕುಂತಿದ್ರು. ‘ಏನ್ ಕಮಲವ್ವ, ನಿಮ್ಮನೇಲಿ ಏನೋ ಜೋರ್ ಗದ್ಲ ನಡೆದಂಗೈತಿ, ಏನ್ಕತಿ?’ ತೆನೆಯಕ್ಕ ಕೇಳಿದಳು.

‘ಅಯ್ಯೋ ಅದಾ... ಸೋತೋರ ಗದ್ಲ. ಮನಿಮಕ್ಕಳು ಬೇರೇರ ಜತಿ ಒಳ ಒಪ್ಪಂದ ಮಾಡ್ಕಂಡ್ರೆ ಮನಿ ಉಳೀತತಾ? ನಂದಿರ್ಲಿ, ನಿಮ್ಮನೇಲಿ ಏನು, ಸದ್ದಿಲ್ಲ ಗದ್ದಿಲ್ಲ... ಏಕ್‌ದಂ ಗಪ್ಚಾಗಿದೀರಿ?’ ಕಮಲವ್ವ ನಕ್ಕಳು.

‘ಏನ್ಮಾಡೋದೈತಿ ಕಮಲವ್ವ, ಮನಿಮಕ್ಕಳು ಎಲ್ಲ ಸೋತು ಕುಂತಾರೆ. ಇದಕ್ಕೆಲ್ಲ ಆ ಕೈಯಪ್ಪನೇ ಕಾರಣ ಅಂತ ಯಜಮಾನ್ರು ಯರ್‍ರಾಬಿರ್‍ರಿ ಸಿಟ್ಟಿಗೆದ್ದಿದಾರೆ’.

‘ಏನೋ ನಮ್ ಬಾಳುವಿ ಹಿಂಗಾತು ನೋಡು. ಆ ಕೈಯಪ್ಪ ಏನೇನೋ ಗ್ಯಾರಂಟಿ ಆಸಿ ತೋರ್ಸಿ ಊರ ಮಂದಿನೆಲ್ಲ ಬುಟ್ಟಿಗೆ ಹಾಕ್ಕಂಡಾನ. ಅದೆಲ್ಲ ಸುಳ್ಳು ಅಂತ ನಾವು ಎಲ್ರಿಗೂ ತಿಳಿಸಿ ಹೇಳಬೇಕು’.

‘ಅಲ್ಲ, ಇನ್ನೊಂದ್ ಸ್ವಲುಪ ವೋಟ್ ತಗಂಡಿದ್ರೆ ನಾವೂ ನೀವು ಕೂಡಿ ಯಜಮಾನಿಕಿ ನಡೆಸಬೋದಿತ್ತು’ ತೆನೆಯಕ್ಕ ಬೇಸರ ವ್ಯಕ್ತಪಡಿಸಿದಳು.

ಅಷ್ಟರಲ್ಲಿ ಅದೇ ದಾರೀಲಿ ಬಂದ ಕೈಯಪ್ಪ ‘ಓ... ಏನು, ಜೋರ್ ಮೀಟಿಂಗ್ ನಡೆದೈತಿ? ಕಮಲವ್ವ, ನಿಮ್ಮನೇಲಿ ಯಾರೀಗ ಯಜಮಾನ್ರು?’ ಎಂದ.

‘ನಮ್ಮನಿ ಸುದ್ದಿ ಇರ್ಲಿ, ನಿಮ್ಮನೇಲಿ ಎಲ್ರೂ ಯಜಮಾನ್ರೇ ಅಂತೆ?’ ಕಮಲವ್ವ ನಕ್ಕಳು.

‘ಅದು ಮನಿ ಮನಿ ಕಥಿ ಬಿಡು, ಆದ್ರೂ ನಿಮಗೆ ಹಿಂಗಾಗಬಾರ್ದಿತ್ತು. ತೆನೆಯಕ್ಕ, ನೀನು ಮೊನ್ನೆ ತೆನಿ ಇಳಿಸಿ ಫ್ರೀ ಬಸ್ ಹತ್ತಿ ಧರ್ಮಸ್ಥಳಕ್ಕೆ ಹೋದಂಗಿತ್ತು?’ ಕೈಯಪ್ಪ ಮೆಲ್ಲಗೆ ಕಾಲೆಳೆದ.

‘ಅದೊಂದೇ ನಿಮ್ ಗ್ಯಾರಂಟಿ. ಅಕ್ಕಿಲ್ಲ, ರೊಕ್ಕಿಲ್ಲ, ಪಕ್ಕಿಲ್ಲ. ತರಕಾರಿ ರೇಟು ಕೇಳಿದೀಯ? ಟಮೋಟೊ ರೇಟು ಸೇಬುಹಣ್ಣಿನ ರೇಟು ಒಂದೇ ಆಗಿದಾವು’ ತೆನೆಯಕ್ಕ ರೇಗಿದಳು.

‘ಶಾಂತಿ ಶಾಂತಿ... ಇನ್‌ಮ್ಯಾಲೆ ಸಾರಿಗೆ, ಪಲ್ಯಕ್ಕೆ ಟಮೋಟೊ ಯಾಕೆ, ಸೇಬು ಹಣ್ಣೇ ಹಾಕ್ರಿ ಅಂತ ಹಂಗ್ ಮಾಡಿದೀವಿ. ನಮ್ ರಾಜ್ಯದಾಗೆ ಎಲ್ರೂ ಸುಖವಾಗಿರಬೇಕು ನೋಡು’ ಕೈಯಪ್ಪ ನಕ್ಕ. ಕಮಲವ್ವ, ತೆನೆಯಕ್ಕ ಪಿಟಿಕ್ಕನ್ನಲಿಲ್ಲ.

ಸಂಗತ

‘ಬೆನ್ನು’ವಿನ ಬೆನ್ನು ಹತ್ತಿದಾಗ!

ಭೂಮಿಗೆ ಅಪ್ಪಳಿಸಬಹುದೆಂದು ಅಂದಾಜಿಸಲಾಗಿರುವ ಕ್ಷುದ್ರಗ್ರಹ ಬೆನ್ನುವಿನ ಬಗ್ಗೆ ಹೆಚ್ಚಿನ ಮಾಹಿತಿ ಅರಿಯಲು ನಾಸಾ ಸರ್ವಪ್ರಯತ್ನವನ್ನೂ ನಡೆಸಿದೆ

• ಶ್ರೀಗುರು

ಕ್ಷುದ್ರಗ್ರಹಗಳ ಕುರಿತು ಮಾತು ಬಂದಾಗಲೆಲ್ಲ, ಅವು ಭೂಮಿಗೆ ಯಾವಾಗ ಅಪ್ಪಳಿಸಿಬಿಡುತ್ತವೋ ಎಂಬ ಆತಂಕದ ಚರ್ಚೆ ಶುರುವಾಗುತ್ತದೆ. ಹಿಂದೆ ಆದ ಪ್ರಕರಣಗಳ ನೆನಪಾಗಿ ಗಾಬರಿಯಾಗುತ್ತದೆ. 51° ನಾರ್ಥ್, ಆರ್ಮಗೆಡ್ಡಾನ್, ಡೀಪ್ ಇಂಪ್ಯಾಕ್ಟ್‌ನಂಥ ಸಿನಿಮಾಗಳಲ್ಲಿ ತೋರಿಸಿದಂತೆ ನಡೆದರೆ ಭೂಮಿಯ ಗತಿಯೇನು ಎನ್ನುವವರಿದ್ದಾರೆ.

ಕ್ಷುದ್ರಗ್ರಹಗಳ ಮೈಯಲ್ಲೇನಿದೆ ಎಂಬುದು ತಿಳಿದರೆ ಅದರ ದಿಕ್ಕು ಬದಲಾಯಿಸಿ ಭೂಮಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಬಹುದೆಂಬ ಲೆಕ್ಕಾಚಾರ ವಿಜ್ಞಾನಿಗಳದ್ದು. ಮುಂದಿನ ಶತಮಾನದ ಉತ್ತರಾರ್ಧದಲ್ಲಿ ‘ಬೆನ್ನು’ ಎಂಬ ಕ್ಷುದ್ರಗ್ರಹ ಭೂಮಿಗೆ ಅಪ್ಪಳಿಸಬಹುದು ಎಂಬ ಮಾಹಿತಿ ಈಗಲೇ ಲಭಿಸಿದೆ. ಬೆನ್ನು ಪ್ರತಿ 6 ವರ್ಷಗಳಿಗೊಮ್ಮೆ ಭೂಮಿಯ ಸಮೀಪ ಬರುತ್ತದೆ ಮತ್ತು ಭೂಮಿಯು ಸೂರ್ಯನನ್ನು ಸುತ್ತುವ ಕಕ್ಷೆಯನ್ನು ಹಾಯುತ್ತದೆ. 500 ಮೀಟರ್ ಸರಾಸರಿ ವ್ಯಾಸವಿರುವ ‘ಬೆನ್ನು’ ಭೂಮಿಯಿಂದ ಹತ್ತು ಕೋಟಿ ಕಿ.ಮೀ. ದೂರದಲ್ಲಿ ಭೂಮಿಯನ್ನು ಸುತ್ತುತ್ತಿದೆ.

450 ಕೋಟಿ ವರ್ಷ ವಯಸ್ಸಿನ ಈ ಕ್ಷುದ್ರಗ್ರಹ 1999ರಲ್ಲಿ ಪತ್ತೆಯಾಗಿತ್ತು. 2013ರಲ್ಲಿ ನಾಸಾದವರು ಕ್ಷುದ್ರಗ್ರಹಕ್ಕೊಂದು ಹೆಸರು ಕೊಡುವ ಸ್ಪರ್ಧೆಯನ್ನು ಏರ್ಪಡಿಸಿದ್ದರು. ಆಗ ಉತ್ತರ ಕೆರೊಲಿನಾದ ಶಾಲಾ ಬಾಲಕನೊಬ್ಬ ಸೂಚಿಸಿದ ಬೆನ್ನು ಎಂಬ ಹೆಸರು ಆಯ್ಕೆಯಾಯಿತು. ಬೆನ್ನು ಎಂಬುದು ಈಜಿಪ್ಟಿನ ದೇವತೆಯ ಹೆಸರು. ಕ್ಷುದ್ರಗ್ರಹಗಳು ಖನಿಜ ಸಂಪತ್ತಿನ ಗಣಿಗಳೇ ಎಂದು ಅಂದಾಜಿಸಲಾಗಿದ್ದು, ಚಿನ್ನ, ಬೆಳ್ಳಿ, ಪ್ಲಾಟಿನಂ, ವಜ್ರಗಳು ದೊರಕಬಹುದು ಮತ್ತು ಲೀಥಿಯಂ ಸಿಕ್ಕರೆ ಭೂಮಿಗೆ ತಂದು ಕಾರು, ಬಸ್ಸು, ರೈಲುಗಳನ್ನೆಲ್ಲ ಅದರಿಂದಲೇ ಓಡಿಸಬಹುದು ಎಂಬ ಲೆಕ್ಕಾಚಾರ ವಿಜ್ಞಾನಿಗಳದ್ದು. ಹಿಂದೆ ಕ್ಷುದ್ರಗ್ರಹವೊಂದು ಭೂಮಿಗೆ ಅಪ್ಪಳಿಸಿದಾಗ ಇರಿಡಿಯಂ ಲೋಹದ ಪುಡಿ ಉತ್ತರ ಗೋಳಾರ್ಧದ ಅನೇಕ ದೇಶಗಳಲ್ಲಿ ಹರಡಿತ್ತು.

ಅದಕ್ಕಾಗಿ ನಾಸಾವು ಬೆನ್ನು ಕ್ಷುದ್ರಗ್ರಹದ ಬೆನ್ನು ಬಿದ್ದಿದೆ. ಭೂಮಿಗೆ ಅಪ್ಪಳಿಸಬಹುದೆಂದು ಅಂದಾಜಿಸಲಾಗಿರುವ ಕ್ಷುದ್ರಗ್ರಹವನ್ನು ಅರಿಯಲು ನಾಸಾ ಭಾರಿ ಬಂಡವಾಳದ ಓಸಿರಿಸ್ ರೆಕ್ಸ್ (OSIRIS – REX) ಎಂಬ ಬಾಹ್ಯಾಕಾಶ ನೌಕೆಯನ್ನು ಏಳು ವರ್ಷಗಳ ಹಿಂದೆ ಸೆಪ್ಟೆಂಬರ್ 8ರಂದು ಹಾರಿಸಿತ್ತು. 2018ರ ಡಿಸೆಂಬರ್ 3ರಂದು ಬೆನ್ನುವಿನ ಸಮೀಪ ಬಂದ ಓಸಿರಿಸ್, ಎರಡು ವರ್ಷಗಳ ಕಾಲ ಸುತ್ತಿ 2020ರ ಅಕ್ಟೋಬರ್ 20ರಂದು ಬೆನ್ನುವಿನ ಮೇಲೆ ನೈಟಿಂಗೇಲ್ ಎಂದು ಹೆಸರಿಸಿದ ಜಾಗದಲ್ಲಿ ರೊಬಾಟ್ ಬಳಸಿ ದೂಳು, ಮಣ್ಣು ಮತ್ತು ಬೆಣಚುಕಲ್ಲುಗಳನ್ನು ಸಂಗ್ರಹಿಸಿಕೊಂಡು 2021ರ ಮೇ 10ರಂದು ಅಲ್ಲಿಂದ ಹಿಂತಿರುಗಿ ಭೂಮಿಯ ಕಡೆ ಪಯಣ ಪ್ರಾರಂಭಿಸಿದ್ದು, ಸೆಪ್ಟೆಂಬರ್ 24ರಂದು ಭೂಮಿಯನ್ನು ತಲುಪಲಿದೆ.

ಈಗ ಓಸಿರಿಸ್ ಭೂಮಿಗೆ ಹೊತ್ತು ತರುವ ಬೆನ್ನುವಿನ ಪದಾರ್ಥ ಎಷ್ಟು ಅಂತೀರಿ? ಬರೀ 60 ಗ್ರಾಂ ದೂಳು, ಮಣ್ಣು ಮತ್ತು ಕಲ್ಲು. ಇದನ್ನು ಕೂಲಂಕಷವಾಗಿ ಅಭ್ಯಸಿಸುವ ಇರಾದೆ ವಿಜ್ಞಾನಿಗಳದ್ದು. ಕ್ಷುದ್ರಗ್ರಹದ ಚಿತ್ರಗಳನ್ನು ನೋಡಿ, ಅಲ್ಲಿನ ಬಂಡೆಗಳನ್ನು ಕಂಡು ಅದರ ಮೇಲ್ಮೈ ತುಂಬಾ ಗಡುಸಾಗಿರಬಹುದೆಂದು ವಿಜ್ಞಾನಿಗಳು ಅಂದುಕೊಂಡಿದ್ದರು. ಆದರೆ ಬೆನ್ನುವಿನ ಮೈ ತುಂಬಾ ಸಡಿಲ ಎಂದು ಪ್ರಾಥಮಿಕ ಅಧ್ಯಯನಗಳಿಂದ ಗೊತ್ತಾಗಿದೆ. ಓಸಿರಿಸ್‌ನ ರೊಬಾಟ್ ಕೈ (‘ಟಚ್ ಆ್ಯಂಡ್ ಗೋ ಸ್ಯಾಂಪಲ್ ಅಕ್ವಿಜಿಶನ್ ಮೆಕ್ಯಾನಿಸಮ್- TAGSAM) ಬಳಸಿ ಅದರ ಮೇಲ್ಮೈಯನ್ನು ಅತ್ಯಂತ ನಾಜೂಕಾಗಿ ಸ್ಪರ್ಶಿಸಿ, ಎರಡು ಕಡೆಗಳಿಂದ ನೈಟ್ರೋಜನ್ ಅನಿಲ ಒತ್ತಡವನ್ನು ಪ್ರಯೋಗಿಸಿ ಮಧ್ಯದ ನಳಿಕೆಯ ಮೂಲಕ ಕ್ಷುದ್ರಗ್ರಹದ ಸ್ಯಾಂಪಲ್ ಪಡೆಯಲಾಗಿದೆ.

ದೊರೆತಿರುವ ಸ್ಯಾಂಪಲ್‌ನ ಶೇ 30ರಷ್ಟು ಭಾಗವನ್ನಷ್ಟೇ ಪ್ರಯೋಗಗಳಿಗೆ ಬಳಸುವುದೆಂದು ನಿರ್ಧಾರವಾಗಿದ್ದು ಉಳಿದ ಶೇ 70ರಷ್ಟು ಭಾಗ ಮುಂದಿನ ಪೀಳಿಗೆಯ ಬುದ್ಧಿವಂತ ಹಾಗೂ ಚಾಣಾಕ್ಷ ಸಂಶೋಧಕರಿಗೆ ಮೀಸಲು ಎಂದು ನಾಸಾ ಘೋಷಿಸಿದೆ. ಜಾನ್ಸನ್ ಸ್ಪೇಸ್ ಸೆಂಟರ್‌ನ ಪ್ರಯೋಗಾಲಯ ತಲುಪುವ ಬೆನ್ನುವಿನ ಪದಾರ್ಥದಲ್ಲಿ ಶೇ 4ರಷ್ಟು ಕೆನಡಾಗೆ ಹಾಗೂ ಶೇ 0.5ರಷ್ಟು ಜಪಾನ್‌ಗೆ ರವಾನೆಯಾಗಲಿದೆ. ಎರಡೂ ದೇಶಗಳು ಓಸಿರಿಸ್ ಯೋಜನೆಗೆ ಸಹಕಾರ ನೀಡಿವೆ. ಇಪ್ಪತ್ತು ವರ್ಷಗಳ ಹಿಂದೆ ಜಪಾನ್ 30 ಕೋಟಿ ಕಿ.ಮೀ. ದೂರದ ಇತೊಕವಾ ಎಂಬ ಕ್ಷುದ್ರಗ್ರಹ ಅಧ್ಯಯನಕ್ಕೆ ಹಯಬುಸ ನೌಕೆಯನ್ನು ಕಳಿಸಿತ್ತು. ಆಗಲೂ ಸ್ಯಾಂಪಲ್ ತರಲಾಗಿತ್ತು.

ಮುಂದಿನ ಶತಮಾನದಲ್ಲಿ ಭೂಮಿಗೆ ಅಪ್ಪಳಿಸಬಹುದೆಂಬ ಮಾಹಿತಿ ಇರುವುದರಿಂದ ಬೆನ್ನುವಿನ ಅಧ್ಯಯನ ಸಮರ್ಪಕವಾಗಿ ಆಗಬೇಕೆಂಬುದು ನಾಸಾದ ಉದ್ದೇಶ. ಅಲ್ಲಿನ ಮಣ್ಣು, ಕಲ್ಲಿನ ಕಣಗಳಲ್ಲಿ ಎಷ್ಟರಮಟ್ಟಿಗೆ ಉಷ್ಣಧಾರಣಾ ಶಕ್ತಿ ಇದೆ, ಅಣುಗಳ ನಡುವೆ ಎಷ್ಟು ಜಾಗವಿದೆ, ಕುಟ್ಟಿದರೆ ಪುಡಿಯಾಗಲು ಎಷ್ಟು ಒತ್ತಡ ಬೇಕು ಎಂಬೆಲ್ಲ ವಿಚಾರಗಳ ಕುರಿತು ಸೂಕ್ಷ್ಮ ಅಧ್ಯಯನ ನಡೆಯಲಿದೆ. ವಿಶೇಷ ಮಾಸ್ ಸ್ಪೆಕ್ಟ್ರೋಮೀಟರ್ ಬಳಸಿ ಅಲ್ಲಿನ ಕಣಗಳಲ್ಲಿ ಸಾವಯವ ಪದಾರ್ಥವಿದೆಯೇ ಎಂಬುದನ್ನು ಪರೀಕ್ಷಿಸಲಾಗುತ್ತದೆ. ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಬಳಸಿ, ಬೆನ್ನು ಇದುವರೆಗೆ ಬಾಹ್ಯಾಕಾಶದಲ್ಲಿ ಏನೆಲ್ಲ ಆಘಾತ ಅನುಭವಿಸಿರಬಹುದು ಎಂಬುದರ ಬಗ್ಗೆ ಸಂಶೋಧನೆ ನಡೆಯಲಿದೆ. ಸೌರವ್ಯೂಹ ಹೇಗೆ ರಚನೆಯಾಗಿರಬಹುದು ಎಂಬುದರ ಅಧ್ಯಯನವೂ ಸಾಧ್ಯವಿದೆ ಎನ್ನುತ್ತಾರೆ ತಜ್ಞರು.

ನಮಗೆ ತಿಳಿದಿರುವ 12 ಅಣುಗಳಿರುವ ಇಂಗಾಲದ ಬದಲಿಗೆ ಒಂದು ಹೆಚ್ಚುವರಿ ನ್ಯೂಟ್ರಾನ್ ಇರುವ 13 ಅಣುಗಳ ಕಾರ್ಬನ್ ಪತ್ತೆಯೂ ಜರುಗಲಿದೆ. ಒಟ್ಟಿನಲ್ಲಿ ಬೆನ್ನುವಿನ ಬೆನ್ನು ಹತ್ತಿದ್ದಕ್ಕೆ ವಿಶ್ವ ಸೃಷ್ಟಿಯ ಮತ್ತಷ್ಟು ವಿವರಗಳು ಹೊರಬೀಳಲಿವೆ.

ವಾಚಕರ ವಾಣಿ

ಆಸ್ತಿ ವಿವರ ಸಲ್ಲಿಕೆ: ನಿಯಮ ಬಿಗಿಯಾಗಲಿ

ಚುನಾಯಿತ ಜನಪ್ರತಿನಿಧಿಗಳು ಪ್ರತಿವರ್ಷ ಜೂನ್ 30ರ ಒಳಗೆ ಕಡ್ಡಾಯವಾಗಿ ತಮ್ಮ ಆಸ್ತಿ ವಿವರವನ್ನು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಬೇಕೆಂಬ ನಿಯಮವಿದೆ. ಆದರೆ, ಬಹಳಷ್ಟು ಜನಪ್ರತಿನಿಧಿಗಳು ಈ ಕೆಲಸ ಮಾಡುವುದಿಲ್ಲ. ಅಂಥವರಿಗೆ ನೋಟಿಸ್ ನೀಡುತ್ತಾರೆ. ಆಸ್ತಿ ವಿವರ ನೀಡದ ಜನಪ್ರತಿನಿಧಿಗಳ ಹೆಸರು ಪತ್ರಿಕೆಗಳಲ್ಲಿ ಪ್ರಕಟವಾಗುತ್ತದೆ. ಈ ಕುರಿತ ವಿವರಗಳು ಸದನದ ಗಮನಕ್ಕೂ ಬರುತ್ತವೆ. ಆದರೆ ಈ ಕಾರಣಕ್ಕಾಗಿ ಯಾವುದೇ ಶಿಸ್ತುಕ್ರಮ ಅಥವಾ ಶಿಕ್ಷೆಗೆ ಒಳಗಾದ ನಿದರ್ಶನಗಳು ಇಲ್ಲ. ಹಾಗಾದರೆ ಈ ನಿಯಮದ ಅವಶ್ಯಕತೆಯಾದರೂ ಏನು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹಾಗಿದ್ದರೆ ಕಾಯ್ದೆ– ಕಾನೂನುಗಳು ಬರೀ ಪ್ರಜೆಗಳಿಗೆ ಮಾತ್ರವೇ?

ಯಾವುದೇ ಪ್ರಯೋಜನಕ್ಕೆ ಬಾರದೆ ಹಲ್ಲಿಲ್ಲದ ಹಾವಿನಂತಾಗಿರುವ ಈ ನಿಯಮಕ್ಕೆ ತಿದ್ದುಪಡಿ ತಂದು, ಸಕಾಲದಲ್ಲಿ ಆಸ್ತಿ ವಿವರ ಸಲ್ಲಿಸದ ಜನಪ್ರತಿನಿಧಿಗಳ ಮೇಲೆ ಶಿಸ್ತುಕ್ರಮ ಜರುಗಿಸಬೇಕು. ಈ ಮೂಲಕ ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂದು ನಿರೂಪಿಸಬೇಕಾಗಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

ಅಕ್ಕಿ ಬದಲು ಹಣ: ವಿರೋಧ ಬೇಡ

ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಯಡಿ ಬಿಪಿಎಲ್ ಕುಟುಂಬದ ಪ್ರತಿ ಸದಸ್ಯರಿಗೆ ಹೆಚ್ಚುವರಿಯಾಗಿ ನೀಡಬೇಕಾದ 5 ಕೆ.ಜಿ. ಅಕ್ಕಿಯನ್ನು ಹೊಂದಿಸಲು ಸರ್ಕಾರಕ್ಕೆ ಸದ್ಯಕ್ಕೆ ಸಾಧ್ಯವಾಗದೇ ಇರುವ ಕಾರಣ, ಅದಕ್ಕೆ ಬದಲು ಅಕ್ಕಿಯ ದರ ಕೆ.ಜಿಗೆ ₹ 34ರಂತೆ ₹ 170 ಅನ್ನು ಪ್ರತಿ ಫಲಾನುಭವಿ ಖಾತೆಗೆ ಜಮೆ ಮಾಡಲು ಸರ್ಕಾರ ತೀರ್ಮಾನಿಸಿರುವುದು ಸರಿಯಾಗಿದೆ. ಕೇಂದ್ರದಿಂದ 5 ಕೆ.ಜಿ. ಅಕ್ಕಿ ಸಿಗುತ್ತದೆ. ಇನ್ನು ಉಳಿದ 5 ಕೆ.ಜಿಗೆ ಪರ್ಯಾಯವಾಗಿ ಹಣ ಕೊಟ್ಟರೆ, ಜನರು ತಮಗೆ ಬೇಕಾಗುವ ಧಾನ್ಯಗಳನ್ನು ಖರೀದಿಸಬಹುದು. ಇದು ಕೂಡಾ ಒಂದು ರೀತಿಯಲ್ಲಿ ಹೊಟ್ಟೆ ತುಂಬಲು ಸಹಾಯ ಮಾಡುತ್ತದೆ.

ಅಕ್ಕಿ ನೀಡಿಕೆ ವಿಳಂಬವಾಗುತ್ತಿದ್ದಂತೆ ವಿರೋಧ ಪಕ್ಷಗಳು ತಕರಾರು ತೆಗೆದವು. ಅಕ್ಕಿ ಕೊಡುವುದಿಲ್ಲವಾದರೆ ಹಣ ಕೊಡಿ ಎಂದವು. ಈಗ ಅಕ್ಕಿ ಬದಲು ಹಣ ಕೊಡಲು ಸರ್ಕಾರ ಒಪ್ಪಿದೆ. ಆದರೆ 10 ಕೆ.ಜಿ. ಅಕ್ಕಿಯನ್ನೇ ಕೊಡಿ ಎಂದು ಅವು ಮತ್ತೆ ತಕರಾರು ತೆಗೆಯುತ್ತಿವೆ. ವಿರೋಧಕ್ಕಾಗಿ ವಿರೋಧ ಮಾಡುವುದು ಸರಿಯಲ್ಲ. ಇದು ಬಡಜನರಿಗೆ ಸಂಬಂಧಿಸಿದ ಯೋಜನೆ. ಇಲ್ಲಿ ಜನರ ಒಪ್ಪಿಗೆ ಮುಖ್ಯ. ಜನರೇ ಇದನ್ನು ಒಪ್ಪಿಕೊಂಡ ಮೇಲೆ ವಿರೋಧ ಪಕ್ಷಗಳು ಸುಮ್ಮನೆ ವಿರೋಧಿಸುವುದೇಕೆ?

ಪೂಜಾ ಎಸ್., ಕಲಬುರಗಿ

ಶಕ್ತಿ ಯೋಜನೆ: ಸಹಜ ಸ್ಥಿತಿಗೊಂದು ಸಲಹೆ

ರಾಜ್ಯ ಸರ್ಕಾರದ ಶಕ್ತಿ ಯೋಜನೆಯಿಂದಾಗಿ ಇತ್ತೀಚೆಗೆ ಕೆಲವೊಮ್ಮೆ ಪ್ರಯಾಣ ಬಹಳ ಕಷ್ಟಕರವಾಗಿದೆ. ಕೆಲವೊಮ್ಮೆ ಅದು ಸಾಧ್ಯವಾಗದೆಯೂ ಇರಬಹುದು. ಹಿರಿಯ ನಾಗರಿಕರು, ರೋಗಿಗಳ ಪ್ರಯಾಣವನ್ನಂತೂ ದೇವರೇ ಬಲ್ಲ. ಭಾನುವಾರ ರಜೆ ಇರುವುದರಿಂದ ಸಾಮಾನ್ಯವಾಗಿ ಪುಣ್ಯಕ್ಷೇತ್ರಗಳು, ಬಂಧುಮಿತ್ರರ ಮನೆಗಳು, ಮದುವೆ ಸಮಾರಂಭಗಳಂತಹ ಕಾರ್ಯಗಳಿಗೆ ಹೋಗಿಬರುವವರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಸರ್ಕಾರಿ ಹುದ್ದೆಗಳಿಗೆ ನಡೆಯುವ ನೇಮಕಾತಿ ಪರೀಕ್ಷೆ ಸೇರಿದಂತೆ ಇತರ ಪರೀಕ್ಷೆಗಳು ಭಾನುವಾರದಂದೇ ಹೆಚ್ಚಾಗಿ ನಡೆಯುವುದರಿಂದ, ಎಲ್ಲಾ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಶನಿವಾರ ಮಧ್ಯಾಹ್ನ 12ರಿಂದ ಸೋಮವಾರ ಮಧ್ಯಾಹ್ನ 12 ಗಂಟೆಯವರೆಗೆ ಹೆಚ್ಚು ಬಸ್ ಓಡಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಇದರಿಂದ ಪ್ರಯಾಣಿಕರೆಲ್ಲರಿಗೂ ಅನುಕೂಲವಾಗುತ್ತದೆ.

ಸರ್ಕಾರ ಮನಸ್ಸು ಮಾಡಿದರೆ ಹೆಚ್ಚು ಬಸ್ ಹೊಂದಿಸುವುದು ಅದಕ್ಕೆ ಕಷ್ಟವೇನಲ್ಲ. ಈ ದಿಸೆಯಲ್ಲಿ ಸರ್ಕಾರ ಗಂಭೀರವಾಗಿ ಚಿಂತಿಸಿ, ಪ್ರಯಾಣಿಕರ ಕಷ್ಟ ನಿವಾರಿಸಬೇಕು.

ಸಿ. ಪುಟ್ಟಯ್ಯ ಹಂದನಕೆರೆ, ತುಮಕೂರು

ಜ್ಯೋತಿಷದ ಹೆಸರಲ್ಲಿ ಕುಕೃತ್ಯಕ್ಕೆ ಬೆಂಬಲ ಸಲ್ಲ

ದೇಶದ ನಗರಗಳ ಅಪಾರ್ಟ್‌ಮೆಂಟ್, ಲಾಡ್ಜ್‌ಗಳ ಮುಂದೆ ಅಥವಾ ವಿವಿಧ ರಸ್ತೆಗಳ ಇಕ್ಕೆಲಗಳಲ್ಲಿ ಕಂಬಗಳ ಮೇಲೆ ಅಳವಡಿಸಿದ ಬೃಹತ್ ಫ್ಲೆಕ್ಸ್‌ಗಳಲ್ಲಿ ‘ಜ್ಯೋತಿಷ್ಯಾಲಯ’ ಎಂಬ ತಲೆಬರಹವುಳ್ಳ ಫಲಕಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಅವುಗಳಲ್ಲಿ ‘ಸ್ತ್ರೀ ವಶೀಕರಣ’, ‘ಮಾಟ’, ‘ಮಂತ್ರ’ ಎಂದೆಲ್ಲಾ ಬರೆದಿರುವುದನ್ನು ಕಾಣುತ್ತೇವೆ. ಸ್ತ್ರೀ ವಶೀಕರಣ ಅಂದರೆ, ಸ್ತ್ರೀಯರನ್ನು ಅಪಹರಿಸಲು ಅಥವಾ ಬಲವಂತವಾಗಿ ಕೈವಶ ಮಾಡಿಕೊಳ್ಳಲು ಉಪಾಯಗಳನ್ನು ಹೇಳಿಕೊಡುವುದು ಎಂದರ್ಥವಲ್ಲವೇ? ಹಾಗೆಯೇ ಮಾಟ, ಮಂತ್ರ ಮಾಡಿಕೊಡಲಾಗುವುದು ಅಂದರೆ, ಬೇರೆಯವರ ಹಕ್ಕುಗಳನ್ನು ಅವರಿಗೆ ಅರಿವಿಲ್ಲದಂತೆ ಕಿತ್ತುಕೊಂಡು ಅವರನ್ನು ತಮ್ಮಿಷ್ಟದಂತೆ ಶೋಷಣೆ ಮಾಡಲು ಸುಲಭದ ದಾರಿಗಳನ್ನು ಹೇಳಿಕೊಡಲಾಗುವುದು ಎಂದಲ್ಲವೇ? ಅಥವಾ ಮೇಲಿನಂತಹ ಅನರ್ಥಗಳನ್ನು ಮಾಡಲು ಜನರನ್ನು ಪುಸಲಾಯಿಸಿದಂತೆ ಆಗುವುದಿಲ್ಲವೇ?

ಇಂತಹ ‘ಜ್ಯೋತಿಷ್ಯಾಲಯ’ಗಳನ್ನು ತೆರೆದಿರುವ ಬಹುತೇಕರು ಖಗೋಳಶಾಸ್ತ್ರವನ್ನು ವೈಜ್ಞಾನಿಕ ತಳಹದಿಯ ಮೇಲೆ ಅಧ್ಯಯನ ಮಾಡಿರುವುದಿಲ್ಲ ಹಾಗೂ ಯಾವುದೇ ಅಧಿಕೃತ ವಿಶ್ವವಿದ್ಯಾಲಯದಲ್ಲಿ ಜ್ಯೋತಿಷ ಶಾಸ್ತ್ರ ಕುರಿತು ಅಧ್ಯಯನ ಮಾಡಿ ಪದವಿಯನ್ನು ಪಡೆದವರಾಗಿರುವುದಿಲ್ಲ.

ಒಂದುವೇಳೆ ಈ ವಿಷಯದಲ್ಲಿ ಅಧಿಕೃತ ಪದವಿಯನ್ನು ಪಡೆದವರಾಗಿದ್ದರೆ ಮೇಲೆ ತಿಳಿಸಿರುವ, ಅವೈಜ್ಞಾನಿಕವಾದ, ಮತ್ತೊಬ್ಬರಿಗೆ ಕೇಡನ್ನೇ ಉಂಟುಮಾಡುವ ಕುಕೃತ್ಯಗಳಿಗೆ ಪ್ರೋತ್ಸಾಹ ನೀಡುವಂತಹ ಕಾರ್ಯಗಳಿಗೆ ಕೈ ಹಾಕುವುದಿಲ್ಲ.

ಜ್ಯೋತಿಷದ ಹೆಸರಿನಲ್ಲಿ ಇನ್ನೂ ಅನೇಕಾನೇಕ ಕುಕೃತ್ಯಗಳನ್ನು ಮಾಡಲು ಪರೋಕ್ಷವಾಗಿ ಬೆಂಬಲ ನೀಡುವುದನ್ನು ತಡೆಗಟ್ಟಲು ಸರ್ಕಾರವು ಜ್ಯೋತಿಷಿಗಳಿಗೆ ಕಾನೂನಿನ ಚೌಕಟ್ಟಿನಲ್ಲಿ ನಿರ್ಬಂಧಗಳನ್ನು ಹೇರಬೇಕು. ಈ ಮೂಲಕ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಮಾನವ ಹಕ್ಕುಗಳನ್ನು ಕಾಪಾಡಲು ಕ್ರಮ ಕೈಗೊಳ್ಳಬೇಕು.

ಸಿದ್ಧಲಿಂಗಪ್ಪ ಸುಣಗಾರ, ಸೊರಟೂರು, ಗದಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಲ್ಲಿದ್ದಲು ಕೊರತೆ ಮತ್ತು ವಿದ್ಯುತ್ ದರ ಏರಿಕೆ ಸರ್ಕಾರವೇ ಸಮಸ್ಯೆಯ ಮೂಲ

• ಜಯಸಿಂಹ ಆರ್.

ದೇಶದ ಹಲವು ರಾಜ್ಯಗಳಲ್ಲಿ ವಿದ್ಯುತ್ ದರ ಏರಿಕೆಯಾಗಿದೆ. ವಿದ್ಯುತ್ ಉತ್ಪಾದನಾ ವೆಚ್ಚ ಏರಿಕೆಯಾಗಿರುವ ಕಾರಣ, ವಿದ್ಯುತ್ ದರವನ್ನೂ ಏರಿಕೆ ಮಾಡಬೇಕಾದ ಅನಿವಾರ್ಯ ಎದುರಾಗಿದೆ. ಇದರಿಂದ ದೇಶದ ಹಲವು ವಿದ್ಯುತ್ ಸರಬರಾಜು ಕಂಪನಿಗಳು 'ವಿದ್ಯುತ್ ಖರೀದಿ ಹೊಂದಾಣಿಕೆ ವೆಚ್ಚ'ವನ್ನು ಏರಿಕೆ ಮಾಡಿವೆ. ಪರಿಣಾಮವಾಗಿ ವಿದ್ಯುತ್ ದರ ಏರಿಕೆಯಾಗಿದೆ. ಆದರೆ, ಕೇಂದ್ರ ಸರ್ಕಾರದ ಕಲ್ಲಿದ್ದಲು ನೀತಿಯೇ ಇದಕ್ಕೆಲ್ಲಾ ಕಾರಣ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

ಈಚೆಗಿನ ಮೂರು ಆರ್ಥಿಕ ವರ್ಷಗಳಲ್ಲೂ ದೇಶೀಯ ಕಲ್ಲಿದ್ದಲಿನ ಉತ್ಪಾದನೆ ಏರುಗತಿಯಲ್ಲೇ ಇದೆ. 2021–22ಕ್ಕೆ ಹೋಲಿಸಿದರೆ, 2022–23ರಲ್ಲಿ ಕಲ್ಲಿದ್ದಲು ಉತ್ಪಾದನೆಯಲ್ಲಿ ಶೇ 14.78ರಷ್ಟು ಏರಿಕೆಯಾಗಿದೆ. ಹೀಗಿದ್ದೂ ಕಲ್ಲಿದ್ದಲು ಆಮದು ಮಾಡಿಕೊಳ್ಳಲು ಸರ್ಕಾರವು ಉತ್ತೇಜನ ನೀಡುತ್ತಿದೆ.

ದೇಶದಲ್ಲಿ ಕಲ್ಲಿದ್ದಲಿನ ಕೊರತೆ ಉಂಟಾಗಿದೆ. ಆಮದು ಕಲ್ಲಿದ್ದಲನ್ನು ಕಡ್ಡಾಯವಾಗಿ ಹೆಚ್ಚು ಬಳಸಿ ಎಂದು ಕೇಂದ್ರ ಹೇಳುತ್ತಿದೆ. ಆಮದು ಕಲ್ಲಿದ್ದಲು ಬಳಸುತ್ತಿರುವ ಕಾರಣ ವಿದ್ಯುತ್ ದರವನ್ನೂ ಏರಿಸಬೇಕಾಗಿದೆ ಎಂದು ಸಂಬಂಧಿತ ಪ್ರಾಧಿಕಾರಗಳು ಹೇಳುತ್ತಿವೆ.

ದೇಶದಲ್ಲಿ ಹಲವು ಸಮಸ್ಯೆಗಳಿಂದಾಗಿ ಕಲ್ಲಿದ್ದಲಿನ ಕೊರತೆ ಉಂಟಾಗಿದೆ. ಆದರೆ, ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುತ್ತಿಲ್ಲ. ಬದಲಿಗೆ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲು ಒತ್ತು ನೀಡುತ್ತಿದೆ. ಜತೆಗೆ ಆಮದು ಕಲ್ಲಿದ್ದಲನ್ನು ಕಡ್ಡಾಯವಾಗಿ ಬಳಸಬೇಕು ಎಂದು ಸರ್ಕಾರ ಆದೇಶಿಸಿದೆ. ಆಮದು ಕಲ್ಲಿದ್ದಲನ್ನು ಮಾತ್ರ ಬಳಸುವ ಸ್ಥಾವರಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಬೇಕು ಎಂದೂ ಸರ್ಕಾರ ಸೂಚಿಸಿದೆ. ಇಂತಹ ಸ್ಥಾವರಗಳು ಪ್ರತಿ ಯೂನಿಟ್‌ಗೆ ಗರಿಷ್ಠ ₹50 ದರದವರೆಗೂ ವಿದ್ಯುತ್ ಮಾರಾಟ ಮಾಡಲೂ ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಈ ಕಾರಣದಿಂದಲೇ ವಿದ್ಯುತ್‌ನ ದರ ಏರಿಕೆಯಾಗುತ್ತಿದೆ ಮತ್ತು ಗ್ರಾಹಕರಿಗೆ ಅದರ ಹೊರೆ ಬೀಳುತ್ತಿದೆ.

ಸರ್ಕಾರವು ಕೆಲವು ಉದ್ಯಮಿಗಳಿಗೆ ಅನುಕೂಲ ಮಾಡಿಕೊಡಲು ಕಲ್ಲಿದ್ದಲು ಆಮದಿಗೆ ಒತ್ತು ನೀಡುತ್ತಿದೆ ಎಂಬುದು ವಿರೋಧ ಪಕ್ಷಗಳ ಆರೋಪ. ಸರ್ಕಾರವು ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುವುದಿಲ್ಲ. ಬದಲಿಗೆ ಉಷ್ಣ ವಿದ್ಯುತ್ ಸ್ಥಾವರ ಕಂಪನಿಗಳು ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುತ್ತವೆ. ವಿದೇಶಗಳಲ್ಲಿ ಕಲ್ಲಿದ್ದಲು ಗಣಿ ಹೊಂದಿರುವ ಕಂಪನಿಗಳೂ ದೇಶದಲ್ಲಿ ಕಲ್ಲಿದ್ದಲು ಮಾರಾಟ ಮಾಡುತ್ತವೆ. ಇಂಡೊನೇಷ್ಯಾ, ದಕ್ಷಿಣ ಆಫ್ರಿಕಾ ಮತ್ತು ಅಮೆರಿಕದಿಂದ ಅತಿಹೆಚ್ಚು ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. 'ಭಾರತಕ್ಕಾಗಿ ಅತಿಹೆಚ್ಚು ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುವುದು ನಾವು. ಭಾರತಕ್ಕಾಗಿ ಇಂಡೊನೇಷ್ಯಾ, ದಕ್ಷಿಣ ಆಫ್ರಿಕಾ ಮತ್ತು ಅಮೆರಿಕದಿಂದ ಅತಿಹೆಚ್ಚು ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುವುದೂ ನಾವೇ' ಎಂದು ಅದಾನಿ ಎಂಟರ್‌ಪ್ರೈಸಸ್ ಹೇಳಿಕೊಂಡಿದೆ.

ದೇಶದಲ್ಲಿ ಕಲ್ಲಿದ್ದಲು ಗಣಿ ಹಂಚಿಕೆ, ಉತ್ಪಾದನೆಗೆ ಅನುಮತಿ ಮತ್ತು ಪೂರೈಕೆಗೆ ಅಗತ್ಯ ರೈಲುಗಳನ್ನು ಒದಗಿಸಿದರೆ ಸಮಸ್ಯೆ ಬಹುತೇಕ ಬಗೆಹರಿಯಲಿದೆ. ಆದರೆ ಸರ್ಕಾರವು 'ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಿ' ಎಂದು ವಿದ್ಯುತ್ ಕಂಪನಿಗಳಿಗೆ ಸೂಚಿಸುತ್ತಿದೆ.

ಆಧಾರ: ಕಲ್ಲಿದ್ದಲು ಸಚಿವಾಲಯದ ಕಲ್ಲಿದ್ದಲು ಉತ್ಪಾದನಾ ವರದಿ, ಕಲ್ಲಿದ್ದಲು ಆಮದು ವರದಿ, ಕಲ್ಲಿದ್ದಲು ಸಚಿವಾಲಯದ ವಾರ್ಷಿಕ ವರದಿಗಳು, ಕಲ್ಲಿದ್ದಲು ಗಣಿ ಹಂಚಿಕೆ ವರದಿಗಳು, ಪಿಟಿಐ, ಪಿಐಬಿ ಪ್ರಕಟಣೆಗಳು, ಅದಾನಿ ಎಂಟರ್‌ಪ್ರೈಸಸ್ ಜಾಲತಾಣ



ದೇಶದಲ್ಲಿ ಕಲ್ಲಿದ್ದಲು ಉತ್ಪಾದನೆ ಏರಿಕೆಯಾದ ಕಾರಣ 2020–21 ಮತ್ತು 2021–22ರಲ್ಲಿ ಕಲ್ಲಿದ್ದಲು ಆಮದು ಪ್ರಮಾಣ ಕಡಿಮೆಯಾಗಿತ್ತು. ಆದರೆ, ಕಲ್ಲಿದ್ದಲು ಆಮದಿಗೆ ಕೇಂದ್ರ ಸರ್ಕಾರವು ಉತ್ತೇಜನ ನೀಡಿದ ಕಾರಣ 2022–23ರಲ್ಲಿ ಕಲ್ಲಿದ್ದಲು ಆಮದು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ

ಆಮದು ಕಲ್ಲಿದ್ದಲು ಮಿಶ್ರಣ ಕಡ್ಡಾಯ

ದೇಶದಲ್ಲಿ ಕಲ್ಲಿದ್ದಲು ಉತ್ಪಾದನೆ ಪ್ರಮಾಣ ಏರಿಕೆಯಾಗಿದ್ದರೂ, ಆಮದು ಕಲ್ಲಿದ್ದಲನ್ನು ಕಡ್ಡಾಯವಾಗಿ ಬಳಸುವಂತೆ ಕೇಂದ್ರ ಸರ್ಕಾರವು ಆದೇಶಿಸಿದೆ. ವಿದ್ಯುತ್ ದರ ಏರಿಕೆಗೆ ಇದೇ ಕಾರಣ ಎನ್ನುತ್ತಿವೆ ವಿರೋಧ ಪಕ್ಷಗಳು.

ದೇಶದಲ್ಲಿ ಕಲ್ಲಿದ್ದಲು ಕೊರತೆಯಾಗಿದೆ. ಹೀಗಾಗಿ ದೇಶದ ಎಲ್ಲಾ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಬಳಸುವ ಕಲ್ಲಿದ್ದಲಿನಲ್ಲಿ ಶೇ 6ರಷ್ಟು ಆಮದು ಕಲ್ಲಿದ್ದಲನ್ನು ಕಡ್ಡಾಯವಾಗಿ ಮಿಶ್ರಣ ಮಾಡಬೇಕು ಎಂದು 2023ರ ಜನವರಿ 9ರಂದು ಕೇಂದ್ರ ಸರ್ಕಾರವು ಆದೇಶ ಹೊರಡಿಸಿತ್ತು. ದೇಶದ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಸಾಮಾನ್ಯವಾಗಿ ಜಿ–7 ದರ್ಜೆಯ ಕಲ್ಲಿದ್ದಲನ್ನು ಬಳಸಲಾಗುತ್ತದೆ. ಕೇಂದ್ರ ಇಂಧನ (ಪವರ್) ಸಚಿವಾಲಯದ ಸೂಚ್ಯಂಕದ ಪ್ರಕಾರ ಜಿ–7 ದರ್ಜೆಯ ಒಂದು ಟನ್ ಕಲ್ಲಿದ್ದಲಿನ ಬೆಲೆ ₹3,640. ಆದರೆ, ಆಮದು ಕಲ್ಲಿದ್ದಲಿನ ಬೆಲೆ ₹25,000ವನ್ನೂ ದಾಟುತ್ತದೆ ಎಂಬುದು ಎಎಪಿಯ ಆರೋಪ. ದೆಹಲಿಗೆ ಎನ್‌ಟಿಪಿಸಿಯಿಂದ ವಿದ್ಯುತ್ ಖರೀದಿಸಲಾಗುತ್ತದೆ. ಆಮದು ಕಲ್ಲಿದ್ದಲನ್ನು ಬಳಸಲೇಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿರುವ ಕಾರಣ, ಎನ್‌ಟಿಪಿಸಿ ಪ್ರತಿ ಟನ್‌ಗೆ ₹25,000ಕ್ಕೂ ಹೆಚ್ಚು ಪಾವತಿಸಿ ಆಮದು ಕಲ್ಲಿದ್ದಲನ್ನು ಖರೀದಿಸುತ್ತಿದೆ. ಈ ಕಾರಣದಿಂದಲೇ ವಿದ್ಯುತ್ ದರ ಏರಿಕೆಯಾಗಿದೆ ಎಂಬುದು ಎಎಪಿಯ ಪ್ರತಿಪಾದನೆ.

ಆಮದು ಕಲ್ಲಿದ್ದಲನ್ನು ಬಳಸಲೇಬೇಕು ಎಂದು ಆದೇಶಿಸಿರುವುದೇ ವಿದ್ಯುತ್ ದರ ಏರಿಕೆಗೆ ಕಾರಣ ಎಂದು ಕಾಂಗ್ರೆಸ್ ಆರೋಪಿಸಿದೆ.

ಗಣಿಗಳೂ ಇಲ್ಲ, ಕಲ್ಲಿದ್ದಲೂ ಇಲ್ಲ

ದೇಶದಲ್ಲಿ ಕಲ್ಲಿದ್ದಲು ಗಣಿಗಳು ಹಂಚಿಕೆಯಾಗದೇ ಇರುವುದು ಮತ್ತು ಗಣಿಗಳು ಕಾರ್ಯನಿರ್ವಹಿಸದೇ ಇರುವುದು ಕಲ್ಲಿದ್ದಲು ಕೊರತೆಗೆ ಪ್ರಮುಖ ಕಾರಣವಾಗಿದೆ. ಇದರಿಂದಾಗಿ ಆಮದು ಕಲ್ಲಿದ್ದಲಿನ ಮೇಲಿನ ಅವಲಂಬನೆ ಹೆಚ್ಚಾಗಿದ್ದು, ವಿದ್ಯುತ್ ಉತ್ಪಾದನಾ ವೆಚ್ಚ ಏರಿಕೆಗೆ ಕಾರಣವಾಗಿದೆ.

ದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಲ್ಲಾ 214 ಗಣಿಗಳ ಹಂಚಿಕೆಯನ್ನು 2014ರಲ್ಲಿ ಸುಪ್ರೀಂ ಕೋರ್ಟ್ ರದ್ದುಪಡಿಸಿತ್ತು. ಆನಂತರ ಕಾನೂನುಗಳಿಗೆ ತಿದ್ದುಪಡಿ ತರಲಾಯಿತು. ಕಲ್ಲಿದ್ದಲು ಗಣಿಗಳನ್ನು ಹೊಸದಾಗಿ ಹಂಚಿಕೆ ಮಾಡಲಾಯಿತು. ವಿವಿಧ ಕಾಯ್ದೆ ಮತ್ತು ಯೋಜನೆಗಳ ಅಡಿಯಲ್ಲಿ ಕೇಂದ್ರ ಸರ್ಕಾರವು ಈವರೆಗೆ 133 ಗಣಿಗಳನ್ನು ಹಂಚಿಕೆ ಮಾಡಿದೆ. ಆದರೆ ಇವುಗಳ ಪೈಕಿ ಕಾರ್ಯನಿರ್ವಹಿಸುತ್ತಿರುವ ಗಣಿಗಳ ಸಂಖ್ಯೆ 44 ಮಾತ್ರ. ಕಾರ್ಯನಿರ್ವಹಿಸುತ್ತಿರುವ ಗಣಿಗಳ ಸಂಖ್ಯೆ ಕಡಿಮೆ ಇರುವ ಕಾರಣಕ್ಕೇ ಕಲ್ಲಿದ್ದಲು ಕೊರತೆ ಉಂಟಾಗಿದೆ.

2015ರಿಂದ ಈವರೆಗೆ ಒಟ್ಟು 17 ಬಾರಿ ಕಲ್ಲಿದ್ದಲು ಗಣಿಗಳನ್ನು ಹಂಚಿಕೆ ಮಾಡಲು, ಹರಾಜು ನಡೆಸಲಾಗಿದೆ. ಆದರೆ, ಹರಾಜಿನಲ್ಲಿ ಹಂಚಿಕೆಯಾಗಿದ್ದು 109 ಗಣಿಗಳು ಮಾತ್ರ. ಗಣಿಗಳು ಲಭ್ಯವಿದ್ದರೂ, ಹರಾಜು ನೀತಿಯ ಕಾರಣಗಳಿಂದಾಗಿ ಹರಾಜಿನಲ್ಲಿ ಹೆಚ್ಚಿನ ಕಂಪನಿಗಳು ಭಾಗಿಯಾಗುತ್ತಿಲ್ಲ. ಗಣಿಗಳ ಹಂಚಿಕೆಯೂ ಆಗುತ್ತಿಲ್ಲ. ಕೆಲವು ಹರಾಜು ಪ್ರಕ್ರಿಯೆಗಳಲ್ಲಿ ಒಂದು ಗಣಿಯೂ ಹಂಚಿಕೆಯಾಗಿಲ್ಲ. ಸರ್ಕಾರವು 133 ಗಣಿಗಳನ್ನು ಹಂಚಿಕೆ ಮಾಡಿದ್ದರೂ, ಕಾರ್ಯನಿರ್ವಹಣೆಗೆ ಅನುಮತಿ ನೀಡಿರುವುದು 58 ಗಣಿಗಳಿಗೆ ಮಾತ್ರ. ಹಂಚಿಕೆಯಾಗಿರುವ 78 ಗಣಿಗಳಿಗೆ ಇನ್ನೂ ಅನುಮತಿ ದೊರೆತೇ ಇಲ್ಲ. ಹೀಗಾಗಿ ಅಲ್ಲಿ ಕಲ್ಲಿದ್ದಲು ಉತ್ಪಾದನೆ ನಡೆಯುತ್ತಿಲ್ಲ.

ಈ ಎಲ್ಲಾ ಕಾರಣಗಳಿಂದಾಗಿ ಕಲ್ಲಿದ್ದಲಿನ ಕೊರತೆ ತಲೆದೋರುತ್ತಿದೆ. ಪರಿಣಾಮವಾಗಿ ಆಮದು ಕಲ್ಲಿದ್ದಲಿನ ಮೊರೆ ಹೋಗಬೇಕಾದ ಅನಿವಾರ್ಯ ಎದುರಾಗಿದೆ. ಇದರಿಂದಾಗಿ ವಿದ್ಯುತ್ ದರ ಏರಿಕೆಯಾಗುತ್ತಿದೆ. ಹಂಚಿಕೆಯಾಗಿರುವ ಎಲ್ಲಾ ಗಣಿಗಳಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ದೊರೆತರೆ, ಕಲ್ಲಿದ್ದಲಿನ ಉತ್ಪಾದನೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಲಿದೆ. ಅದರಿಂದ ಕಲ್ಲಿದ್ದಲಿನ ಕೊರತೆ ನೀಗುವುದಲ್ಲದೆ, ಆಮದು ಕಲ್ಲಿದ್ದಲಿನ ಅನಿವಾರ್ಯವೂ ಇಲ್ಲವಾಗಲಿದೆ.

214 2014ಕ್ಕೂ ಮುನ್ನ ದೇಶದಲ್ಲಿ ಹಂಚಿಕೆಯಾಗಿದ್ದ ಗಣಿಗಳ ಸಂಖ್ಯೆ

133 2015ರಿಂದ ಈವರೆಗೆ ದೇಶದಲ್ಲಿ ಹಂಚಿಕೆ ಆಗಿರುವ ಗಣಿಗಳ ಸಂಖ್ಯೆ

58 ಗಣಿಗಾರಿಕೆಗೆ ಅನುಮತಿ ಪಡೆದಿರುವ ಗಣಿಗಳ ಸಂಖ್ಯೆ

78 ಹಂಚಿಕೆಯಾಗಿದ್ದರೂ ಗಣಿಗಾರಿಕೆಗೆ ಅನುಮತಿ ಇಲ್ಲದ ಗಣಿಗಳ ಸಂಖ್ಯೆ

44 ಕಾರ್ಯ ನಿರ್ವಹಿಸುತ್ತಿರುವ ಗಣಿಗಳ ಸಂಖ್ಯೆ

14 ಅನುಮತಿ ಇದ್ದರೂ ಕಾರ್ಯಾರಂಭ ಮಾಡದ ಗಣಿಗಳ ಸಂಖ್ಯೆ

ಸಾಗಣೆಗೆ ರೈಲುಗಳ ಕೊರತೆ

'ದೇಶದಲ್ಲಿ ಕಲ್ಲಿದ್ದಲಿನ ಉತ್ಪಾದನೆ ಏರಿಕೆಯಾಗುತ್ತಲೇ ಇದೆ. ಆದರೆ, ಅವುಗಳ ಸಾಗಣೆಗೆ ಅಗತ್ಯವಿರುವಷ್ಟು ರೈಲುಗಳನ್ನು ಕೇಂದ್ರ ಸರ್ಕಾರವು ಒದಗಿಸುತ್ತಿಲ್ಲ. ಈ ಕಾರಣದಿಂದಲೇ ಗಣಿಗಳಲ್ಲಿ ಕಲ್ಲಿದ್ದಲು ಲಭ್ಯವಿದ್ದರೂ, ಅವು ಉಷ್ಣ ವಿದ್ಯುತ್ ಸ್ಥಾವರಗಳಿಗೆ ಪೂರೈಕೆಯಾಗುತ್ತಿಲ್ಲ. ಬದಲಿಗೆ ಆಮದು ಕಲ್ಲಿದ್ದಲನ್ನು ಪೂರೈಸಲಾಗುತ್ತಿದೆ' ಎಂದು ಎಎಪಿ ಆರೋಪಿಸಿದೆ.

ಕಲ್ಲಿದ್ದಲು ಪೂರೈಕೆಗೆ ನಿಗದಿಪಡಿಸಿದಷ್ಟು ರೈಲುಗಳನ್ನು ರೈಲ್ವೆ ಇಲಾಖೆ ಒದಗಿಸುತ್ತಿದೆ. ಆದರೆ, ವಿದ್ಯುತ್ ಉತ್ಪಾದನೆಗೆ ಅಗತ್ಯವಿರುವಷ್ಟು ಕಲ್ಲಿದ್ದಲನ್ನು ಪೂರೈಸಲು ರೈಲುಗಳ ಕೊರತೆ ಇದೆ. ಹೆಚ್ಚುವರಿ ರೈಲುಗಳನ್ನು ರೈಲ್ವೆ ಇಲಾಖೆಯು ಒದಗಿಸುತ್ತಿಲ್ಲ. ಹೀಗಾಗಿ ಗಣಿಗಳಿಂದ ಕಲ್ಲಿದ್ದಲನ್ನು ಟ್ರಕ್‌ಗಳ ಮೂಲಕ ಸಾಗಿಸಲಾಗುತ್ತಿದೆ. ಟ್ರಕ್‌ಗಳ ಮೂಲಕ ಸಾಗಿಸಿದಾಗ ಸಾಗಣೆ ವೆಚ್ಚ ಏರಿಕೆಯಾಗುತ್ತದೆ. ಇದರಿಂದಲೂ ವಿದ್ಯುತ್ ಉತ್ಪಾದನಾ ವೆಚ್ಚ ಏರಿಕೆಯಾಗುತ್ತಿದೆ. ಪರಿಣಾಮವಾಗಿ ವಿದ್ಯುತ್ ದರವೂ ಏರಿಕೆಯಾಗುತ್ತಿದೆ.

ರೈಲುಗಳ ಕೊರತೆಯನ್ನು ಪರಿಹರಿಸಲು ಕೇಂದ್ರ ಸರ್ಕಾರವು 'ರೈಲು-ಹಡಗು-ರೈಲು (ಆರ್‌ಎಸ್‌ಆರ್)' ವಿಧಾನವನ್ನು ಜಾರಿಗೆ ತಂದಿತು. ಅಂದರೆ ಗಣಿಗಳಿಂದ ಕಲ್ಲಿದ್ದಲನ್ನು ಹತ್ತಿರದ ಬಂದರಿಗೆ ಸಾಗಿಸುವುದು ಮತ್ತು ಅಲ್ಲಿಂದ ಸ್ಥಾವರಕ್ಕೆ ಸಮೀಪವಿರುವ ಬಂದರಿಗೆ ಹಡಗಿನಲ್ಲಿ ಸಾಗಿಸುವುದು. ಆ ಬಂದರಿನಿಂದ ಸ್ಥಾವರಕ್ಕೆ ರೈಲಿನ ಮೂಲಕ ಕಲ್ಲಿದ್ದಲು ಸಾಗಿಸುವುದೇ ಈ ವಿಧಾನ. ಇದನ್ನು ಜಾರಿಗೆ ತಂದು ಹಲವು ತಿಂಗಳು ಕಳೆದಿದ್ದರೂ, ಯಾವ ವಿದ್ಯುತ್ ಉತ್ಪಾದನಾ ಕಂಪನಿಯೂ ಇದನ್ನೂ ಬಳಸಿಕೊಳ್ಳುತ್ತಿಲ್ಲ. ಏಕೆಂದರೆ, ಈ ವಿಧಾನದ ಮೂಲಕ ಸಾಗಿಸಿದ ಕಲ್ಲಿದ್ದಲಿನ ದರವು, ಆಮದು ಕಲ್ಲಿದ್ದಲಿನ ದರದಷ್ಟೇ ಆಗುತ್ತದೆ. ಹೀಗಾಗಿ ಇದು ಕಾರ್ಯಸಾಧುವಲ್ಲ ಎಂಬ ಅಭಿಪ್ರಾಯವಿದೆ.

ಮಹಾನದಿ ಕಲ್ಲಿದ್ದಲು ಗಣಿಯಿಂದ ಕಲ್ಲಿದ್ದಲು ಖರೀದಿಸಲು ಪಂಜಾಬ್ ಸರ್ಕಾರವು 2022ರಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಆದರೆ, ಕೇಂದ್ರ ಸರ್ಕಾರವು ಆರ್‌ಎಸ್‌ಆರ್ ವಿಧಾನದ ಷರತ್ತು ಹಾಕಿತ್ತು. ಆ ಷರತ್ತಿನ ಪ್ರಕಾರ, ಒಡಿಶಾದ ಮಹಾನದಿ ಕಲ್ಲಿದ್ದಲು ಗಣಿಯಿಂದ ಪೂರ್ವ ಕರಾವಳಿಯ ಪಾರಾದೀಪ್ ಬಂದರಿಗೆ ರೈಲಿನಲ್ಲಿ ಕಲ್ಲಿದ್ದಲನ್ನು ಸಾಗಿಸಬೇಕಿತ್ತು. ಅಲ್ಲಿ ಕಲ್ಲಿದ್ದಲನ್ನು ರೈಲುಗಳಿಂದ ಹಡಗಿಗೆ ತುಂಬಿಸಬೇಕಿತ್ತು. ಹಡಗು ಬಂಗಾಳ ಕೊಲ್ಲಿ ಮತ್ತು ಹಿಂದೂಮಹಾಸಾಗರದ ಮೂಲಕ ಅರಬ್ಬಿ ಸಮುದ್ರವನ್ನು ಪ್ರವೇಶಿಸಿ, ಗುಜರಾತ್‌ನ ಮುಂದ್ರಾ ಬಂದರನ್ನು ತಲುಪಬೇಕಿತ್ತು. ಅಲ್ಲಿಂದ ಮತ್ತೆ ರೈಲಿಗೆ ಕಲ್ಲಿದ್ದಲು ತುಂಬಿ, ಪಂಜಾಬ್‌ಗೆ ಸಾಗಿಸಬೇಕಿತ್ತು. ಈ ಷರತ್ತಿಗೆ ಪಂಜಾಬ್ ಸರ್ಕಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಹೀಗಾಗಿ ಷರತ್ತನ್ನು ಕೇಂದ್ರ ಸರ್ಕಾರ ಹಿಂಪಡೆಯಿತು.



ದಮನಿತರ ದಾವಾಗ್ನಿಗೆ ರೂಪಕದ ಇಂಧನ

ಚಿತ್ರಿಕೆ 1: 'ನಿನ್ನ ಅಪ್ಪ ನಮ್ಮ ಮನೆಯಲ್ಲಿ ಕೂರುವುದಿಲ್ಲ' ಎಂದು ಪಾಳೇಗಾರನ ಗತ್ತಿನಲ್ಲೇ ರತ್ನವೇಲ್ ಹೇಳುತ್ತಾನೆ. ಮಗ ಅತಿವೀರನ್‌ಗೆ ಅದನ್ನು ಕೇಳಿ ಪರಮಾಶ್ಚರ್ಯ. ಆ ಭಾಗದ ಶಾಸಕನಾದ ತನ್ನ ತಂದೆ ಮೇಲ್ಜಾತಿಯವರ ಮನೆಯಲ್ಲಿ ಈಗಲೂ ಕೂರಲಾರದ ಸ್ಥಿತಿ ಅವನೊಳಗಿನ ದಾವಾಗ್ನಿಗೆ ಇಂಬು. ಅಪ್ಪನನ್ನು ಅವನು ಕುರ್ಚಿ ಮೇಲೆ ಬಲವಂತವಾಗಿ ಕೂರಿಸುವುದಿಲ್ಲ, ಪ್ರತಿಷ್ಠಾಪಿಸುತ್ತಾನೆ. ತಿಕ್ಕಾಟದ ಕಿಡಿ ನೋಡ ನೋಡುತ್ತಲೇ ದೊಡ್ಡ ಬೆಂಕಿ.

ಚಿತ್ರಿಕೆ 2: ಕನಸು ಕಂಗಳ ಹುಡುಗರು ಬಾವಿಯೊಳಗೆ ಜಿಗಿದು ನಿಮಿಷಗಳಾಗಿವೆಯಷ್ಟೆ. ನಾಲ್ವರು ಬಂದು ಒಂದೇ ಸಮನೆ ಅವರ ಮೇಲೆ ಕಲ್ಲುಗಳ ಮಳೆಗರೆದದ್ದೇ ನೀರಲ್ಲಿ ಚೆಲ್ಲಿದ ರಕ್ತ. ಬಚಾವಾಗುವುದು ಒಬ್ಬನಷ್ಟೆ. ಅಸುನೀಗುವವರು ಮೂವರು. ಸಾಕ್ಷ್ಯಗಳಿದ್ದೂ ನ್ಯಾಯ ಸಲ್ಲದ ಪ್ರಕರಣ ಅದು. ರಾಜಕೀಯ ಪ್ರಭಾವಿ ನಾಯಕನಲ್ಲಿ ಮಾಮಣ್ಣನ್ ಗೋಗರೆದರೂ ಉಳಿಯುವುದು ಸೂತಕದ ಮೌನವಷ್ಟೆ.

ನಾವು ನೋಡಿದ ಸಿನಿಮಾ

ಚಿತ್ರ: ಮಾಮಣ್ಣನ್ (ತಮಿಳು)
ನಿರ್ಮಾಣ: ಉದಯನಿಧಿ ಸ್ಟಾಲಿನ್
ನಿರ್ದೇಶನ: ಮಾರಿ ಸೆಲ್ವರಾಜ್
ತಾರಾಗಣ: ವಡಿವೇಲು, ಫಹಾದ್ ಫಾಸಿಲ್, ಉದಯನಿಧಿ ಸ್ಟಾಲಿನ್, ಕೀರ್ತಿ ಸುರೇಶ್

ಚಿತ್ರಿಕೆ 3 ಹಾಗೂ ಮತ್ತೊಂದು: ತನ್ನದೇ ರೇಸಿನಲ್ಲಿ ಓಡುವ ನಾಯಿಯೊಂದನ್ನು ರತ್ನವೇಲ್ ಸಲಾಕೆಯಿಂದ ಬಡಿದು ಕೊಲ್ಲುತ್ತಾನೆ. ಅಂಥದ್ದೇ ಸಲಾಕೆ, ಅದೇ ಏಟು, ಅದೇ ರೀತಿ ಚಿಮ್ಮುವ ರಕ್ತ. ಜಾಗವೂ ಅದೇ. ಕಾಲ ಬೇರೆ. ಈ ಸಲ ಸಾಯುವುದು ದಲಿತ ಮುಖಂಡ ಎನ್ನುವುದು ಗಮನಾರ್ಹ ವ್ಯತ್ಯಾಸ.

ನಿರ್ದೇಶಕ ಮಾರಿ ಸೆಲ್ವರಾಜ್ ರೂಪಕಗಳನ್ನಿಟ್ಟು ದಮನಿತರ ಕಥೆಗಳ ಹೇಳುವ ಕ್ರಮ ಅಪ್ಪಿಕೊಂಡವರು. ಈ ಸಿನಿಮಾದಲ್ಲಿ ಪಾಳೇಗಾರನ ಮನಃಸ್ಥಿತಿಯವನು ಸಾಕಿದ ಬೇಟೆ ನಾಯಿಗಳಿವೆ. ದಮನದ ಭಟ್ಟಿಯಲ್ಲಿ ಕಾದ ಇಟ್ಟಿಗೆಗಳ ಗೂಡಿನಿಂದ ಎದ್ದು ಬಂದಂತೆ ಕಾಣುವ ಶಾಸಕನಿದ್ದಾನೆ. ತಲೆಮಾರುಗಳ ತುಳಿತಕ್ಕೆ ಹಿಂಸೆಯಿಂದಲೇ ಉತ್ತರ ಕೊಡಬೇಕೆಂಬ ಆವೇಶ ಆವಾಹಿಸಿಕೊಂಡಂತಹ, ಅವನ ಮಗನೂ ಇದ್ದಾನೆ. ಈ ಮಗ ಪ್ರೀತಿಯಿಂದ ಸಾಕಿರುವ ಹಂದಿಗಳನ್ನು ಬೇಟೆ ನಾಯಿಗಳು ಮುಗಿಸುವುದು ಒಂದು ರೂಪಕ. ಸಾಕಿದ ನಾಯಿಯ ಬಡಿದುಹಾಕಿದ ಸಲಾಕೆಯಲ್ಲೇ ಮನುಷ್ಯನನ್ನೂ ಅಷ್ಟೇ ಸಲೀಸಾಗಿ ಮುಗಿಸುವ ಪ್ರತಿಷ್ಠಾಪುರುಷನ ಅಹಂ ಇನ್ನೊಂದು ರೂಪಕ. ಕಪ್ಪು–ಬಿಳುಪಿನಲ್ಲಿ ಕಾಣುವ ಹಳೆಯ ದೌರ್ಜನ್ಯದ ಕಥನಗಳು ಹೊಸ ಕಾಲದಲ್ಲಿ ಬಣ್ಣ ಪಡೆದುಕೊಂಡಿವೆಯಷ್ಟೆ.

'ಪರಿಯೇರುಂ ಪೆರುಮಾಳ್' ತಮಿಳು ಸಿನಿಮಾದಲ್ಲಿ ಕರಿನಾಯಿಯ ಸಶಕ್ತ ರೂಪಕವನ್ನು ಮಾರಿ ಸೆಲ್ವರಾಜ್ ಬಳಸಿದ್ದರು. 'ಕರ್ಣನ್'ನಲ್ಲಿ ದೇಸಿದೇವಿಯ ರೂಪಕವಿತ್ತು. ಇದರಲ್ಲಿ ಹಂದಿ–ನಾಯಿಯ ಕಚ್ಚಾಟವಿದೆ. ರಾಜಕೀಯ ಮೇಲಾಟ, ಮೀಸಲಾತಿಯ ಸೂಕ್ಷ್ಮವೂ ಉಂಟು.

ಮಾರಿ ಸೆಲ್ವರಾಜ್‌ಗೆ ಮೌನದ ಹಂಗಿದೆ. ವಡಿವೇಲು ನಿರ್ವಹಿಸಿರುವ ಮಾಮಣ್ಣನ್ ಪಾತ್ರ ಗಟ್ಟಿಯಾಗುವುದು ಅದೇ ಕಾರಣಕ್ಕೆ. ದಾವಾನಲವೆಲ್ಲ ಈ ಪಾತ್ರದ ಕಣ್ಣಲ್ಲಿ ಕುಣಿಯುತ್ತಲಿರುತ್ತದೆ. ವಡಿವೇಲು ತುಂಬುಗೆನ್ನೆಯ ಮೇಲಿನ ಕೆಂಪು ಕಣ್ಣುಗಳಲ್ಲಿ ತುಂಬಿಕೊಂಡ ತುಸುವೇ ಪಸೆ ದೌರ್ಜನ್ಯ ತೋರುವ ಕನ್ನಡಿಯೂ ಹೌದು. ಸಿನಿಮಾಗಳಲ್ಲಿ ವಡಿವೇಲು ಅವರ ಬೇರೆಯದೇ ಚಹರೆಗಳನ್ನು ನೋಡಿದ್ದ ನಮಗಿಲ್ಲಿ ಶಾಕ್. ಸ್ವಪ್ರತಿಷ್ಠೆಯ ಕೊಳದಲ್ಲಿ ಸದಾ ಮಿಂದು ಬಂದಂತೆ ಕಾಣುವ ಫಹಾದ್ ಅವರ ದಾಳಿಕೋರತನವೂ ವಡಿವೇಲು ಎದುರು ಅಲ್ಲಲ್ಲಿ ಸೋತುಬಿಡುತ್ತದೆ. ಪಾತ್ರದ ಆಂಗಿಕ ಅಭಿನಯದಲ್ಲಿ ನಿರ್ದೇಶಕರು ಹೊರತೆಗೆಸಿರುವುದು ಏನು ಎನ್ನುವುದರ ಸೂಕ್ಷ್ಮಕ್ಕೂ ಇದು ಉದಾಹರಣೆ.

ಮೊದಲರ್ಧದಲ್ಲಿ ಪ್ರೇಕ್ಷಕನನ್ನು ಎಳೆದೆಳೆದುಕೊಂಡು ಕಥಾಪ್ರವೇಶ ಮಾಡಿಸುವ ಧಾಟಿ, ಎರಡನೇ ಅರ್ಧದಲ್ಲಿ ಹೋರಾಟದ ದೃಶ್ಯಾವಳಿಗಳ ಮೆರವಣಿಗೆಯಾಗಿ ಬದಲಾಗುತ್ತದೆ. ಇದು ಕೂಡ ಮಾರಿ ಸೆಲ್ವರಾಜ್ ಶೈಲಿ. ಚುನಾವಣಾ ರಾಜಕೀಯ ಹೋರಾಟದ ಸನ್ನಿವೇಶಗಳ ಬರವಣಿಗೆ ಹಾಗೂ ನಾಯಕಿ ಕೀರ್ತಿ ಸುರೇಶ್ ಪಾತ್ರ ಪೋಷಣೆ ಎರಡೂ ತೆಳುವಾಗಿದೆ. ಉದಯನಿಧಿ ಸ್ಟಾಲಿನ್ ಮುಖದಲ್ಲಿನ ಏಕೋಭಾವ ಉಳಿದ ನಟ–ನಟಿಯರ ಎದುರು ಮಂಕು ಕವಿಯುವಂತೆ ಮಾಡುತ್ತದೆ. ತೇಣಿ ಈಶ್ವರ್ ಕ್ಯಾಮೆರಾ ಕಣ್ಣು ನಿರ್ದೇಶಕರ ರೂಪಕ ಭಾಷೆಯನ್ನು ಅರ್ಥ ಮಾಡಿಕೊಂಡಿದೆ. ಎ.ಆರ್. ರೆಹಮಾನ್ ವಾದ್ಯ ಸಂಯೋಜನೆ, ಹಾಡುಗಳ ಸಂಗೀತದ ಹೆಣಿಗೆಯಲ್ಲೂ ಇದೇ ಉದ್ದೇಶ ಈಡೇರಿರುವುದು ಸ್ಪಷ್ಟ.

ವಿಶಾಖ ಎನ್.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ನಗ್ನವಾಗಿರುವ ಮಹಿಳೆಯೊಬ್ಬರು ರಸ್ತೆಯಲ್ಲಿ ಪೊಲೀಸರನ್ನು ಅಟ್ಟಿಸಿಕೊಂಡು ಹೋಗಿ, ಪೊಲೀಸರಿಗೆ ಹೊಡೆಯುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. 'ಇದು ಮಣಿಪುರದ ಸ್ಥಿತಿ. ಎಂಥ ದುರಂತವಿದು; ಇದೆಂಥ ದೃಶ್ಯ. ನಮ್ಮ ದೇಶಕ್ಕೇನಾಗುತ್ತಿದೆ..?!' ಎಂಬ ಬರಹದೊಂದಿಗೆ ಈ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಈ ವಿಡಿಯೊ ಮಣಿಪುರದ್ದಲ್ಲ ಬದಲಿಗೆ ಉತ್ತರ ಪ್ರದೇಶದ್ದು.

ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ಪುರಸಭೆಗಳಿಗೆ ಚುನಾವಣೆ ನಡೆದಿತ್ತು. ಚಂದೌಲಿ ಜಿಲ್ಲೆಯ ಮುಘಲ್‌ಸರಾಯ್ ಪುರಸಭೆಗೆ ತೃತೀಯ ಲಿಂಗಿ ಸೋನು ಕಿನ್ನರ್ ಎಂಬವರು ಪಕ್ಷೇತರರಾಗಿ ಚುನಾವಣೆಗೆ ಸ್ಪರ್ಧಿಸಿದ್ದರು. ಮತ ಎಣಿಕೆಯಲ್ಲಿ ಸೋನು ಅವರು ಮುಂದಿದ್ದರು, ಅಷ್ಟರಲ್ಲಾಗಲೇ ಚುನಾವಣಾ ಅಧಿಕಾರಿಗಳು, ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ ಎಂದು ಘೋಷಿಸಿದರು. ಇದರಿಂದ ಕುಪಿತಗೊಂಡ ಸೋನು ಅವರ ಬೆಂಬಲಿಗರು ಈ ರೀತಿ ವರ್ತಿಸಿದ್ದಾರೆ. ನಂತರ ಸೋನು ಅವರು 397 ಮತಗಳ ಅಂತರದಿಂದ ಜಯ ಗಳಿಸಿದರು. ಈ ಕುರಿತು 'ಯುಪಿ ತಕ್' ಸುದ್ದಿ ಸಂಸ್ಥೆ ವರದಿ ಪ್ರಕಟಿಸಿದೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜೂನ್ 30, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುದ್ಧ ದ್ವಾದಶಿ ಗಂ. 25-17, ನಕ್ಷತ್ರ: ವಿಶಾಖಾ ಗಂ. 16-10 ಯೋಗ: ಸಾಧ್ಯಾ ಗಂ. 25-32 ಕರಣ: ಬವ ಗಂ. 14-06, ಮಿಥುನ ಮಾಸದ 15 ನೇ ದಿನ, ಮಳೆನಕ್ಷತ್ರ: ಆರ್ದ್ರಾ 3. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-11 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 11 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 5, 9

ಮೇಷ: ಸಿನಿಮಾ ರಂಗಕ್ಕೆ ಸೇರಿಕೊಳ್ಳುವ ಬಗ್ಗೆ ಯೋಚಿಸುವವರಿಗೆ ಈ ದಿನ ಸುದಿನವಾಗಲಿದೆ. ಕೋರ್ಟು ವ್ಯವಹಾರಗಳನ್ನು ಶಾಂತ ರೀತಿಯಲ್ಲಿ ಬಗೆಹರಿಸಿಕೊಳ್ಳುವಿರಿ. ಕಾನೂನು ವಿದ್ಯಾರ್ಥಿಗಳಿಗೆ ಯಶಸ್ಸು ಕಂಡುಬರುವುದು.

ವೃಷಭ: ಕೆಲವು ಸಂದರ್ಭದಲ್ಲಿ ಅಧೈರ್ಯ ಮತ್ತು ಮಾನಸಿಕ ಜಿಗುಪ್ಸೆಯಂತಹ ಸ್ಥಿತಿಯನ್ನು ಹೊಂದುವಿರಿ. ಈ ದಿನ ನಿಮ್ಮಿಂದಾಗುವ ಹಲವು ಕಾರ್ಯದಲ್ಲಿ ದೇಹಾಯಾಸ ಮಾತ್ರ ನಿಮಗೆ ಸಿಗುವುದು. ದಿನಸಿ ವ್ಯಾಪಾರಿಗಳಿಗೆ ಅಲ್ಪ ಲಾಭ.

ಮಿಥುನ: ಚಾಲಕ ವೃತ್ತಿಯವರು ಸ್ವಂತ ವಾಹನ ಖರೀದಿಯ ದಾರಿ ನೋಡಬಹುದು. ಏಕಾಂಗಿಯಾಗಿರುವವರಿಗೆ ಸಂಗಾತಿ ಸಿಗುವ ಲಕ್ಷಣಗಳಿವೆ. ಧಾನ್ಯಗಳ ರಫ್ತು ಮಾರಾಟಗಾರರು ಹೆಚ್ಚಿನ ಅನುಕೂಲವನ್ನು ಪಡೆಯುವಿರಿ.

ಕರ್ಕಾಟಕ: ಬೇರೆಯವರ ಕೆಲಸ ಕೆಲಸವೆಂದೇ ತಿಳಿದು ಯಾವುದೇ ಬೇಧಭಾವವಿಲ್ಲದೆ ಅದನ್ನು ಯಶಸ್ವಿಯಾಗಿ ಮಾಡಿ ಮುಗಿಸುವಿರಿ. ಗಣಿತಶಾಸ್ತ್ರಜ್ಞರಿಗೆ, ಆಧ್ಯಾತ್ಮ ಚಿಂತಕರಿಗೆ ಈ ದಿನ ಅತ್ಯಂತ ವಿಶೇಷವಾದ ದಿನವೆನಿಸಲಿದೆ.

ಸಿಂಹ: ಕಾರ್ಮಿಕರಿಗೆ, ಕೃಷಿಕರಿಗೆ ಈ ದಿನ ಅಶುಭ ಫಲಗಳೇ ಅಧಿಕವಾಗಿದ್ದೂ, ಅಧಿಕ ಖರ್ಚು ಸಂಭವಿಸಬಹುದು. ಕುಟುಂಬದಲ್ಲಿ ಭಿನ್ನಾಭಿಪ್ರಾಯವನ್ನು ಬಿಟ್ಟು ಹೊಸ ತಲೆಮಾರಿನವರು ನೂತನ ಸಂಬಂಧವನ್ನು ಬೆಳೆಸುವಂತಾಗಲಿದೆ.

ಕನ್ಯಾ: ಗುರಿಯನ್ನು ಮುಟ್ಟುವತ್ತ ನಿಮ್ಮ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡಲ್ಲಿ ನಿಮ್ಮ ಯೋಜನೆಗಳು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿ ನೆರವೇರುವುದು. ವೃತ್ತಿ ಮತ್ತು ಕುಟುಂಬದ ಜವಾಬ್ದಾರಿ ಸ್ವೀಕರಿಸಿ.

ತುಲಾ: ನಿಮ್ಮ ಸುತ್ತಮುತ್ತಲಲ್ಲಿ ನಡೆದ ಘಟನೆಗಳಿಂದ ಮನಸ್ಸು ಪರಿವರ್ತನೆಯಾಗಲಿದೆ. ಅನವಶ್ಯಕ ಋಣಾತ್ಮಕ ಚಿಂತನೆಗಳನ್ನು ಮಾಡದಿರಿ. ಸುಗಂಧ ದ್ರವ್ಯಗಳ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರ ಸಂಭವವಿದೆ.

ವೃಶ್ಚಿಕ: ಸಿನೆಮಾ ಕಲಾವಿದರಿಗೆ ಸದವಕಾಶ ಒದಗಿ ಬರಲಿದೆ, ಅಭಿಮಾನಿಗಳನ್ನು ಸಂಪಾದಿಸಿಕೊಳ್ಳುವಿರಿ. ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳ ಲಕ್ಷಣಗಳು ಗಮನಕ್ಕೆ ಬಂದಲ್ಲಿ, ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ.

ಧನು: ಅಣ್ಣ-ತಮ್ಮಂದಿರು ಒಂದೇ ವ್ಯವಹಾರದಲ್ಲಿ ಸಂಯಮದಿಂದ ನಡೆದುಕೊಂಡರೆ ವ್ಯಾವಹಾರಿಕವಾಗಿ ಲಾಭ ಹೊಂದಬಹುದು. ಎಂಜಿನಿಯರ್ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ತೆರಳಲು ತಯಾರಿ ನಡೆಸುವಿರಿ.

ಮಕರ: ಗೃಹ ನಿರ್ಮಾಣ ಕಾರ್ಯಕ್ಕೆ ಆರ್ಥಿಕತೆಯ ಅಭಾವ ಸ್ಥಿತಿ ಎದುರಾಗಬಹುದು, ಪರಿಣಾಮವಾಗಿ ಮನಸ್ಸಿನಲ್ಲಿ ಹೆದರಿಕೆ ಮೂಡಲಿದೆ. ಅಸಾಧ್ಯ ಕಾರ್ಯಗಳನ್ನೂ ಸಾಧಿಸಿ ತೋರಿಸುವಷ್ಟು ಮನೋಬಲ ನಿಮ್ಮಲ್ಲಿದೆ.

ಕುಂಭ: ಭೂಮಿಗೆ ಸಂಬಂಧಿಸಿದ ಸಮಸ್ಯೆಯೊಂದು ಈ ದಿನ ನಿರಾತಂಕವಾಗಿ ಬಗೆ ಹರಿಯುವುದು. ಅನಾರೋಗ್ಯ ಸ್ಥಿತಿ ಎದುರಾಗಿ ಆರ್ಥಿಕವಾಗಿ ಧನ ವ್ಯಯವಾಗಲಿದೆ. ಕುಲದೇವರ ಆರಾಧನೆಯಿಂದ ಶುಭವಾಗುವುದು.

ಮೀನ: ವ್ಯಾಪಾರ ವ್ಯವಹಾರಗಳಲ್ಲಿ ನಡೆಯುತ್ತಿದ್ದ ಅವ್ಯವಹಾರಗಳು ಹಿಡಿತಕ್ಕೆ ಬರಲಿದೆ. ನಿಮ್ಮಿಂದ ಉತ್ಪಾದಿಸಿದ ವಸ್ತುಗಳಿಗೆ ನಿಮ್ಮ ಪ್ರಾಂತ್ಯದಲ್ಲಿ ಬೇಡಿಕೆ ದೊರೆತು ಸಂತೋಷಕರ ವಾತಾವರಣ ನಿಮ್ಮದಾಗಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಶ್ರೇಷ್ಠ ವರ

ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ|
ನಗುವ ಕೇಳುತ ನಗುವುದತಿಶಯದ ಧರ್ಮ ||
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ |
ಮಿಗೆ ನೀನು ಬೇಡಿಕೊಳೊ – ಮಂಕುತಿಮ್ಮ || 917 ||

ಪದ-ಅರ್ಥ: ನಗುವುದತಿಶಯದ = ನಗುವುದು + ಅತಿಶಯದ (ವಿಶೇಷವಾದ), ಮಿಗೆ = ಹೆಚ್ಚಾಗಿ, ಅಧಿಕವಾಗಿ

ವಾಚ್ಯಾರ್ಥ: ನಗುವುದು ಸಹಜವಾದ ಧರ್ಮ. ಮತ್ತೊಬ್ಬರನ್ನು ನಗಿಸುವುದು ಶ್ರೇಷ್ಠಧರ್ಮ. ನಗುವನ್ನು ಕೇಳುತ್ತ ತಾನೂ ನಗುವುದು ವಿಶೇಷವಾದ ಧರ್ಮ. ನಗುವ, ನಗಿಸುವ, ನಗಿಸಿ, ನಗುತ್ತ ಬಾಳುವ ವರವನ್ನು ನೀನು ಅಧಿಕವಾಗಿ ಬೇಡಿಕೋ.

ವಿವರಣೆ: ನಗು ನಮಗೆ ಪ್ರಕೃತಿದತ್ತವಾಗಿ ದೊರೆತಿರುವ ಸಹಜಕ್ರಿಯೆ. ಹಿತವಾದ, ಸವಿಯಾದ ಅನುಭವಕ್ಕೆ ದೇಹ ತೋರುವ ಪ್ರತಿಕ್ರಿಯೆಯೆ ನಗು. ಅದೊಂದು ರೀತಿಯಲ್ಲಿ ಜೀವಸೆಲೆ. ನಗುವಿಲ್ಲದ ಬದುಕು ಬೆಂಗಾಡು. ಒಂದು ಮಾತಿದೆ, "ನಮ್ಮ ಅಲಂಕಾರ ಪರಿಪೂರ್ಣವಾಗುವುದೇ ನಮ್ಮ ಮುಖದ ಮೇಲೆ ನಗು ಮೂಡಿದಾಗ". ಅದು ತುಂಬ ಸರಿಯಾದದ್ದು. ಯಾಕೆಂದರೆ ಯಾವ ಆಭರಣ, ಅಲಂಕಾರವೂ ನೀಡದಂತಹ ಸೌಂದರ್ಯವನ್ನು ಮುಗುಳ್ನಗು ನೀಡುತ್ತದೆ. ನಗುವುದು ಸಹಜವಾದರೆ ಮತ್ತೊಬ್ಬರಿಗೆ ಪ್ರೀತಿಯಿಂದ ಅದನ್ನು ಹರಡುವುದು ಶ್ರೇಷ್ಠಧರ್ಮ. ನಮಗೆ ಸಂತೋಷ ತಂದದ್ದು ಉಳಿದವರಿಗೂ ದೊರಕಲಿ, ಅವರಿಗೂ ಆನಂದವಾಗಲಿ ಎಂದು ಆಶಿಸುವುದು ನೀಡುವಿಕೆಯ ಪ್ರಕ್ರಿಯೆ. ಪಡೆದುಕೊಂಡದ್ದು ಸಂತೋಷ ಕೊಡುವುದು ಸಹಜ, ಆದರೆ ಅದನ್ನು ಮತ್ತೊಬ್ಬರಿಗೆ ಕೊಡಮಾಡುವುದು ಇನ್ನೂ ಸಂತೋಷದ ಕಾರ್ಯ. ಕಗ್ಗ ಹೇಳುವ ಮೂರನೇ ಹಂತ ಬಹು ಮುಖ್ಯವಾದದ್ದು ಮತ್ತು ಅಪರೂಪವಾದದ್ದು. ಅದು ಮತ್ತೊಬ್ಬರ ನಗುವನ್ನು ಕೇಳಿ ತಾನೂ ನಗುವುದು. ಸಾಮಾನ್ಯವಾಗಿ ಮತ್ತೊಬ್ಬರು ಸಂತೋಷವಾಗಿ ನಗುವಾಗ ಹೊಟ್ಟೆಯುರಿ ಪಡುವವರೇ ಹೆಚ್ಚು. ಸಂತೋಷಪಡುವವರ ಜೊತೆಗೆ ನಿರ್ಮಲಾಂತ:ಕರಣದಿಂದ ಸಂತೋಷ ಪಡುವುದು ವಿಶೇಷವಾದ ಧರ್ಮ ಅವನೊಬ್ಬ ಝೆನ್ ಸಂತ. ಆತ ಹುಟ್ಟು ಕುರುಡ. ಅವನು ತನ್ನಡೆಗೆ ಬರುವವರನ್ನು, ಅವರ ಮಾತಿನಿಂದ, ಸ್ಪರ್ಶದಿಂದಲೇ ಅರಿಯುತ್ತಿದ್ದ, ಅವರ ಸ್ವಭಾವಗಳನ್ನು ಗುರುತಿಸುತ್ತಿದ್ದ. ಒಂದು ಬಾರಿ ಅವನ ಶಿಷ್ಯನೊಬ್ಬ ಕೇಳಿದ, "ಗುರುಗಳೇ, ನೀವು ಜನರನ್ನು ನೋಡಲಾರಿರಿ ಆದರೆ ಅವರನ್ನು ಹೇಗೆ ಅರಿಯುತ್ತೀರಿ?". ಗುರು ಹೇಳಿದ, "ನೋಡಪ್ಪಾ, ನಾನು ಹುಟ್ಟು ಕುರುಡ. ಜನರು ಮಾತನಾಡುವ ರೀತಿಯಿಂದ, ಧ್ವನಿಯ ಏರಿಳಿತದಿಂದಲೇ ತಿಳಿಯಬೇಕು. ಕೆಲವರು ಬಂದು ಇನ್ನೊಬ್ಬರ ಸಾಧನೆ ತಮಗೆಸಂತೋಷ ತಂದಿದೆ ಎಂದಾಗ ಧ್ವನಿಯಲ್ಲಿ ಸಂತೋಷ ಕೇಳಿಸುವುದಿಲ್ಲ, ಕೇವಲ ಅಸೂಯೆ ತೋರುತ್ತದೆ. ಮತ್ತೆ ಕೆಲವರ ಧ್ವನಿಯಲ್ಲಿ ಕೊಂಚ ದು:ಖವೂ ಕೇಳಿಸುತ್ತದೆ. ಆದರೆ ಆಗಲೇ ಬಂದು ಹೋದನಲ್ಲ ಆ ಹಿರಿಯ ಮನುಷ್ಯನ ಧ್ವನಿಯಲ್ಲಿ ಕೇವಲ ಸಂತೋಷ ಮಾತ್ರ ಕೇಳಿಸುತ್ತಿತ್ತು. ಅವನು ಮಾತ್ರ ಮತ್ತೊಬ್ಬರ ಸಂತೋಷವನ್ನು ನಿಜವಾಗಿ ಸಂತೋಷಿಸುವವನು". ಕಗ್ಗ ಅದನ್ನೇ ಹೇಳುತ್ತದೆ, ಮತ್ತೊಬ್ಬರ ನಗುವಿಗೆ ತಮ್ಮ ನಿಷ್ಕಲ್ಮಷವಾದ ನಗುವನ್ನು ಸೇರಿಸುವವರು ನಿಜವಾಗಿಯೂ ವಿಶೇಷರು. ಹೀಗೆ ನಗುವ, ಮತ್ತೊಬ್ಬರನ್ನು ನಗಿಸುವ, ಇನ್ನೊಬ್ಬರ ನಗುವಿನಲ್ಲಿ ತಮ್ಮ ಪ್ರಾಮಾಣಿಕ ನಗುವನ್ನು ಸೇರಿಸುತ್ತ, ನಗುತ್ತಲೇ ಬದುಕುವ ವರವನ್ನು ಭಗವಂತನಲ್ಲಿ ಬೇಡಬೇಕು. ಆ ಅನುಗ್ರಹವಾದರೆ ಬೇರೆ ಯಾವ ವರವೂ ಬೇಡ.

ಪದಬಂಧ 5365

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತರಿಸಿಕೊಂಡ ವಸ್ತು (3)
2.ತೆಳ್ಳಗಿನ ಸೊಂಟ (4)
4.ನಟನೆಯಿಂದ ಕೂಡಿದುದು (4)
6.ಆತಂಕ ಉಂಟುಮಾಡಿದ ಖೂನಿಗಾರ (3)
7.ಯೌವ್ವನದಲ್ಲಿ ನೋಡಿರುವ ಅರಣ್ಯ (2)
9.ಕೈಯ್ಯಲ್ಲಿರುವ ಹಣ (3)
11.ಪಯಣದಲ್ಲಿ ಕಟ್ಟಿದ ಬಾಜಿ ಉಲ್ಟಾ ಆಗಿದೆಯಲ್ಲಾ? (2)
13.ಸುಳ್ಳು ಸುಳ್ಳೇ ಹಬ್ಬಿದ ಗಾಳಿ ಸುದ್ದಿ (3)
14.ದೇವಾಲಯದ ಸಭಾಮಂಟಪ (4)
16.ಅಳತೆಗೆ ಮೀರಿದ ಸ್ಥಿತಿ (4)
17.ಶ್ರೇಷ್ಠವಾದ ಗುರಿಯನ್ನು ಹೀಗೂ ಹೇಳುವರು (3)

ಮೇಲಿಂದ ಕೆಳಕ್ಕೆ
1.ಒಂದನ್ನೊಂದು ಅಗಲದೇ ಇರುವಂಥದ್ದು (5)
2.ಸಾಲದ ಹಣದ ಮೇಲೆ ಕೊಡುವ ಹೆಚ್ಚಿನ ಹಣ (2)
3.ಈತ ಪ್ರಾಯಕ್ಕೆ ಬಂದವನು (5)
5.ಗ್ರೀಸ್ ದೇಶದವನಿವನು (3)
8.ಹೊಸದಾಗಿ ಮದುವೆಯಾದ ಗಂಡ ಹೆಂಡಿರು (5)
10.ದುಃಖ ಹೀಗೆ ಬಂದಿದೆ (3)
12.ಕನ್ನಡಿಗನು ಮಾಡಿರುವ ಪಾಲಿನೇಷನ್! (5)
15.ಅಂಕಣದಲ್ಲಿರುವ ಅಂಕಿ ಕಾಣುತ್ತಿದೆಯೇ? (2)



5364ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚದರ 5.ವರ್ಗೀಕರಣ
7.ರಂಗಮಂಚ 9.ಅಜ
10.ವರ್ತಕ 12.ತಳಿ
14.ಕಮನೀಯ 16.ನವೀಕರಣ
18.ನಕಲಿ

ಮೇಲಿಂದ ಕೆಳಕ್ಕೆ:
1.ಚದುರಂಗ 2.ರದಿಮಂ
3.ಭಾವ 4.ಜಾಣತನ
6.ಕಣಜ 8.ಚಳವಳಿ
9.ಅಕಳಂಕ 11.ನವನಟಿ
12.ತವಕ 13.ಜಯಶಾಲಿ
15.ಮದನ 17.ಣಕ

ಸುಡೊಕು 5751

	3		6		2		4	
6		2				8		
			3		9		1	
4		8			5		2	
				1		4		7
2		5	4				6	
	5		8		3		9	
7		3				6		5
	8		7		6		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5750 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

₹ 20 ಸಾವಿರ ಕೋಟಿ ಹೂಡಿಕೆ: ಅದಾನಿ ಟೋಟಲ್ ಗ್ಯಾಸ್

ನವದೆಹಲಿ (ಪಿಟಿಐ): ಅನಿಲ ಪೂರೈಕೆ ಜಾಲವನ್ನು ವಿಸ್ತರಿಸಲು 8 ರಿಂದ 10 ವರ್ಷಗಳಲ್ಲಿ ₹18 ಸಾವಿರ ಕೋಟಿಯಿಂದ ₹20 ಸಾವಿರ ಕೋಟಿಯವರೆಗೆ ಹೂಡಿಕೆ ಮಾಡಲು ಅದಾನಿ ಟೋಟಲ್ ಗ್ಯಾಸ್ ಲಿಮಿಟೆಡ್ ಮುಂದಾಗಿದೆ.

ವಾಹನಗಳಿಗೆ ಸಿಎನ್‌ಜಿ ಪೂರೈಕೆ ಮತ್ತು ಮನೆಗಳಿಗೆ ಕೊಳವೆ ಮಾರ್ಗದ ಮೂಲಕ ಅನಿಲ ಪೂರೈಸಲು ಅಗತ್ಯವಾದ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಈ ಹೂಡಿಕೆ ಮಾಡುತ್ತಿರುವುದಾಗಿ ಕಂಪನಿಯ ಸಿಎಫ್‌ಒ ಪರಾಗ್ ಪಾರಿಖ್ ಮಾಹಿತಿ ನೀಡಿದ್ದಾರೆ.

ದೇಶದಾದ್ಯಂತ 460 ಸಿಎನ್‌ಜಿ ಕೇಂದ್ರಗಳನ್ನು ಹೊಂದಿದ್ದು, 7 ಲಕ್ಷ ಗ್ರಾಹಕರಿಗೆ ಕೊಳವೆ ಮಾರ್ಗದ ಮೂಲಕ ಅನಿಲ ಪೂರೈಸುತ್ತಿದೆ.

2022ರ ಏಪ್ರಿಲ್‌ನಿಂದ 2023ರ ಮಾರ್ಚ್ ಅವಧಿಯಲ್ಲಿ ₹1,150 ಕೋಟಿ ಹೂಡಿಕೆ ಮಾಡಿರುವುದಾಗಿ ಕಂಪನಿಯ ಈಚಿನ ವಾರ್ಷಿಕ ವರದಿಯಲ್ಲಿ ಪರಾಗ್ ಹೇಳಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ



ಜನನ : 03.07.1952 ಮರಣ : 20.06.2023

ಶ್ರೀ.ಡಿ. ವೆಂಕಟೇಶ್
ನಿವೃತ್ತ ಸಬ್ ಇನ್ಸ್‌ಪೆಕ್ಟರ್
ನಂ. 363, 17ನೇ ಮೇನ್, 2ನೇ ಕ್ರಾಸ್, ಮುನೇಶ್ವರ ಬ್ಲಾಕ್, ಬೆಂಗಳೂರು–26

ಇವರು ದಿನಾಂಕ: 20.06.2023 ಮಂಗಳವಾರ ಬೆಳಿಗ್ಗೆ 5:40ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ವೈಕುಂಠ ಸಮಾರಾಧನೆಯನ್ನು ದಿನಾಂಕ: 30.06.2023ನೇ ಶುಕ್ರವಾರ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಶ್ರೀಮತಿ ಜಿ.ರುಕ್ಮಿಣಿದೇವಿ ಮತ್ತು ಕುಟುಂಬವರ್ಗದವರು.

3ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎಸ್. ಸಿದ್ದಣ್ಣನವರು
ಸಂಪಿಗೆಹಳ್ಳಿ, ಬನ್ನೇರುಘಟ್ಟ

ನಮ್ಮೆಲ್ಲರೊಂದಿಗೆ ಆದರ್ಶದ ಬದುಕನ್ನು ಬಾಳಿ ಸರಳ ಸೌಜನ್ಯತೆಯ ಸಾಕಾರ ಮೂರ್ತಿಯಾಗಿದ್ದ ನೀವು ನಮ್ಮನ್ನು ಅಗಲಿ ಇಂದಿಗೆ 3 ವರ್ಷ ಕಳೆದರೂ, ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ಆದರ್ಶಮಯ ಜೀವನ ನಮ್ಮ ಪಾಲಿಗೆ ಸದಾ ದಾರಿದೀಪವಾಗಿದೆ.

ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಮತ್ತು ಕುಟುಂಬವರ್ಗದವರು.

ಚಿರಸ್ಮರಣೆ

ಜೆ.ಸಿ.ಸಿದ್ದಯ್ಯ
ನಿಧನ: 13.6.2000

ಟಿ. ಲಕ್ಷ್ಮೀನರಸಮ್ಮ
ನಿಧನ: 30.6.2013

ನಿಮ್ಮ ಆದರ್ಶಗಳೇ ನಮಗೆ ದಾರಿದೀಪ,
ನಿಮ್ಮ ಆಶೀರ್ವಾದ ಎಂದೆಂದೂ ನಮ್ಮ ಮೇಲಿರಲಿ ಎಂದು ಆಶಿಸುವ
ನಿಮ್ಮ ಕುಟುಂಬವರ್ಗ, ನೆಲಮಂಗಲ

ಮಹಾರಾಷ್ಟ್ರದತ್ತ ಮುಖ ಮಾಡಿದ ದ್ರಾಕ್ಷಿ ಬೆಳೆಗಾರರು

ಒಣದ್ರಾಕ್ಷಿಗೆ ಬೇಕು ಶೀತಲ ಘಟಕ

• ಕಲಾವತಿ ಬೈಚಬಾಳ

ಹುಬ್ಬಳ್ಳಿ: ಹವಾಮಾನ ವೈಪರೀತ್ಯ, ಅಕಾಲಿಕ ಮಳೆ ಮಧ್ಯೆ ಒಣದ್ರಾಕ್ಷಿ ಸಿದ್ಧಪಡಿಸುವುದು ರೈತರಿಗೆ ಸವಾಲು. ಒಣದ್ರಾಕ್ಷಿ ಶೇಖರಿಸಿಡಲು ಶೀತಲ ಘಟಕಗಳು (ಕೋಲ್ಡ್ ಸ್ಟೋರೇಜ್) ಕೊರತೆ ಇರುವುದರಿಂದ ಬಹುತೇಕ ರೈತರು ಮಹಾರಾಷ್ಟ್ರದತ್ತ ಮುಖ ಮಾಡುತ್ತಿದ್ದಾರೆ.

ರಾಜ್ಯದ 32,473 ಹೆಕ್ಟೇರ್ ಪ್ರದೇಶದಲ್ಲಿ ವರ್ಷಕ್ಕೆ 8.21 ಲಕ್ಷ ಮೆಟ್ರಿಕ್ ಟನ್ ದ್ರಾಕ್ಷಿ ಬೆಳೆದರೆ, ವಿಜಯಪುರ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ 25,637 ಹೆಕ್ಟೇರ್ ಪ್ರದೇಶದಲ್ಲಿ 6.64 ಲಕ್ಷ ಮೆಟ್ರಿಕ್ ಟನ್ ದ್ರಾಕ್ಷಿ ಬೆಳೆಯಲಾಗುತ್ತದೆ. ಶೇ 90ರಷ್ಟು ಒಣ ದ್ರಾಕ್ಷಿ ಇಲ್ಲಿಯೇ ಸಿದ್ಧವಾಗುತ್ತದೆ.

'1.25 ಲಕ್ಷ ಮೆಟ್ರಿಕ್ ಟನ್ ಒಣದ್ರಾಕ್ಷಿಗೆ ಶೀತಲ ಘಟಕ ಬೇಕು. ಆದರೆ, ಮೂರು ಜಿಲ್ಲೆ ಸೇರಿ 40 ಸಾವಿರ ಮೆಟ್ರಿಕ್ ಟನ್ ಮಾತ್ರ ಒಣ ದ್ರಾಕ್ಷಿಯನ್ನು ಶೀತಲ ಘಟಕಗಳಲ್ಲಿ ಶೇಖರಿಸಿಡಬಹುದು. ಇನ್ನುಳಿದ 85 ಸಾವಿರ ಮೆಟ್ರಿಕ್ ಟನ್ ಒಣದ್ರಾಕ್ಷಿಗೆ ಶೀತಲ ಘಟಕದ ವ್ಯವಸ್ಥೆ ಕಲ್ಪಿಸಬೇಕು' ಎಂಬುದು ಒಣ ದ್ರಾಕ್ಷಿ ಉತ್ಪಾದಕರ ಒತ್ತಾಯ.

12 ವರ್ಷಗಳಿಂದ ಹೆಚ್ಚುವರಿ ಘಟಕಗಳ ನಿರ್ಮಾಣಕ್ಕೆ ಒತ್ತಡ ಹೇರುತ್ತಿದ್ದೇವೆ. ಉತ್ತರ ಕರ್ನಾಟಕ ಭಾಗದ ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆಯಿಂದ ಬೇಡಿಕೆ ಈಡೇರಿಲ್ಲ

ಅಭಯಕುಮಾರ್ ಎಸ್. ನಾಂದ್ರೇಕರ್, ಅಧ್ಯಕ್ಷ, ಕರ್ನಾಟಕ ದ್ರಾಕ್ಷಿ ಬೆಳೆಗಾರರ ಅಸೋಸಿಯೇಷನ್, ವಿಜಯಪುರ

'ಶೀತಲ ಘಟಕಗಳ ಕೊರತೆ ಇರುವ ಕಾರಣ ಬಹುತೇಕ ರೈತರು ಮಹಾರಾಷ್ಟ್ರದತ್ತ ಮುಖ ಮಾಡುತ್ತಾರೆ. ಇದರಿಂದ ಶೇ 80ರಷ್ಟು ಒಣದ್ರಾಕ್ಷಿ ಅಲ್ಲಿಯೇ ಸಂಗ್ರಹಿಸಲಾಗುತ್ತದೆ. ಒಂದು ಲಕ್ಷ ಟನ್ ಒಣದ್ರಾಕ್ಷಿ ವ್ಯಾಪಾರವಾದಾಗ, ₹2 ಸಾವಿರ ಕೋಟಿ ವ್ಯಾಪಾರ ನಡೆಯುತ್ತದೆ. ಇದರಿಂದ ರಾಜ್ಯಕ್ಕೂ ಆರ್ಥಿಕ ನಷ್ಟ' ಎಂದು ಒಣ ದ್ರಾಕ್ಷಿ ಉತ್ಪಾದಕರು ತಿಳಿಸಿದರು.

ಘೋಷಿಸಿದ್ದು ₹35 ಕೋಟಿ; ಕೊಟ್ಟಿದ್ದು ₹2 ಕೋಟಿ: 'ವಿಜಯಪುರದಲ್ಲಿರುವ ರಾಜ್ಯ ದ್ರಾಕ್ಷಿ ಮತ್ತು ದ್ರಾಕ್ಷಾರಸ ಮಂಡಳಿಯ 145 ಎಕರೆ ಜಾಗದಲ್ಲಿ ಶೀತಲ ಘಟಕ ನಿರ್ಮಾಣಕ್ಕೆ ಕಳೆದ ಸಾಲಿನ ಬಜೆಟ್‌ನಲ್ಲಿ ₹35 ಕೋಟಿ ಅನುದಾನ ಸರ್ಕಾರ ಘೋಷಿಸಿತು. ಆದರೆ ₹2 ಕೋಟಿಯಷ್ಟೇ ಕೊಟ್ಟಿತು' ಎಂದು ಕರ್ನಾಟಕ ದ್ರಾಕ್ಷಿ ಬೆಳೆಗಾರರ ಅಸೋಸಿಯೇಷನ್ ಅಧ್ಯಕ್ಷ ಅಭಯಕುಮಾರ್ ಎಸ್. ನಾಂದ್ರೇಕರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಘಟಕ ನಿರ್ಮಾಣಕ್ಕೆ ನಬಾರ್ಡ್ ನೆರವು'



'ಶೀತಲ ಘಟಕಗಳ ನಿರ್ಮಾಣಕ್ಕೆ ನಬಾರ್ಡ್ ಸಂಸ್ಥೆಯು ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿಯಡಿ ₹40.75 ಕೋಟಿ ಆರ್ಥಿಕ ನೆರವು ನೀಡಿದೆ. ಈ ನಿಟ್ಟಿನಲ್ಲಿ ಮುಂದಿನ ಹಂತದ ಪ್ರಕ್ರಿಯೆ ಪ್ರಗತಿಯಲ್ಲಿದೆ' ಎಂದು ಕರ್ನಾಟಕ ರಾಜ್ಯ ದ್ರಾಕ್ಷಿ ಮತ್ತು ದ್ರಾಕ್ಷಾರಸ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಟಿ.ಸೋಮು ತಿಳಿಸಿದರು.

'ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮದಡಿ (ಕೆಪೆಕ್) 1 ಕೆ.ಜಿ ಒಣ ದ್ರಾಕ್ಷಿಯನ್ನು 1 ವರ್ಷ ಶೀತಲ ಘಟಕಗಳಲ್ಲಿ ಸಂಗ್ರಹಿಸಲು 47 ಪೈಸೆ ದರ ಇದೆ. ಖಾಸಗಿ ಶೀತಲ ಘಟಕಗಳಲ್ಲಿ 55 ರಿಂದ 75 ಪೈಸೆ ದರ ಇದೆ' ಎಂದರು.

ಸುದ್ದಿ 2 ನಿಮಿಷ

ರಿಲಯನ್ಸ್ ಕ್ಯಾಪಿಟಲ್ ಸ್ವಾಧೀನ: ಹಿಂದುಜಾ ಬಿಡ್‌ಗೆ ಒಲವು

ನವದೆಹಲಿ (ಪಿಟಿಐ): ರಿಲಯನ್ಸ್ ಕ್ಯಾಪಿಟಲ್ ಕಂಪನಿಯನ್ನು ಸ್ವಾಧೀನಪಡಿಸಿಕೊಳ್ಳಲು ಹಿಂದುಜಾ ಸಮೂಹವು ಸಲ್ಲಿಸಿರುವ ಪುನಶ್ಚೇತನ ಯೋಜನೆಗೆ ಸಾಲ ನೀಡಿರುವ ಸಂಸ್ಥೆಗಳು ಒಪ್ಪಿಗೆ ನೀಡಿವೆ ಎಂದು ಮೂಲಗಳು ಹೇಳಿವೆ.

ಹಿಂದುಜಾ ಸಮೂಹದ 'ಇಂಡಸ್‌ಇಂಡ್ ಇಂಟರ್‌ನ್ಯಾಷನಲ್ ಹೋಲ್ಡಿಂಗ್ಸ್ ಲಿ. (ಐಐಎಚ್‌ಎಲ್)' ₹9,661 ಕೋಟಿ ಮೊತ್ತದ ಬಿಡ್ ಅನ್ನು ಸಲ್ಲಿಸಿದೆ. ರಿಲಯನ್ಸ್ ಕ್ಯಾಪಿಟಲ್‌ಗೆ ಸಾಲ ನೀಡಿರುವ ಹಣಕಾಸು ಸಂಸ್ಥೆಗಳ ಪೈಕಿ ಶೇ 99ರಷ್ಟು ಸಂಸ್ಥೆಗಳು ಐಐಎಚ್‌ಎಲ್ ಯೋಜನೆಗೆ ಒಪ್ಪಿಗೆ ಸೂಚಿಸಿ ಮತ ಚಲಾಯಿಸಿವೆ ಎಂದು ತಿಳಿಸಿವೆ.

ರಿಲಯನ್ಸ್ ಕ್ಯಾಪಿಟಲ್‌ನಲ್ಲಿ ಇರುವ ₹500 ಕೋಟಿ ನಗದು ಸಹ ಸಾಲದಾತರಿಗೆ ಹೋಗಲಿದೆ. ಇದರಿಂದಾಗಿ ಒಟ್ಟು ₹10,200 ಕೋಟಿಯು ಸಾಲದಾತರಿಗೆ ಸಿಗಲಿದೆ. ಕಂಪನಿಯು ಪಾವತಿಸಬೇಕಿರುವ ಒಟ್ಟು ಸಾಲದ ಮೊತ್ತವು ₹16 ಸಾವಿರ ಕೋಟಿಯಷ್ಟು ಇದ್ದು, ಅದರಲ್ಲಿ ಶೇ 65ರಷ್ಟು ವಸೂಲಿ ಆದಂತಾಗಲಿದೆ ಎಂದು ಮಾಹಿತಿ ನೀಡಿವೆ.

ಕಂಪನಿಯ ಆಡಳಿತಾಧಿಕಾರಿಯು ಮುಂದಿನ ವಾರ ರಾಷ್ಟ್ರೀಯ ಕಂಪನಿ ಕಾಯ್ದೆ ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಮುಂಬೈ ಪೀಠಕ್ಕೆ ಐಐಎಚ್‌ಎಲ್ ಪುನಶ್ಚೇತನ ಯೋಜನೆಯನ್ನು ಸಲ್ಲಿಸುವ ಸಾಧ್ಯತೆ ಇದೆ.

ಯೋಜನೆಯ ಕುರಿತು ಮಾಹಿತಿ ನೀಡಲು ಜುಲೈ 15ರ ಗಡುವನ್ನು ಎನ್‌ಸಿಎಲ್‌ಟಿ ನೀಡಿದೆ.

₹ 1 ಲಕ್ಷ ಕೋಟಿಗೆ ಇಂಟರ್‌ಗ್ಲೋಬ್ ಮಾರುಕಟ್ಟೆ ಬಂಡವಾಳ ಮೌಲ್ಯ

ನವದೆಹಲಿ (ಪಿಟಿಐ): ಇಂಡಿಗೊ ಕಂಪನಿಯ ಮಾತೃಸಂಸ್ಥೆ ಇಂಟರ್‌ಗ್ಲೋಬ್ ಏವಿಯೇಷನ್‌ನ ಮಾರುಕಟ್ಟೆ ಬಂಡವಾಳ ಮೌಲ್ಯವು ಬುಧವಾರದ ವಹಿವಾಟಿನಲ್ಲಿ ₹ 1 ಲಕ್ಷ ಕೋಟಿಯನ್ನು ತಲುಪಿದೆ. ಈ ಮೈಲಿಗಲ್ಲು ಸಾಧಿಸಿದ ದೇಶದ ಮೊದಲ ವಿಮಾನಯಾನ ಕಂಪನಿ ಎನ್ನುವ ಹೆಗ್ಗಳಿಕೆಗೆ ಅದು ಪಾತ್ರವಾಗಿದೆ.

ಬುಧವಾರದ ವಹಿವಾಟಿನಲ್ಲಿ ಬಿಎಸ್‌ಇನಲ್ಲಿ ಕಂಪನಿಯ ಷೇರು ಮೌಲ್ಯ ಶೇ 3.55ರಷ್ಟು ಹೆಚ್ಚಾಗಿ ಪ್ರತಿ ಷೇರಿನ ಬೆಲೆ ₹1,629ಕ್ಕೆ ತಲುಪಿತು. ಎನ್‌ಎಸ್‌ಇನಲ್ಲಿ ₹2,621ಕ್ಕೆ ತಲುಪಿತು.

ಬಿಎಸ್‌ಇನಲ್ಲಿ ಕಂಪನಿಯ ಮಾರುಕಟ್ಟೆ ಮೌಲ್ಯವು ₹1.01 ಲಕ್ಷ ಕೋಟಿಗೆ ಏರಿಕೆ ಕಂಡಿತು. ಈ ವರ್ಷದಲ್ಲಿ ಈವರೆಗೆ ಕಂಪನಿಯು ಷೇರು ಮೌಲ್ಯದಲ್ಲಿ ಶೇ 20.53ರಷ್ಟು ಏರಿಕೆ ಕಂಡಿದೆ.

ಇಂಡಿಗೊ ಸದ್ಯ ದೇಶದ ಅತಿದೊಡ್ಡ ದೇಶಿ ವಿಮಾನಯಾನ ಕಂಪನಿ ಆಗಿದ್ದು, ಅಂತರರಾಷ್ಟ್ರೀಯ ಕಾರ್ಯಾಚರಣೆಯನ್ನೂ ವಿಸ್ತರಿಸುತ್ತಿದೆ. ಮೇ ತಿಂಗಳಿನಲ್ಲಿ ಕಂಪನಿಯ ದೇಶಿ ಮಾರುಕಟ್ಟೆಯ ಪಾಲು ಶೇ 61.4ರಷ್ಟು ಆಗಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹225-386
ದ್ವಿತಳಿ (ಬಿ.ವಿ)	₹325-486

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144.50
ಗುಡ್ ಲಾಟ್	₹125

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1690 (1690)
ಸೋಯಾ (ರಿಫೈನ್ಡ್)	₹950 (955)
ಸೂರ್ಯಕಾಂತಿ (ರಿಫೈನ್ಡ್)	₹950 (950)
ಪಾಮೋಲಿನ್	₹850 (860)

ಗೋ ಫಸ್ಟ್ ಪುನಶ್ಚೇತನ ಯೋಜನೆ ಪರಿಶೀಲನೆ ನಡೆಸಲಿದೆ ಡಿಜಿಸಿಎ

ಮುಂಬೈ (ಪಿಟಿಐ): ಆರ್ಥಿಕವಾಗಿ ನಷ್ಟದಲ್ಲಿರುವ ಗೋ ಫಸ್ಟ್ ವಿಮಾನಯಾನ ಕಂಪನಿಯ ಪುನಶ್ಚೇತನ ಯೋಜನೆಯನ್ನು ನಾಗರಿಕ ವಿಮಾನಯನ ಮಹಾನಿರ್ದೇಶನಾಲಯ (ಡಿಜಿಸಿಎ) ಪರಿಶೀಲನೆ ನಡೆಸಲಿದೆ ಎಂದು ಮೂಲಗಳು ಹೇಳಿವೆ.

ವಿಮಾನಯಾನ ಕಾರ್ಯಾಚರಣೆಗೆ ಕಂಪನಿಯು ಯಾವೆಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದೆ ಎನ್ನುವುದನ್ನು ಸಹ ಡಿಜಿಸಿಎ ಪರಿಶೀಲಿಸಲಿದೆ ಎಂದೂ ಮೂಲಗಳು ತಿಳಿಸಿವೆ.

ಕಂಪನಿಯ ಹಾಲಿ ಆಡಳಿತ ಮಂಡಳಿಯ ಹಿರಿಯ ಅಧಿಕಾರಿಗಳು ಡಿಜಿಸಿಎನ ಅಧಿಕಾರಿಗಳೊಂದಿಗೆ ಪುನಶ್ಚೇತನ ಯೋಜನೆಯ ವಿವಿಧ ಆಯಾಮಗಳ ಕುರಿತು ಬುಧವಾರ ಚರ್ಚೆ ನಡೆಸಿದ್ದಾರೆ.

ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಮೂಲಗಳ ಪ್ರಕಾರ, ಕಂಪನಿಯಲ್ಲಿನ ಬಿಕ್ಕಟ್ಟನ್ನು ಪರಿಹರಿಸಲು ನೇಮಕ ಆಗಿರುವ ವೃತ್ತಿಪರ ಅಧಿಕಾರಿ ಶೈಲೇಂದ್ರ ಅಜ್ಮೇರ್ ಮತ್ತು ಮಧ್ಯಂತರ ಸಿಇಒ ಕೌಶಿಕ್ ಖೋನಾ ಅವರು ಡಿಜಿಸಿಎ ಅಧಿಕಾರಿಗಳಿಗೆ ಪುನಶ್ಚೇತನ ಯೋಜನೆ ಕುರಿತು ವಿವರವಾದ ಮಾಹಿತಿ ನೀಡಿದ್ದಾರೆ.

ವಾಡಿಯಾ ಕುಟುಂಬದ ಒಡೆತನದಲ್ಲಿ ಇರುವ ಗೋ ಫಸ್ಟ್ ಮೇ 3ರಿಂದ ವಿಮಾನ ಸೇವೆಯನ್ನು ನಿಲ್ಲಿಸಿದ್ದು, ಸ್ವಯಂ ಪ್ರೇರಿತವಾಗಿ ದಿವಾಳಿ ಪ್ರಕ್ರಿಯೆಗೆ ಒಳಗಾಗಿದೆ.

ಡಿಜಿಸಿಎ ಮುಂದಿನ ವಾರ ಪರಿಶೀಲನೆ ನಡೆಸುವ ನಿರೀಕ್ಷೆ ಇದೆ. ಕಾರ್ಯಾಚರಣೆಯನ್ನು ಮತ್ತೆ ಆರಂಭಿಸಿದಾಗ ತಾತ್ಕಾಲಿಕವಾಗಿ ಜೈಪುರ, ಲಖನೌ, ಕಣ್ಣೂರು, ಪಟ್ನಾ, ವಾರಾಣಸಿ ಮತ್ತು ರಾಂಚಿ ಮಾರ್ಗಗಳಲ್ಲಿ ವಿಮಾನ ಸೇವೆ ಲಭ್ಯವಾಗುವುದು ಅನುಮಾನ ಎಂದು ಇನ್ನೊಂದು ಮೂಲ ತಿಳಿಸಿದೆ.

ಕಾರ್ಯಾಚರಣೆ ಪುನರಾರಂಭಿಸಲು ದಿನಕ್ಕೆ ₹10 ಕೋಟಿ ವೆಚ್ಚ ಆಗುವ ಅಂದಾಜು ಮಾಡಲಾಗಿದೆ. ಹೀಗಾಗಿ ₹450 ಕೋಟಿ ಮಧ್ಯಂತರ ನೆರವು ನೀಡಲು ಬ್ಯಾಂಕ್‌ಗಳು ಒಪ್ಪಿಗೆ ನೀಡಿವೆ ಎಂದು ಬ್ಯಾಂಕಿಂಗ್ ಮೂಲಗಳು ಹೇಳಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹600
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹603

ಮುಂಬೈ ಧಾರಣೆ

ಶೇಂಗಾ

29–6–2023

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1700)
ಒಂದು ವಾರದ ಡೆಲಿವರಿ	1695 (1695)
ಸೋಯಾ ಕಚ್ಚಾ	890 (895)
ಪಾಮ್ ವಾರದ ಡೆಲಿವರಿ	848 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
57,700 (57,950)
ಬೆಳ್ಳಿ ಕೆ.ಜಿ 68,900 (69,000))

ಆವರಣದಲ್ಲಿ ಹಿಂದಿನ ದಿನದ ಧಾರಣೆ

'6 ಉದ್ಯೋಗಿಗಳ ವಿರುದ್ಧ ಟಿಸಿಎಸ್ ಕ್ರಮ'

ಮುಂಬೈ (ಪಿಟಿಐ): ಗುತ್ತಿಗೆ ನೌಕರರ ನೇಮಕ ಸಂಬಂಧ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಕಂಪನಿಯಲ್ಲಿನ ಆರು ಉದ್ಯೋಗಿಗಳು ಗುತ್ತಿಗೆ ಸಂಸ್ಥೆಗಳಿಂದ ಕೆಲವು ಅನುಕೂಲಗಳನ್ನು ಪಡೆದುಕೊಂಡಿರುವುದು ಗೊತ್ತಾಗಿದೆ. ಹೀಗಾಗಿ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಟಾಟಾ ಸನ್ಸ್‌ನ ಅಧ್ಯಕ್ಷ ಎನ್. ಚಂದ್ರಶೇಖರನ್ ಗುರುವಾರ ತಿಳಿಸಿದ್ದಾರೆ.

ಟಿಸಿಎಸ್ ಟಾಟಾ ಸನ್ಸ್‌ನ ಅಂಗಸಂಸ್ಥೆ ಆಗಿದೆ. ಟಿಸಿಎಸ್‌ನ ವಾರ್ಷಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಗುತ್ತಿಗೆ ನೌಕರರ ನೇಮಕ ಸಂಬಂಧ ಇನ್ನೂ ಮೂರು ಉದ್ಯೋಗಿಗಳ ಪಾತ್ರದ ಕುರಿತಾಗಿಯೂ ತನಿಖೆ ನಡೆಯುತ್ತಿದೆ ಎಂದು ಹೇಳಿದ್ದಾರೆ.

ಆರು ಉದ್ಯೋಗಿಗಳನ್ನು ಅಮಾನತು ಮಾಡಲಾಗಿದ್ದು, ಗುತ್ತಿಗೆ ಆಧಾರದಲ್ಲಿ ನೇಮಕ ಮಾಡುವ ಆರು ಕಂಪನಿಗಳನ್ನು ಸಹ ನಿಷೇಧಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಫೆಬ್ರುವರಿ ತಿಂಗಳ ಅಂತ್ಯದ ವೇಳೆಗೆ ಮತ್ತು ಮಾರ್ಚ್‌ನಲ್ಲಿ ಕಂಪನಿಗೆ ಎರಡು ಪ್ರತ್ಯೇಕ ಅನಾಮಧೇಯ ದೂರುಗಳು ಬಂದಿವೆ. ಮೊದಲನೆಯದು ಅಮೆರಿಕದಲ್ಲಿ ಬಿಸಿನೆಸ್ ಸಹಾಯಕ ಅಥವಾ ಗುತ್ತಿಗೆ ನೌಕರರ ನೇಮಕ ಮತ್ತು ಎರಡನೆಯದು ಭಾರತದಲ್ಲಿ ನೇಮಕ ಆಗಿರುವುದಕ್ಕೆ ಸಂಬಂಧಿಸಿದ್ದು ಎಂದು ಅವರು ತಿಳಿಸಿದ್ದಾರೆ.

ಅಮಾನತು ಮಾಡಿರುವ ಈ ಉದ್ಯೋಗಿಗಳು ಯಾವ ಸ್ವರೂಪದ ಅನುಕೂಲಗಳನ್ನು ಪಡೆದುಕೊಂಡಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಆದರೆ, ಕೆಲವು ನಿರ್ದಿಷ್ಟ ಕಂಪನಿಗಳ ಪರವಾಗಿರುವ ರೀತಿ ಅವರು ವರ್ತಿಸಿದ್ದಾರೆ ಎಂದು ಚಂದ್ರಶೇಖರನ್ ಹೇಳಿದ್ದಾರೆ.

ಬಿಸಿನೆಸ್ ಸಹಾಯಕರ (ಬಿ.ಎ) ನೇಮಕ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುವುದು. ಪ್ರಕ್ರಿಯೆಯು ಎಲ್ಲಿ ದುರ್ಬಲವಾಗಿದೆ ಎಂಬುದನ್ನು ಕಂಡುಕೊಂಡು ಅದನ್ನು ಸರಿಪಡಿಸಲಾಗುವುದು. ಇಂತಹ ಘಟನೆಗಳು ಮರುಕಳಿಸದಂತೆ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000- 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿಉತ್ತಮ	1600-1650
ಕಾಳು ಮೆಣಸು	480

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14400	14500	14600	161.95
ಎಸಿ	7280	7400	7400	
ಆರ್‌ಪಿ	10000	10700	10600	ಲಂಡನ್
ಆರ್‌ಸಿ	6090	245 on OT	6050	2616 ಡಾಲರ್ಸ್

'ಟಿಸಿಎಸ್' ಜಾರಿ ಮುಂದೂಡಿಕೆ

ನವದೆಹಲಿ (ಪಿಟಿಐ): ವಿದೇಶಿ ಪ್ರವಾಸದ ವೇಳೆ ಕ್ರೆಡಿಟ್ ಕಾರ್ಡ್ ಬಳಕೆಗೆ ಮೂಲದಲ್ಲೇ ತೆರಿಗೆ ಕಡಿತ (ಟಿಸಿಎಸ್) ಮಾಡುವುದು ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ. ಸರ್ಕಾರದ ಹಿಂದಿನ ಆದೇಶದ ಪ್ರಕಾರ ಜುಲೈ 1ರಿಂದ ಜಾರಿಗೆ ಬರಬೇಕಿತ್ತು.

ಹಣಕಾಸು ವರ್ಷವೊಂದರಲ್ಲಿ ವಿದೇಶದಲ್ಲಿ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಮೂಲಕ ₹7 ಲಕ್ಷಕ್ಕಿಂತ ಹೆಚ್ಚಿನ ವೆಚ್ಚಕ್ಕೆ 20ರಷ್ಟು ಟಿಸಿಎಸ್ ಆಗಲಿದೆ.

ಕೇಂದ್ರ ಸರ್ಕಾರವು ಈಚೆಗಷ್ಟೇ ವಿದೇಶದಲ್ಲಿ ಕ್ರೆಡಿಟ್ ಕಾರ್ಡ್ ಬಳಸಿ ಮಾಡುವ ವೆಚ್ಚವನ್ನು ಉದಾರೀಕೃತ ಪಾವತಿ ವ್ಯವಸ್ಥೆ (ಎಲ್‌ಆರ್‌ಎಸ್) ಅಡಿಯಲ್ಲಿ ತಂದಿದೆ. ಇದರಿಂದಾಗಿ ಈ ಬದಲಾವಣೆಗಳು ಆಗಿವೆ.

ವಿದೇಶಿ ಪ್ರವಾಸಕ್ಕೆ ಕ್ರೆಡಿಟ್ ಕಾರ್ಡ್ ಬಳಸಿದರೆ ಗರಿಷ್ಠ ಶೇ 20ರಷ್ಟು ಟಿಸಿಎಸ್ ಕಟ್ಟಬೇಕಾಗುತ್ತದೆ.

ಶತಾಯುಷಿ ಮಾಜಿ ಯೋಧನಿಗೆ ಗೌರವ

ಲಂಡನ್(ಪಿಟಿಐ): ಇಲ್ಲಿನ 10 ಡೌನಿಂಗ್ ಸ್ಟ್ರೀಟ್‌ನಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಎರಡನೇ ಮಹಾಯುದ್ಧದಲ್ಲಿ ಹೋರಾಡಿದ್ದ ಸಿಖ್ ಯೋಧ, ಶತಾಯುಷಿ ರಾಜಿಂದರ್ ಸಿಂಗ್ ದತ್ತ ಅವರನ್ನು ಬ್ರಿಟಿಷ್ ಪ್ರಧಾನಮಂತ್ರಿ ರಿಷಿ ಸುನಕ್ ಗೌರವಿಸಿದರು.

101 ವರ್ಷದ ರಾಜಿಂದರ್ ತಾವು ಸಲ್ಲಿಸಿದ ಸೇವೆ ಹಾಗೂ 'ಅವಿಭಜಿತ ಭಾರತೀಯ ಮಾಜಿ ಸೈನಿಕರ ಸಂಘ'ವನ್ನು ಮುನ್ನಡೆಸಿ, ಮಾಜಿ ಯೋಧರಿಗೆ ನೆರವಾಗುತ್ತಿರುವ ಕೆಲಸಕ್ಕಾಗಿ ಈ ಗೌರವಕ್ಕೆ ಭಾಜನರಾದರು.

ಭಾರತದ ವಿಭಜನೆಯ ಪೂರ್ವದಲ್ಲಿ ಜನಿಸಿರುವ (1921) ಸಿಂಗ್, ಬ್ರಿಟಿಷ್ ವಸಾಹತುಶಾಹಿ ಆಡಳಿತದಲ್ಲಿ ಮಿತ್ರಕೂಟದ ಸೇನೆಯಲ್ಲಿ ಯೋಧರಾಗಿದ್ದರು. 1963ರಿಂದಲೂ ನೈಋತ್ಯ ಲಂಡನ್‌ನಲ್ಲಿ ನೆಲೆಸಿದ್ದಾರೆ. 'ಮಾಜಿ ಸೈನಿಕರ ಸಂಘದ ಸೇವೆಗಾಗಿ ಪ್ರಧಾನ ಮಂತ್ರಿಯಿಂದ ಅಪಾರ ಗೌರವ ಸಿಕ್ಕಿದೆ. ಇದು ಸಂಘವನ್ನು ಮುನ್ನಡೆಸಿದ ಎಲ್ಲರಿಗೂ ಸಲ್ಲುತ್ತದೆ' ಎಂದು ರಾಜಿಂದರ್ ಹೇಳಿದರು.

ಬ್ರಿಟನ್‌ನ ಪ್ರಧಾನಮಂತ್ರಿ ರಿಷಿ ಸುನಕ್ ಅವರು ಬುಧವಾರ 10 ಡೌನಿಂಗ್ ಸ್ಟ್ರೀಟ್‌ನಲ್ಲಿ ನಡೆದ ಸಮಾರಂಭದಲ್ಲಿ ಎರಡನೇ ಮಹಾಯುದ್ಧದಲ್ಲಿ ಹೋರಾಡಿದ್ದ ಸಿಖ್ ಯೋಧ, ಶತಾಯುಷಿ ರಾಜಿಂದರ್ ಸಿಂಗ್ ದತ್ತ ಅವರಿಗೆ 'ಪಾಯಿಂಟ್ಸ್ ಆಫ್ ಲೈಟ್' ಗೌರವ ಪ್ರದಾನ ಮಾಡಿದರು –ಪಿಟಿಐ ಚಿತ್ರ

'ರುವಾಂಡಕ್ಕೆ ವಲಸಿಗರು: ಯೋಜನೆ ಕಾನೂನುಬಾಹಿರ'

ಲಂಡನ್ (ಎಪಿ): ಇಂಗ್ಲಿಷ್ ಕಾಲುವೆ ಮೂಲಕ ಅಕ್ರಮವಾಗಿ ನುಸುಳಿರುವ ವಲಸಿಗರನ್ನು ರುವಾಂಡಕ್ಕೆ ಕಳುಹಿಸುವ ಬ್ರಿಟನ್ ಸರ್ಕಾರದ ಯೋಜನೆಯು ಕಾನೂನುಬಾಹಿರ ಎಂದು ನ್ಯಾಯಾಲಯ ತೀರ್ಪು ನೀಡಿದೆ.

ವಲಸಿಗರನ್ನು ಕಳುಹಿಸಬಹುದಾದ 'ಸುರಕ್ಷಿತ ಮೂರನೇ ದೇಶ' ಎಂದು ರುವಾಂಡವನ್ನು ಪರಿಗಣಿಸಲಾಗದು ಎಂದೂ ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಸಣ್ಣ ದೋಣಿಗಳಲ್ಲಿ ಬ್ರಿಟನ್‌ಗೆ ತಲುಪುವ ಸ್ವಲ್ಪ ಮಂದಿ ವಲಸಿಗರಿಗೆ ತಮ್ಮ ದೇಶದಲ್ಲಿ ಆಶ್ರಯ ನೀಡುವುದಾಗಿ ರುವಾಂಡವು ಕಳೆದ ವರ್ಷವೇ ಬ್ರಿಟನ್ ಜೊತೆಗೆ ಒಪ್ಪಂದ ಮಾಡಿಕೊಂಡಿತ್ತು. ವಲಸಿಗರನ್ನು ಕಳುಹಿಸುವ ಒಪ್ಪಂದದ ಪ್ರಕಾರ ಬ್ರಿಟನ್ ಈಗಾಗಲೇ ರುವಾಂಡಕ್ಕೆ ಹಣಕಾಸಿನ ನೆರವು ಕೂಡ ನೀಡಿದೆ.

ಸಂಕ್ಷಿಪ್ತ ಸುದ್ದಿ

ಟೈಟನ್ ಅವಘಡ: ಸಾಕ್ಷ್ಯ ಸಂಗ್ರಹ

ಪೋರ್ಟ್‌ಲ್ಯಾಂಡ್ (ಮೈನೆ): ಟೈಟನ್ ಸಬ್‌ಮರ್ಸಿಬಲ್ ನೌಕೆಯ ಅವಶೇಷಗಳಿಂದ ಸಂಗ್ರಹಿಸಿದ 'ಮನುಷ್ಯನ ಪಳೆಯುಳಿಕೆ'ಗಳೆಂದು ಅಂದಾಜಿಸಿರುವ ಸಾಕ್ಷ್ಯವನ್ನು ಸಂಗ್ರಹಿಸಿ ತರಲಾಗುತ್ತಿದೆ ಎಂದು ಅಮೆರಿಕದ ಕರಾವಳಿ ಕಾವಲು ಪಡೆ ತಿಳಿಸಿದೆ.

ಸಾಗರ ತಳದಲ್ಲಿ ಆಂತರಿಕ ಸ್ಫೋಟಕ್ಕೆ ಒಳಗಾಗಿ ನಜ್ಜುಗುಜ್ಜಾದ ಸಬ್‌ಮರೀನ್‌ನ ಅಳಿದುಳಿದ ಭಾಗಗಳನ್ನು ಸೇಂಟ್ ಜಾನ್ ಬಂದರಿಗೆ ತರಲಾಗಿದೆ. ಈ ಪಳೆಯುಳಿಕೆಗಳಲ್ಲಿ ಮಾನವನ ಅವಶೇಷಗಳೆಂದು ಅಂದಾಜಿಸಿರುವ ಅಂಶಗಳನ್ನು ತರಲಾಗಿದೆ ಎಂದು ಕರಾವಳಿ ಕಾವಲು ಪಡೆ ತಿಳಿಸಿದೆ. ಟೈಟನ್ ನೌಕೆಯು ಐವರು ಸಾಗರ ಸಾಹಸಿಗಳನ್ನು ಹೊತ್ತು, ಟೈಟಾನಿಕ್‌ನ ಅವಶೇಷಗಳನ್ನು ನೋಡಲೆಂದು ಕಡಲಾಳಕ್ಕೆ ಇಳಿದಿತ್ತು. ನೌಕೆಯ ಈ ದುರಂತ ಅಂತ್ಯಕ್ಕೆ ಕಾರಣವೇನೆಂದು ಪತ್ತೆ ಹಚ್ಚುವಲ್ಲಿ ಈ ಅವಶೇಷಗಳು ಮಹತ್ವದ ಪಾತ್ರವಹಿಸಲಿವೆ ಎಂದೂ ತಿಳಿಸಿದೆ.

'ಪುಟಿನ್ ದೌರ್ಬಲ್ಯ ಅಪಾಯಕಾರಿ'

ಬ್ರಸೆಲ್ಸ್ (ಎಎಫ್‌ಪಿ): 'ಅಣ್ವಸ್ತ್ರ ಸಜ್ಜಿತ ರಷ್ಯಾದಲ್ಲಿ ಖಾಸಗಿ ಭದ್ರತಾ ಪಡೆ ವ್ಯಾಗ್ನರ್ ದಂಗೆಯು ದಶಕಗಳಲ್ಲೇ ಅತ್ಯಂತ ದೊಡ್ಡ ರಾಜಕೀಯ ಬಿಕ್ಕಟ್ಟನ್ನು ಉಂಟುಮಾಡಿದ್ದು, ಅಧ್ಯಕ್ಷ ಪುಟಿನ್ ಅವರ ದೌರ್ಬಲ್ಯ ಮಹಾನ್ ಗಂಡಾಂತರದ ಮುನ್ಸೂಚನೆಯಾಗಿದೆ' ಎಂದು ಯುರೋಪ್ ಒಕ್ಕೂಟದ ಉನ್ನತ ರಾಜತಾಂತ್ರಿಕರು ಗುರುವಾರ ಎಚ್ಚರಿಸಿದ್ದಾರೆ.

'ದುರ್ಬಲ ಪುಟಿನ್ ದೊಡ್ಡ ಅಪಾಯಕಾರಿ. ಹಾಗಾಗಿ, ಇದರ ಪರಿಣಾಮಗಳ ಬಗ್ಗೆ ನಮಗೆ ಹೆಚ್ಚಿನ ಎಚ್ಚರ ಇರಬೇಕು' ಎಂದು ಬ್ರುಸೆಲ್ಸ್‌ನಲ್ಲಿ ಯುರೋಪ್ ಒಕ್ಕೂಟದ (ಇಯು) ನಾಯಕರ ಸಭೆಗೂ ಮುನ್ನ ಇಯು ವಿದೇಶಾಂಗ ನೀತಿ ಮುಖ್ಯಸ್ಥ ಜೋಸೆಫ್ ಬೊರೆಲ್ ಹೇಳಿದ್ದಾರೆ.

ವರದಿಯಿಂದ ಭಾರತದ ಹೆಸರು ಕೈಬಿಟ್ಟ ವಿಶ್ವಸಂಸ್ಥೆ

ವಿಶ್ವಸಂಸ್ಥೆ (ಪಿಟಿಐ): ಸಶಸ್ತ್ರ ಸಂಘರ್ಷದಿಂದ ಮಕ್ಕಳ ಮೇಲಾಗುವ ಪರಿಣಾಮವನ್ನು ತಡೆಯಲು ಭಾರತ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದೆ. ಹೀಗಾಗಿ, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಅವರು ಈ ವಿಷಯಕ್ಕೆ ಸಂಬಂಧಿಸಿದ ವಾರ್ಷಿಕ ವರದಿಯಿಂದ ಭಾರತದ ಹೆಸರನ್ನು ತೆಗೆದು ಹಾಕಿದ್ದಾರೆ.

'2023ರ ವರದಿಯಿಂದ ಭಾರತದ ಹೆಸರನ್ನು ಕೈಬಿಡಲಾಗಿದೆ' ಎಂದು ಗುಟೆರಸ್ ತಿಳಿಸಿದ್ದಾರೆ.

ಜಮ್ಮು-ಕಾಶ್ಮೀರದಲ್ಲಿ ಸಶಸ್ತ್ರ ಗುಂಪುಗಳು ಬಾಲಕರನ್ನು ನೇಮಕ ಮಾಡಿಕೊಂಡು, ಹೋರಾಟಕ್ಕೆ ಬಳಸುತ್ತಿದ್ದರು. ಇಂಥ ಗುಂಪುಗಳೊಂದಿಗಿನ ನಂಟು ಹೊಂದಿದ ಆರೋಪದಡಿ ಬಾಲಕರನ್ನು ಭಾರತೀಯ ಭದ್ರತಾ ಪಡೆಗಳು ಬಂಧಿಸುತ್ತಿದ್ದವು ಎಂಬ ಕಾರಣಕ್ಕೆ ವಿಶ್ವಸಂಸ್ಥೆಯ ವರದಿಯಲ್ಲಿ ಭಾರತದ ಹೆಸರನ್ನು ಸೇರಿಸಲಾಗುತ್ತಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.12,000 - 17,000. 8951315839, 9880120052

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಸಾರ್ವಜನಿಕ ಪ್ರಕಟಣೆ

ಮಾನ್ಯ 75ನೇ ಸಿಸಿಹೆಚ್, ಸಿಟಿ ಸಿವಿಲ್ ಮೇಯೋ ಹಾಲ್ ನ್ಯಾಯಾಲಯ, ಬೆಂಗಳೂರು.

ಓಎಸ್ 25910/ 2023
ಅರ್ಜಿದಾರರು: ಮಹೇಶ್ ಬಸವೇಗೌಡ ಮತ್ತು ಇತರರು
–ವಿರುದ್ಧ–
ಎದುರುದಾರರು: – Nil –
ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮಹೇಶ್ ಬಸವೇಗೌಡ ಮತ್ತು ಶ್ರೀಮತಿ ರಜನಿ ವಿದ್ಯಾಗೌಡ ರವರು (ದತ್ತು ಪಡೆದ ಪೋಷಕರು) ತಿಳಿಸುವುದೇನೆಂದರೆ ಶ್ರೀ ಶಿವಪ್ರಸಾದ್ ಬಿ.ಬಿ. ಮತ್ತು ವೆಂಕಟಲಕ್ಷ್ಮೀ ಟಿ.ಎನ್. (ದತ್ತು ಕೊಟ್ಟವರು) ರವರ ಪುತ್ರರಾದ ಮಾಸ್ಟರ್ ಆದಿತ್ ಶಿವಕುಮಾರ್ ಅವರನ್ನು ದಿನಾಂಕ 24.02.23ರಂದು ಆರ್ ಆರ್ ನಗರ ರಿಜಿಸ್ಟ್ರೇಷನ್ ಆಫೀಸಿನಲ್ಲಿ ರಿಜಿಸ್ಟಿನಿಸಿ ದತ್ತು ಸ್ವೀಕಾರ ಮಾಡಿರುತ್ತಾರೆ. ಈ ದತ್ತು ಸ್ವೀಕಾರವನ್ನು ದೃಢಪಡಿಸುವ ಸಲುವಾಗಿ ಮಾನ್ಯ ಸಿಸಿಹೆಚ್ 75ನೇ ಮೇಯೋ ಹಾಲ್ ಕೋರ್ಟಿನ ಮುಂದೆ ಓಎಸ್ 25910/2023 ದಾವೆ ಹೂಡಿದ್ದು, ಈ ಬಗ್ಗೆ ಮೂರನೇ ವ್ಯಕ್ತಿಯ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಕೆಳಕಂಡ ನ್ಯಾಯಾಲಯದ ಮುಂದೆ ದಿನಾಂಕ 15.07.2023ರಂದು ಬೆಳಿಗ್ಗೆ 11.00 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು.

ಅರ್ಜಿದಾರರ ಪರ ವಕೀಲರು (ಶ್ರೀಮತಿ ಶಕುಂತಲಾ ಶೆಟ್ಟಿ) ಶೆಟ್ಟಿ & ಎಸೋಸಿಯೇಟ್ಸ್, ವಕೀಲರು ಮತ್ತು ಕಾನೂನು ಸಲಹೆಗಾರರು ಫೋನ್: 93431 13902

ನ್ಯಾಯಾಲಯದ ಆದೇಶದ ಮೇರೆಗೆ ಸಿಸಿಹೆಚ್ 75 ಮೇಯೋ ಹಾಲ್ ಬೆಂಗಳೂರು.

ವೈಯಕ್ತಿಕ

Announcements

ಪ್ರಕಟಣೆ

ಶ್ರೀಮತಿ ಮಾಲಾರಾಣಿ ಆದ ನಾನು, ಚಿಕ್ಕಗೊಲ್ಲರಹಟ್ಟಿ, ಮಹದೇಶ್ವರ ನಗರ, ದಾಸನಪುರ ಹೋಬಳಿ, ಆಶ್ರಯ ಬಡಾವಣೆ, ಬೆಂಗಳೂರು ನಗರ–562123 ಮನೆ ನಂ 7 ರಲ್ಲಿ ವಾಸವಾಗಿರುವ ಶ್ರೀ. ಎನ್.ಜೇಮ್ಸ್ ರವರನ್ನು ಮದುವೆಯಾಗಿದ್ದು ಇವರು ಕ್ರಿಶ್ಚಿಯನ್ ಜಾತಿಗೆ ಸೇರಿರುತ್ತಾರೆ. ಆದರೆ ನಾನು ಆದಿ ದ್ರಾವಿಡ ಜನಾಂಗಕ್ಕೆ ಸೇರಿದ್ದು, ನನ್ನ ಜಾತಿಯನ್ನು ಆದಿ ದ್ರಾವಿಡ (ಎಸ್.ಸಿ) ಜನಾಂಗದಲ್ಲೇ ಮುಂದುವರೆಸಲು ನೋಟರಿ ಎಸ್. ಜಯಂತ್ ರವರ ಮುಂದೆ ದಿನಾಂಕ 28.6.2023ರಂದು ಪ್ರಮಾಣೀಕರಿಸಿದ್ದೇನೆ.

ಭವಿಷ್ಯ

Astrology

'ವಶೀಕರಣ ಮಾಂತ್ರಿಕರು' ಪ್ರೇಮವಿಚಾರ, ಮದುವೆ, ಸಾಲಬಾಧೆ, ವ್ಯಾಪಾರ, ಮನೆಯಲ್ಲಿನ ಅಶಾಂತಿ, ಅನಾರೋಗ್ಯ, ಮಾನಸಿಕ ತೊಂದರೆಗಳಿಗೆ ದೈವಿಕ ಪೂಜಾ ಶಕ್ತಿಯಿಂದ ಫೋನಿನ ಮೂಲಕ ಪರಿಹಾರ.9964108888 (ವೀಡಿಯೋ ಕಾಲ್ ಗೆ ಲಭ್ಯವಿರುತ್ತಾರೆ).

ಪ್ರವಾಸ

Travel

30.6.2023 7ದಿನಗಳು ರಾಮೇಶ್ವರಂ ನವಗ್ರಹಸಹಿತ ತಮಿಳುನಾಡು. 2.9.2023, 22.9.2023 14ದಿನಗಳ ಚಾರ್ ಧಾಮ್ ಯಾತ್ರೆ. ಅಕ್ಟೋಬರ್ ಕಾಶಿ. ನವೆಂಬರ್ ಗುಜರಾತ್. 9448792891.

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ ರೈಲು/ AC ಬಸ್ 11.07.2023 19.07.2023 ಅಮರನಾಥ್ ವೈಷ್ಣೋದೇವಿ ಕಾಶ್ಮೀರ,ಗುಲ್ಮಾರ್ಗ್. 23.08.2023 ಕಾಶಿ,ಅಲಹಾಬಾದ್,ಬುದ್ಧಗಯಾ. 20.09.2023 ಚಾರ್‌ಧಾಮ್ ಸಮೇತ ಪ್ರವಾಸ. 23.09.2023 25.09.2023 35/17 ದಿನಗಳ ದೆಹಲಿ,ಜೈಪುರ್ ಹರಿದ್ವಾರ್ ನೇಪಾಳ,ಗಯಾ ಪೂರಿಜಗನ್ನಾಥ್ ಕೋಲ್ಕತಾ ಚಾರ್‌ಧಾಮ್ ಅಮೃತ್‌ಸರ್ ಇತ್ಯಾದಿ. 29.09.2023 ಸೋಮನಾಥ್ ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ ಮಹಾಕಾಳೇಶ್ವರ. 23.09.2023 ನೇಪಾಳ,ಪೋಕ್ರ ಮುಕ್ತಿನಾಥ,ಲುಂಬಿನಿ. ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 9035711991 7204173686 8317446683

ಶ್ರೀರಾಜರಾಜೇಶ್ವರಿ ಟೂರ್ಸ್ 20.7.23 8ದಿನ ಕಾಶಿ,ಗಯಾ, ಅಯೋಧ್ಯ. 11.8.23 7ದಿನ ತಮಿಳುನಾಡು. 1.9.23 11ದಿನ ಮಧ್ಯಪ್ರದೇಶ. 25.10.23 13ದಿನ ಚಾರ್'ಧಾಮ್. 9739618243, 9743895346.

Book Your Classifieds Ads
Online Log in to
dhclassifieds.com

Contact :
9845114560 : 9731810277
9901641752 : 9886213331
080 - 45557163 / 164

DH DECCAN HERALD ಪ್ರಜಾವಾಣಿ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಜುಲೈ 3ಕ್ಕೆ ಸಭೆ: ಕಾನೂನು ಸಚಿವಾಲಯ, ಕಾನೂನು ಆಯೋಗದಿಂದ ಅಭಿಪ್ರಾಯ ಸಂಗ್ರಹ

ಏಕರೂಪ ಸಂಹಿತೆ: ಸಮಾಲೋಚನೆಗೆ ಸಜ್ಜು

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ವಿವಿಧ ಸಮುದಾಯಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಅಸ್ತಿತ್ವದಲ್ಲಿರುವ ಬೇರೆ ಬೇರೆ ವೈಯಕ್ತಿಕ ಕಾನೂನುಗಳಲ್ಲಿನ ಅವಕಾಶಗಳ ಕುರಿತು ಕಾನೂನು ಸಚಿವಾಲಯ ಮತ್ತು ಕಾನೂನು ಆಯೋಗದಿಂದ ಅಭಿಪ್ರಾಯ ಕ್ರೋಡೀಕರಿಸಲು ಸಂಸದೀಯ ಸ್ಥಾಯಿ ಸಮಿತಿಯು ನಿರ್ಧರಿಸಿದೆ. ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ, ಕಾನೂನು ಮತ್ತು ನ್ಯಾಯದ ಸಂಸದೀಯ ಸಮಿತಿಯು ಈ ಬಗ್ಗೆ ಚರ್ಚಿಸಲು ಜುಲೈ 3ರಂದು ಸಭೆ ಕರೆದಿದೆ.

ಏಕರೂಪ ನಾಗರಿಕ ಸಂಹಿತೆಯು ಅತ್ಯಂತ ಸೂಕ್ಷ್ಮ ಹಾಗೂ ಮಹತ್ವದ ವಿಷಯ. ವೈಯಕ್ತಿಕ ಕಾನೂನುಗಳಲ್ಲಿನ ಅವಕಾಶಗಳ ಬಗ್ಗೆ ಆಳ ಅಧ್ಯಯನದ ಅಗತ್ಯವಿದೆ. ಹಾಗಾಗಿ, ಯುಸಿಸಿಗೆ ಸಂಬಂಧಿಸಿದ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಬೇಕು. ಆ ನಂತರವೇ ಶಿಫಾರಸು ಮಾಡಬೇಕು ಎಂದು ಕೇಂದ್ರ ಸರ್ಕಾರವು ಕಾನೂನು ಆಯೋಗವನ್ನು ಈಗಾಗಲೇ ಕೋರಿದೆ. ಹಾಗಾಗಿ, ಈ ಸಭೆಯು ಮಹತ್ವ ಪಡೆದಿದೆ.

ಬಿಜೆಪಿ ಸಂಸದ ಸುಶೀಲ್ ಕುಮಾರ್ ಮೋದಿ ಅಧ್ಯಕ್ಷತೆಯ ಸಂಸದೀಯ ಸಮಿತಿಯು, ಮದುವೆ, ವಿಚ್ಛೇದನ, ಮಕ್ಕಳ ರಕ್ಷಣೆ ಮತ್ತು ಪಾಲನೆ, ದತ್ತು ಸ್ವೀಕಾರ, ಉತ್ತರಾಧಿಕಾರಕ್ಕೆ ಸಂಬಂಧಿಸಿದ ವೈಯಕ್ತಿಕ ಕಾನೂನುಗಳ ಬಗ್ಗೆ ಹಲವು ಭಾಗೀದಾರರಿಂದ ಅಭಿಪ್ರಾಯ ಪಡೆಯಲು ತೀರ್ಮಾನಿಸಿದೆ.

21ನೇ ಕಾನೂನು ಆಯೋಗದ ಅವಧಿಯು 2018ರ ಆಗಸ್ಟ್ 31ಕ್ಕೆ ಕೊನೆಗೊಂಡಿದೆ. ಈ ಹಂತದಲ್ಲಿ ಯುಸಿಸಿ ಜಾರಿ ಅಗತ್ಯವೂ ಇಲ್ಲ, ಅಪೇಕ್ಷಣೀಯವೂ ಅಲ್ಲ ಎಂದು ಈ ಆಯೋಗವು ವರದಿ ನೀಡಿತ್ತು. ಈ ಆಯೋಗದ ಸಮಾಲೋಚನಾ ವರದಿಯ ಪ್ರತಿಯನ್ನು ಸಂಸದೀಯ ಸಮಿತಿಯ ಸದಸ್ಯರಾಗಿರುವ ಎಲ್ಲ 30 ಸಂಸದರಿಗೂ ನೀಡಲಾಗಿದೆ.

ಪ್ರಸ್ತುತ 22ನೇ ಕಾನೂನು ಆಯೋಗ ರಚನೆಗೊಂಡಿದ್ದು, ನಿವೃತ್ತ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಇದರ ಅಧ್ಯಕ್ಷರಾಗಿದ್ದಾರೆ. ಯುಸಿಸಿ ಕುರಿತು ಈ ಆಯೋಗವು ನಾಗರಿಕರು ಮತ್ತು ಮಾನ್ಯತೆ ಪಡೆದಿರುವ ಧಾರ್ಮಿಕ ಸಂಘಟನೆಗಳಿಂದ ಅಭಿಪ್ರಾಯ ಆಹ್ವಾನಿಸಿದ್ದು, ಸಲ್ಲಿಕೆಗೆ ಜುಲೈ 14ರ ಗಡುವು ನೀಡಿದೆ.

ಇದರ ಬೆನ್ನಲ್ಲೇ, ಪ್ರಧಾನಿ ನರೇಂದ್ರ ಮೋದಿ ಅವರು, 'ಎರಡು ಕಾನೂನುಗಳಿದ್ದರೆ ದೇಶ ಮುನ್ನಡೆಸಲು ಸಾಧ್ಯವೇ' ಎಂಬ ಪ್ರಶ್ನೆ ಮುಂದಿಟ್ಟಿದ್ದಾರೆ. ಮತ್ತೊಂದೆಡೆ ಬಿಜೆಪಿ ನೇತೃತ್ವದ ಉತ್ತರ ಪ್ರದೇಶ ಸರ್ಕಾರವು ಯುಸಿಸಿ ಜಾರಿ ಕುರಿತು ಮಸೂದೆ ರಚನೆ ಸಂಬಂಧ ಅಂತಿಮ ವರದಿ ಸಲ್ಲಿಸಲು ಸಮಿತಿಯೊಂದನ್ನು ರಚಿಸಿದೆ.

ಯುಸಿಸಿ ಪರಿಣಾಮ ಅಧ್ಯಯನಕ್ಕೆ 'ಕೈ' ಸಮಿತಿ ರಚನೆ

ಮುಂಬೈ (ಪಿಟಿಐ): ಉದ್ದೇಶಿತ ಯುಸಿಸಿ ಜಾರಿಯಿಂದ ಸಮಾಜದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ವರದಿ ಸಲ್ಲಿಸಲು ಮಹಾರಾಷ್ಟ್ರ ರಾಜ್ಯ ಕಾಂಗ್ರೆಸ್ ಘಟಕವು ಮುಂಬೈ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಬಾಲಚಂದ್ರ ಮುಂಗೇಕರ್ ಅವರ ಅಧ್ಯಕ್ಷತೆಯಲ್ಲಿ ಒಂಬತ್ತು ಸದಸ್ಯರನ್ನು ಒಳಗೊಂಡ ಅಧ್ಯಯನ ಸಮಿತಿಯನ್ನು ರಚಿಸಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಾನಾ ಪಟೋಲೆ, ಕುಮಾರ್ ಕೇತ್ಕರ್, ಹಿರಿಯ ನಾಯಕರಾದ ವಸಂತ ಪುರ್ಕೆ, ಹುಸೇನ್ ದಲ್ವಾಯಿ, ಅನೀಸ್ ಅಹಮ್ಮದ್, ಕಿಶೋರಿ ಗಜ್ಬಿಯೆ, ಅಮರ್ಜಿತ್ ಮನ್ಹಾಸ್, ಜಾನೆಟ್ ಡಿ ಸೋಜಾ ಮತ್ತು ರವಿ ಜಾಧವ್ ಈ ಸಮಿತಿಯಲ್ಲಿದ್ದಾರೆ.

ದೇಶದಲ್ಲಿ ಮುಸ್ಲಿಂ, ಕ್ರೈಸ್ತ ಮತ್ತು ಪಾರ್ಸಿ ಸಮುದಾಯದವರಿಗೆ ಪ್ರತ್ಯೇಕ ವೈಯಕ್ತಿಕ ಕಾನೂನುಗಳಿವೆ. ಹಿಂದೂ, ಸಿಖ್, ಜೈನ ಮತ್ತು ಬೌದ್ಧರು, ಹಿಂದೂ ಸಿವಿಲ್ ಕಾನೂನು ವ್ಯಾಪ್ತಿಗೆ ಒಳಪಡುತ್ತಾರೆ. ಹಾಗಾಗಿ, ಯುಸಿಸಿಯು ಎಲ್ಲ ಧರ್ಮಗಳು ಮತ್ತು ಸಮುದಾಯಗಳನ್ನು ಒಳಗೊಳ್ಳುವುದಿಲ್ಲ ಎಂದು ಕಾಂಗ್ರೆಸ್ ಹೇಳಿದೆ.

ದಕ್ಷಿಣ ಭಾರತ, ಈಶಾನ್ಯ ಭಾರತ ಸೇರಿದಂತೆ ದೇಶದ ಬುಡಕಟ್ಟು ಪ್ರದೇಶದ ಜನರು ವೈವಾಹಿಕ ಮತ್ತು ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ವೈಯಕ್ತಿಕ ನಿಯಮಗಳನ್ನು ಪಾಲಿಸುತ್ತಾರೆ. ಹಾಗಾಗಿ, ಸಂಹಿತೆಯು ಇವರೆಲ್ಲರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಲಿದೆ ಎಂದಿದೆ..

ಶೀಘ್ರವೇ ಜಾರಿಗೆ ಸಿದ್ಧತೆ


ಅಶ್ವಿನಿ ಕುಮಾರ್

ಪಟ್ನಾ (ಪಿಟಿಐ): 'ಏಕರೂಪ ನಾಗರಿಕ ಸಂಹಿತೆಯು ಸಮಾಜದ ಎಲ್ಲಾ ವರ್ಗದ ಜನರ ಹಿತಕಾಯಲಿದ್ದು, ಶೀಘ್ರವೇ ಕೇಂದ್ರ ಸರ್ಕಾರವು ಇದನ್ನು ಜಾರಿಗೊಳಿಸಲಿದೆ' ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಖಾತೆಯ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಇಲ್ಲಿ ಗುರುವಾರ ಮಾತನಾಡಿದ ಅವರು, 'ಬಿಜೆಪಿಯು ತುಷ್ಟೀಕರಣದ ಬದಲಾಗಿ ಸಂತುಷ್ಟೀಕರಣಕ್ಕೆ ಒತ್ತು ನೀಡಿದೆ. ಇದಕ್ಕೆ ಯುಸಿಸಿಯನ್ನು ಜಾರಿಗೊಳಿಸುವ ಅಗತ್ಯವಿದೆ' ಎಂಬ ಮೋದಿ ಅವರ ಹೇಳಿಕೆಯನ್ನು ಸಚಿವರು ಪುನರುಚ್ಚರಿಸಿದರು. ರಾಜಕೀಯ ಲಾಭಕ್ಕಾಗಿ ಮೋದಿ ಈ ಹಾದಿ ತುಳಿದಿದ್ದಾರೆ ಎಂಬ ಪ್ರತಿಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಎಲ್ಲವನ್ನೂ ವಿರೋಧಿಸುವುದೇ ವಿಪಕ್ಷಗಳ ಚಾಳಿಯಾಗಿದೆ' ಎಂದು ವ್ಯಂಗ್ಯವಾಡಿದರು.

> 9 ವರ್ಷಗಳಿಂದಲೂ ಮೌನವಾಗಿದ್ದು ಈಗೇಕೆ ಯುಸಿಸಿ ಜಾರಿಗೆ ಮೋದಿ ಇಂಗಿತ ತೋರಿದ್ದಾರೆ? ಇದು 2024ರ ಲೋಕಸಭಾ ಚುನಾವಣೆಯ ತಂತ್ರವಷ್ಟೇ
> **ಕಪಿಲ್ ಸಿಬಲ್**, ರಾಜ್ಯಸಭಾ ಸದಸ್ಯ

> ದೇಶದಲ್ಲಿ ಬಲವಂತವಾಗಿ ಯುಸಿಸಿ ಜಾರಿಗೊಳಿಸುವ ಮೊದಲು ಕೇಂದ್ರವು ಅದರಿಂದಾಗುವ ಪರಿಣಾಮಗಳ ಬಗ್ಗೆ ಮತ್ತೊಮ್ಮೆ ಚಿಂತಿಸಬೇಕಿದೆ
> **ಫಾರೂಕ್ ಅಬ್ದುಲ್ಲಾ**, ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ

> ಕೆಲವೇ ವರ್ಗದವರ ತುಷ್ಟೀಕರಣದ ಬದಲಾಗಿ ಸಮಾಜದಲ್ಲಿ ಎಲ್ಲರೂ ನೆಮ್ಮದಿಯ ಜೀವನ ನಡೆಸಲು ನಾಗರಿಕ ಸಂಹಿತೆಯನ್ನು ಜಾರಿಗೊಳ್ಳಬೇಕಿದೆ
> **ಅಶ್ವಿನಿ ಕುಮಾರ್ ಚೌಬೆ**, ಕೇಂದ್ರ ಸಚಿವ

'ಯುಸಿಸಿಯಿಂದ ಧಾರ್ಮಿಕ ಸಂಘರ್ಷ'

ನವದೆಹಲಿ: ಬಿಜೆಪಿ ಪ್ರಣಾಳಿಕೆಯ ಕಾರ್ಯಸೂಚಿ ಭಾಗವಾಗಿ ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೆ ಇಂಗಿತ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರ ನಡೆಗೆ ಪ್ರತಿಪಕ್ಷಗಳಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಮೋದಿ ನೇತೃತ್ವದ ಕೇಂದ್ರ ಸರ್ಕಾರವು ದೇಶದಲ್ಲಿ ಧಾರ್ಮಿಕ ಸಂಘರ್ಷ ಸೃಷ್ಟಿಸುವ ಮೂಲಕ ಮುಂಬರುವ ಲೋಕಸಭೆ ಮತ್ತು ವಿವಿಧ ರಾಜ್ಯಗಳ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ರಾಜಕೀಯ ಲಾಭ ಗಿಟ್ಟಿಸಿಕೊಳ್ಳಲು ಈ ತಂತ್ರಗಾರಿಕೆ ಹೆಣೆದಿದೆ ಎಂದು ಆರೋಪಿಸಿವೆ.

ಪ್ರಧಾನಿ ಹೇಳಿಕೆಗೆ ಚೆನ್ನೈನಲ್ಲಿ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಡಿಎಂಕೆ ಮುಖ್ಯಸ್ಥ ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, 'ಧಾರ್ಮಿಕ ಸಂಘರ್ಷಕ್ಕೆ ನಾಂದಿ ಹಾಡಿ ಜನರನ್ನು ಗೊಂದಲಕ್ಕೆ ನೂಕುವುದೇ ಬಿಜೆಪಿಯ ತಂತ್ರ. ಆ ಮೂಲಕ ಲೋಕಸಭಾ ಚುನಾವಣೆಯಲ್ಲಿ ಜಯಗಳಿಸುವುದು ಅವರ ಲೆಕ್ಕಾಚಾರ' ಎಂದಿದ್ದಾರೆ.

ಆದರೆ, ಜೆಡಿ (ಯು) ನಾಯಕ ನಿತೀಶ್ ಕುಮಾರ್, 'ಸೂಕ್ತ ಸಮಾಲೋಚನೆ ನಡೆಸಿದ ಬಳಿಕವಷ್ಟೇ ಯುಸಿಸಿ ಜಾರಿ ವಿರುದ್ಧದ ಹೋರಾಟಕ್ಕೆ ಮುಂದಿನ ಹೆಜ್ಜೆ ಇಡುತ್ತೇವೆ' ಎಂದು ಪಟ್ನಾದಲ್ಲಿ ಸ್ಪಷ್ಟಪಡಿಸಿದ್ದಾರೆ.

ಈಗಾಗಲೇ, ಮೋದಿ ಅವರ ಹೇಳಿಕೆಗೆ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಆರ್‌ಜೆಡಿ, ಸಮಾಜವಾದಿ ಪಕ್ಷ, ಸಿಪಿಎಂ, ಸಿಪಿಐ ಸೇರಿದಂತೆ ಹಲವು ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ. ಇದು ಕಮಲ ಪಾಳಯದ ಚುನಾವಣಾ ತಂತ್ರದ ಭಾಗವಾಗಿದೆ ಎಂದು ಜರೆದಿವೆ. ಮುಸ್ಲಿಂ ಲೀಗ್ ಕೂಡ ಪ್ರಧಾನಿ ನಿಲುವನ್ನು ಕಟುವಾಗಿ ಟೀಕಿಸಿದೆ. 'ಮುಸ್ಲಿಮರ ಷರಿಯಾ ಕಾನೂನು ವಿರೋಧಿಸುವುದೇ ನಾಗರಿಕ ಸಂಹಿತೆಯ ಮೂಲತತ್ವವಾಗಿರಬಾರದು' ಎಂದು ತನ್ನ ಮುಖವಾಣಿಯಾದ 'ಸಾಮ್ನಾ'ದ ಸಂಪಾದಕೀಯದಲ್ಲಿ ಶಿವಸೇನಾ (ಯುಬಿಟಿ) ಪ್ರತಿಪಾದಿಸಿದೆ.

'ಸ್ತ್ರೀಯರಿಗೆ ರಾಜಕೀಯ ಮೀಸಲು ನೀಡಿ'

ಮುಂಬೈ: 'ದೇಶದಲ್ಲಿ ಯುಸಿಸಿ ಜಾರಿಗೊಳಿಸುವ ಮೊದಲು ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ರಾಜಕೀಯ ಮೀಸಲಾತಿ ಸೌಲಭ್ಯ ಕಲ್ಪಿಸಲು ಪ್ರಧಾನಿ ನರೇಂದ್ರ ಮೋದಿ ಅವರು ತ್ವರಿತವಾಗಿ ಕ್ರಮಕೈಗೊಳ್ಳಬೇಕಿದೆ' ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಆಗ್ರಹಿಸಿದ್ದಾರೆ.

'ಯುಸಿಸಿ ಬಗ್ಗೆ ಸಿಖ್, ಜೈನ ಮತ್ತು ಕ್ರೈಸ್ತರು ವಿಭಿನ್ನ ಅಭಿಪ್ರಾಯ ಹೊಂದಿದ್ದಾರೆ. ನನಗೆ ತಿಳಿದಂತೆ ಅವರೆಲ್ಲೂ ಇದರ ಪರವಾಗಿಲ್ಲ. ವಿವಿಧ ಸಮುದಾಯದವರ ಬೇಡಿಕೆ ಮತ್ತು ಸಲಹೆಗಳನ್ನು ಪರಿಶೀಲಿಸಿದ ಬಳಿಕವಷ್ಟೇ ಇದರ ಬಗ್ಗೆ ಪಕ್ಷವು ತನ್ನ ನಿಲುವು ಪ್ರಕಟಿಸಲಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

ರಾಜಸ್ಥಾನದ ಅಜ್ಮೇರ್‌ನಲ್ಲಿ ಗುರುವಾರ ಸುರಿದ ಮುಂಗಾರು ಮಳೆಯಲ್ಲಿ ಮಿಂದೆದ್ದ ಚಿಣ್ಣರು —ಪಿಟಿಐ ಚಿತ್ರ

ಜುಲೈ 3ರಂದು ಮಂತ್ರಿ ಪರಿಷತ್ ಸಭೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಜುಲೈ 3ರಂದು ಮಂತ್ರಿ ಪರಿಷತ್ ಸಭೆ ನಡೆಯಲಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಪ್ರಗತಿ ಮೈದಾನದಲ್ಲಿ ಹೊಸದಾಗಿ ನಿರ್ಮಿಸಿರುವ ಸಭಾಂಗಣದಲ್ಲಿ ಸಭೆ ನಡೆಯುವ ಸಾಧ್ಯತೆ ಇದೆ. ಈ ಸಭಾಂಗಣವು ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಜಿ 20 ಶೃಂಗಸಭೆಯ ಆತಿಥ್ಯ ವಹಿಸಲಿದೆ. ಸಂಸತ್ತಿನ ಮುಂಗಾರು ಅಧಿವೇಶನಕ್ಕೆ ಕೆಲವೇ ದಿನಗಳು ಬಾಕಿ ಇರುವಾಗ ಸಭೆ ನಿಗದಿಯಾಗಿದೆ. ಜುಲೈ ಮೂರನೇ ವಾರದಲ್ಲಿ ಮುಂಗಾರು ಅಧಿವೇಶನ ಆರಂಭವಾಗುವ ಸಾಧ್ಯತೆ ಇದೆ.

ಪ್ರಧಾನಿ ಮೋದಿ ಅವರು ಬಿಜೆಪಿಯ ಉನ್ನತ ನಾಯಕರ ಜೊತೆ ಸುದೀರ್ಘ ಚರ್ಚೆಗಳನ್ನು ಬುಧವಾರವಷ್ಟೇ ನಡೆಸಿದ್ದರು. ಅವರು ತಮ್ಮ ಸಂಪುಟ ಪುನರ್‌ರಚನೆ ಮಾಡುವ ಸಾಧ್ಯತೆಗಳಿವೆ ಎನ್ನುವ ಊಹಾಪೋಹಗಳಿಗೂ ಇದು ನಾಂದಿ ಹಾಡಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ, ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹಾಗೂ ಇತರರ ನಾಯಕರೊಂದಿಗೆ ಮೋದಿ ಸಭೆ ನಡೆಸಿದ್ದರು. ಮುಂಬರುವ ಲೋಕಸಭಾ ಚುನಾವಣೆ ಮತ್ತು ಹಲವು ರಾಜ್ಯಗಳ ವಿಧಾನಸಭಾ ಚುನಾವಣೆಗಳಿಗೆ ಪಕ್ಷವನ್ನು ಸಜ್ಜುಗೊಳಿಸುವ ಸಲುವಾಗಿ, ಸರ್ಕಾರ ಮತ್ತು ಪಕ್ಷದ ಸಂಘಟನೆಯಲ್ಲಿ ಮಹತ್ವದ ಬದಲಾವಣೆಗಳು ಆಗಬಹುದೆಂಬ ಊಹಾಪೋಹಗಳಿಗೆ ಇದು ಕಾರಣವಾಯಿತು.

ಆ.15ರಿಂದ ಎಲ್ಲಾ ಪಂಚಾಯಿತಿಗಳಲ್ಲಿ ಡಿಜಿಟಲ್ ಪಾವತಿ: ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ಆ.15 ರಿಂದ ದೇಶದಾದ್ಯಂತ ಎಲ್ಲಾ ಪಂಚಾಯಿತಿಗಳು ಅಭಿವೃದ್ಧಿ ಕಾರ್ಯಗಳಿಗೆ ಹಣ ಪಾವತಿಸಲು ಹಾಗೂ ಕಂದಾಯ ಸಂಗ್ರಹಕ್ಕೆ ಡಿಜಿಟಲ್ ಪಾವತಿ ವ್ಯವಸ್ಥೆ ಬಳಸುವುದು ಕಡ್ಡಾಯ ಎಂದು ಕೇಂದ್ರ ಪಂಚಾಯತಿ ರಾಜ್ ಸಚಿವಾಲಯ ಹೇಳಿದೆ. ಎಲ್ಲ ಪಂಚಾಯಿತಿಗಳು ಯುಪಿಐ ವ್ಯವಸ್ಥೆ ಹೊಂದಿವೆ ಎಂಬುದನ್ನು ಅಂದು ಘೋಷಿಸಲಾಗುವುದು.

ಮುಖ್ಯಮಂತ್ರಿ, ಸಂಸದರು, ಶಾಸಕರು ಮೊದಲಾದ ಅತಿಥಿಗಳು ಉಪಸ್ಥಿತರಿರುವ ಕಾರ್ಯಕ್ರಮದಲ್ಲಿ 'ಯುಪಿಐ ಪಾವತಿ ವ್ಯವಸ್ಥೆ ಹೊಂದಿರುವ ಪಂಚಾಯಿತಿ' ಎಂಬುದಾಗಿ ಘೋಷಿಸಬೇಕು ಎಂದು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಬರೆದ ಪತ್ರದಲ್ಲಿ ಸಚಿವಾಲಯ ತಿಳಿಸಿದೆ.

'ಶೇ 98ರಷ್ಟು ಪಂಚಾಯಿತಿಗಳು ಯುಪಿಐ ಪಾವತಿ ವ್ಯವಸ್ಥೆಯನ್ನು ಈಗಾಗಲೇ ಬಳಕೆ ಮಾಡುತ್ತಿವೆ' ಎಂದು ಪಂಚಾಯಿತಿ ರಾಜ್ ಸಚಿವಾಲಯದ ಕಾರ್ಯದರ್ಶಿ ಸುನಿಲ್ ಕುಮಾರ್ ಹೇಳಿದ್ದಾರೆ.

'ಸಾರ್ವಜನಿಕ ಹಣಕಾಸು ನಿರ್ವಹಣೆ ವ್ಯವಸ್ಥೆ (ಪಿಎಂಎಫ್‌ಎಸ್) ಮೂಲಕ ಸುಮಾರು ₹1.5 ಲಕ್ಷ ಕೋಟಿ ಮೌಲ್ಯದ ಪಾವತಿಗಳನ್ನು ಮಾಡಲಾಗಿದೆ. ಪಂಚಾಯಿತಿಗಳಲ್ಲಿ ಚೆಕ್ ಮತ್ತು ನಗದು ವಾವತಿಯನ್ನು ಬಹುತೇಕ ನಿಲ್ಲಿಸಲಾಗಿದೆ' ಎಂದೂ ಹೇಳಿದ್ದಾರೆ.

ರಾಹುಲ್ ಮಣಿಪುರ ಭೇಟಿ ಕಾಂಗ್ರೆಸ್–ಬಿಜೆಪಿ ಜಟಾಪಟಿ

ಒಂದನೇ ಪುಟದಿಂದ...

ಹಿಂಸಾಚಾರ ಭುಗಿಲೇಳುವ ಹಾಗೂ ಅವರ ವಾಹನಗಳ ಮೇಲೆ ದಾಳಿ ನಡೆಯುವ ಸಾಧ್ಯತೆಯ ಕಾರಣ ನೀಡಿ, ಚುರಚಾಂದಪುರಕ್ಕೆ ತೆರಳದಂತೆ ಪೊಲೀಸರು ಹೇಳಿದ್ದಾರೆ. ಆಗ ರಾಹುಲ್ ಕೆಲ ಹೊತ್ತು ಅಲ್ಲಿ ಉಳಿದಿದ್ದಾರೆ.

ಆದರೆ, ಚುರಚಾಂದಪುರಕ್ಕೆ ಭೇಟಿ ನೀಡಲು ರಾಹುಲ್ ಅವರಿಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿ ನೂರಾರು ಜನರಿದ್ದ ಗುಂಪು ಪ್ರತಿಭಟನೆ ನಡೆಸಿದೆ. ಈ ಗುಂಪಿನಲ್ಲಿ ಭಾರಿ ಸಂಖ್ಯೆಯಲ್ಲಿ ಮಹಿಳೆಯರಿದ್ದರು.

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚುರಚಾಂದಪುರಕ್ಕೆ ಭೇಟಿ ನೀಡಬಹುದಾದರೆ, ರಾಹುಲ್ ಗಾಂಧಿ ಯಾಕೆ ಭೇಟಿ ನೀಡಬಾರದು' ಎಂದು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಮಹಿಳೆಯೊಬ್ಬರು ಪ್ರಶ್ನಿಸಿದರು.

ಇದೇ ವೇಳೆ, ಪ್ರಯಾಣ ಮುಂದುವರಿಸಲು ರಾಹುಲ್ ಅವರಿಗೆ ಅವಕಾಶ ನೀಡಬಾರದು ಎಂದು ಒತ್ತಾಯಿಸಿ ಮತ್ತೊಂದು ಗುಂಪು ಪ್ರತಿಭಟನೆ ನಡೆಸಿತು. ಆಗ, ಪೊಲೀಸರು ಅಶ್ರುವಾಯು ಶೆಲ್‌ಗಳನ್ನು ಸಿಡಿಸಿ, ಪ್ರತಿಭಟನಕಾರರನ್ನು ಚದುರಿಸಿದರು.

'ಬಂಡುಕೋರ'ರಿಂದ ಅಪ್ರಚೋದಿತ ಗುಂಡಿನ ದಾಳಿ: ವ್ಯಕ್ತಿ ಸಾವು

ಇಂಫಾಲ್: ಜನಾಂಗೀಯ ಸಂಘರ್ಷದಿಂದ ನಲುಗಿರುವ ಮಣಿಪುರದಲ್ಲಿ ಮತ್ತೆ ಹಿಂಸಾಚಾರ ನಡೆದಿದೆ. ಕಂಗ್‌ಪೋಕ್ಪಿ ಜಿಲ್ಲೆಯ ಹರವೋಥೇಲ್ ಗ್ರಾಮದಲ್ಲಿ ಗುರುವಾರ ನಸುಕಿನಲ್ಲಿ ಬಂಡುಕೋರರು ನಡೆಸಿದ ಅಪ್ರಚೋದಿತ ಗುಂಡಿನ ದಾಳಿಯಲ್ಲಿ ವ್ಯಕ್ತಿ ಮೃತಪಟ್ಟು, ಇತರ ಇಬ್ಬರಿಗೆ ಗಾಯಗಳಾಗಿವೆ ಎಂದು ಸೇನೆ ತಿಳಿಸಿದೆ.

ಎರಡು ದಿನಗಳ ಮಣಿಪುರ ಭೇಟಿಗಾಗಿ ರಾಹುಲ್ ಗಾಂಧಿ ಇಂಫಾಲ್‌ಗೆ ಬಂದಿಳಿದ ಕೆಲವೇ ಗಂಟೆಗಳ ಮೊದಲು ಈ ಘಟನೆ ನಡೆದಿದೆ.

'ಘಟನಾ ಸ್ಥಳಕ್ಕೆ ಯೋಧರನ್ನು ಕಳುಹಿಸುವ ಮೂಲಕ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು. ದಾರಿ ಮಧ್ಯೆ ಯೋಧರತ್ತ ಬಂಡುಕೋರರು ಗುಂಡು ಹಾರಿಸಿದರು. ಆದರೆ, ಯಾವುದೇ ಪ್ರಾಣ ಹಾನಿಯಾಗದ ರೀತಿಯಲ್ಲಿ ಯೋಧರು ತಕ್ಕ ಉತ್ತರ ನೀಡಿದ್ದಾರೆ' ಎಂದೂ ಸೇನೆ ತಿಳಿಸಿದೆ.

ಹಿಂಸಾಚಾರ: ಹೇರಾವೋಥೇಲ್ ಗ್ರಾಮದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ವ್ಯಕ್ತಿಯೊಬ್ಬ ಮೃತಪಟ್ಟ ಹಿನ್ನೆಲೆಯಲ್ಲಿ ನಗರದ ಹೃದಯಭಾಗದಲ್ಲಿರುವ ಖ್ವಾಯಿರಾಮಬಂದ್ ಬಜಾರ್‌ನಲ್ಲಿ ಗುಂಪು ಸೇರಿದ್ದರಿಂದ ಗುರುವಾರ ಸಂಜೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಬಿಜೆಪಿ ಕಚೇರಿ ಮೇಲೂ ದಾಳಿ ನಡೆಸಲಾಗಿದೆ.

ಘಟನೆ ಖಂಡಿಸಿ ಮುಖ್ಯಮಂತ್ರಿ ನಿವಾಸದ ವರೆಗೆ ಮೆರವಣಿಗೆ ನಡೆಸುವುದಾಗಿ 100ಕ್ಕೂ ಹೆಚ್ಚು ಜನರಿದ್ದ ಗುಂಪು ಬೆದರಿಕೆ ಒಡ್ಡಿತು. ನಂತರ ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿ ಗುಂಪನ್ನು ಚದುರಿಸಿದರು.

'ಮಣಿಪುರ ಜನಕ್ಕೆ ಕಷ್ಟದ ದಿನಗಳಿವು'

ಪ್ರಜಾವಾಣಿ ವಾರ್ತೆ

ಗುವಾಹಟಿ: 'ಮೇ 3ರಿಂದ ನಡೆಯುತ್ತಿರುವ ಹಿಂಸಾಚಾರದಿಂದಾಗಿ ಮಣಿಪುರ ಜನರು ಬಹಳ ಕಷ್ಟದ ದಿನಗಳನ್ನು ಎದುರಿಸುತ್ತಿದ್ದಾರೆ. ಇದಕ್ಕೆ ತಕ್ಷಣವೇ ಪರಿಹಾರ ಒದಗಿಸುವುದು ಅಗತ್ಯ. ರಾಜ್ಯದಲ್ಲಿ ಶಾಂತಿ ಮರುಸ್ಥಾಪನೆಯೇ ಆದ್ಯತೆಯಾಗಬೇಕು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

ಚುರಚಾಂದಪುರದಲ್ಲಿ ನಾಗರಿಕ ಸಂಘಟನೆಗಳು ಹಾಗೂ ಚರ್ಚ್‌ಗಳ ಪ್ರತಿನಿಧಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಇದಕ್ಕೂ ಮುನ್ನ ಅವರು, ತುಯಿಬೋಂಗ್ ಎಂಬಲ್ಲಿ ಸ್ಥಾಪಿಸಿರುವ ಗ್ರೀನ್‌ವುಡ್ ಪರಿಹಾರ ಕೇಂದ್ರಕ್ಕೆ ಭೇಟಿ ನೀಡಿದರು. ಕೇಂದ್ರದಲ್ಲಿನ ಮಕ್ಕಳೊಂದಿಗೆ ಊಟ ಮಾಡಿದರು.

ನಂತರ ಚುರಚಾಂದಪುರದ ಸರ್ಕಾರಿ ಕಾಲೇಜಿನಲ್ಲಿರುವ ಪರಿಹಾರ ಕೇಂದ್ರಕ್ಕೆ ಭೇಟಿ ನೀಡಿದರು. ಹಿಯಾಂಗತಮ್‌ಗೂ ತೆರಳಿ ವಿವಿಧ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

ಕುಕಿ ಬುಡಕಟ್ಟು ಜನರ ಸಂಘಟನೆಯಾದ ಐಟಿಎಲ್‌ಎಫ್, ರಾಹುಲ್ ಗಾಂಧಿ ಅವರಿಗೆ ಮನವಿಪತ್ರ ಸಲ್ಲಿಸಿತು.

'ಕುಕಿ–ಝೋಮಿ ಸಮುದಾಯದವರು ಇರುವ ಪ್ರದೇಶಗಳಿಗೆ ಪ್ರತ್ಯೇಕ ಆಡಳಿತ ವ್ಯವಸ್ಥೆ ರೂಪಿಸಬೇಕು. ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ತೆಗೆದು, ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಕ್ರಮ ಕೈಗೊಳ್ಳಬೇಕು' ಎಂಬ ಬೇಡಿಕೆಯನ್ನು ಐಟಿಎಲ್‌ಎಫ್ ಮಂಡಿಸಿತು.

ಸಂಜೆ ಇಂಫಾಲ್‌ಗೆ ಮರಳಿದ ರಾಹುಲ್ ಗಾಂಧಿ ಅವರು, ಮೈತೇಯಿ ಸಮುದಾಯದವರು ಆಶ್ರಯ ಪಡೆದಿರುವ ಪರಿಹಾರ ಕೇಂದ್ರಕ್ಕೆ ಭೇಟಿ ನೀಡಿದರು. ಶುಕ್ರವಾರ ಅವರು ವಿಷ್ಣುಪುರದಲ್ಲಿರುವ ಕೇಂದ್ರಕ್ಕೆ ಭೇಟಿ ನೀಡಲಿದ್ದಾರೆ.

ರಾಹುಲ್ ವಿರುದ್ಧ ಬಿಜೆಪಿ ಕಿಡಿ: ಬುಡಕಟ್ಟು ಜನರ ನಡುವಿನ ಘರ್ಷಣೆಯಿಂದ ನಲುಗಿರುವ ಮಣಿಪುರಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭೇಟಿ ನೀಡಿರುವುದು ಅವರ ಬೇಜವಾಬ್ದಾರಿ ವರ್ತನೆಯನ್ನು ತೋರಿಸುತ್ತದೆ ಎಂದು ಬಿಜೆಪಿ ಗುರುವಾರ ಕಿಡಿಕಾರಿದೆ.

ಕಾಂಗ್ರೆಸ್ ಖಂಡನೆ: ಮಣಿಪುರಕ್ಕೆ ಭೇಟಿ ನೀಡಿರುವ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ವಿಷ್ಣುಪುರದಲ್ಲಿ ತಡೆದ ಪೊಲೀಸರ ಕ್ರಮವನ್ನು ಕಾಂಗ್ರೆಸ್ ಗುರುವಾರ ಖಂಡಿಸಿದೆ.

'ಜನಾಂಗೀಯ ಹಿಂಸಾಚಾರದಿಂದ ಸಂತ್ರಸ್ತರ ಬಗ್ಗೆ ಸಹಾನುಭೂತಿ ಇರುವ ರಾಹುಲ್, ಅವರನ್ನು ಭೇಟಿಯಾಗಲು ಹೊರಟಿದ್ದರು. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಸರ್ವಾಧಿಕಾರ ವಿಧಾನಗಳ ಮೂಲಕ ರಾಹುಲ್ ಅವರಿಗೆ ತಡೆಯೊಡ್ಡಲು ಯತ್ನಿಸಿದರು' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಟೀಕಿಸಿದ್ದಾರೆ.

ಮಣಿಪುರಕ್ಕೆ ಭೇಟಿ ನೀಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಕಾರಿಗೆ ತಡೆ ಒಡ್ಡಿದ ಪೊಲೀಸರ ಕ್ರಮವನ್ನು ಖಂಡಿಸಿ ವಿಷ್ಣುಪುರದಲ್ಲಿ ಗುರುವಾರ ಜನರು ಪ್ರತಿಭಟಿಸಿದರು —ಪಿಟಿಐ ಚಿತ್ರ

ಕುಕಿ ಸಮುದಾಯಕ್ಕೆ ಸೇನೆಯ ರಕ್ಷಣೆ ಜುಲೈ 3ಕ್ಕೆ 'ಸುಪ್ರಿಂ'ನಿಂದ ವಿಚಾರಣೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಕುಕಿ ಅಲ್ಪಸಂಖ್ಯಾತ ಬುಡಕಟ್ಟು ಜನರಿಗೆ ಸೇನಾ ರಕ್ಷಣೆ ಒದಗಿಸಬೇಕು ಎಂದು ಕೋರಿ ಸ್ಥಳೀಯ ಎನ್‌ಜಿಒ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಜುಲೈ 3ರಂದು ನಡೆಸಲಿದೆ.

ಈ ಸಮುದಾಯದ ಮೇಲೆ ಹಲ್ಲೆ ನಡೆಸುತ್ತಿರುವ ಕೋಮುವಾದಿ ಗುಂಪುಗಳನ್ನು ಶಿಕ್ಷೆಗೊಳಪಡಿಸಬೇಕು ಎಂದು ಅರ್ಜಿ ಸಲ್ಲಿಸಿದ್ದ ಎನ್‌ಜಿಒ 'ಮಣಿಪುರ್ ಟ್ರೈಬಲ್ ಫೋರಂ' ಮನವಿ ಮಾಡಿತ್ತು.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ, ಮನೋಜ್ ಮಿಶ್ರಾ ಅವರಿದ್ದ ಪೀಠವು ಈ ಅರ್ಜಿಯ ವಿಚಾರಣೆ ನಡೆಸಲಿದೆ.

ತಮಿಳುನಾಡು: ಸಚಿವ ಸಂಪುಟದಿಂದ ಸೆಂಥಿಲ್ ವಜಾ

ಚೆನ್ನೈ (ಪಿಟಿಐ): ತಮಿಳುನಾಡಿನ ಸಚಿವ ವಿ. ಸೆಂಥಿಲ್ ಬಾಲಾಜಿ ಅವರನ್ನು ರಾಜ್ಯಪಾಲ ಆರ್.ಎನ್. ರವಿ ಅವರು ಸಚಿವ ಸಂಪುಟದಿಂದ ಗುರುವಾರ ವಜಾ ಮಾಡಿದ್ದಾರೆ.

ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿ ಸೆಂಥಿಲ್ ಅವರು ವಿಚಾರಣೆ ಎದುರಿಸುತ್ತಿದ್ದು, ಸದ್ಯ ಅವರು ನ್ಯಾಯಾಂಗ ವಶದಲ್ಲಿದ್ದಾರೆ. ಈ ಕಾರಣಕ್ಕೆ ಅವರನ್ನು ವಜಾ ಮಾಡಲಾಗಿದೆ ಎಂದು ರಾಜಭವನದ ಹೇಳಿಕೆ ತಿಳಿಸಿದೆ.

ಜಾರಿ ನಿರ್ದೇಶನಾಲಯವು ಸೆಂಥಿಲ್ ಅವರ ವಿರುದ್ಧ ತನಿಖೆ ನಡೆಸುತ್ತಿದೆ ಎಂದೂ ಹೇಳಿದೆ.

ಕಾನೂನು ಹೋರಾಟ – ಸಿ.ಎಂ: 'ರಾಜ್ಯಪಾಲರಿಗೆ ಸಚಿವರನ್ನು ಸಂಪುಟದಿಂದ ವಜಾ ಮಾಡುವ ಅಧಿಕಾರವಿಲ್ಲ. ಈ ವಿಷಯವನ್ನು ನಾವು ಕಾನೂನು ಮೂಲಕವೇ ಎದುರಿಸಲಿದ್ದೇವೆ' ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಪ್ರತಿಕ್ರಿಯಿಸಿದ್ದಾರೆ.

29 ವರ್ಷದ ನಂತರ ತಲುಪಿದ ಸಮನ್ಸ್

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಚಾಲಕನಾಗಿದ್ದು ಈಗ ನಿವೃತ್ತಿಯಾಗಿರುವ ಅಚ್ಚನ್ ಮಿಯಾನ್ ಅವರಿಗೆ 29 ವರ್ಷದ ಹಿಂದೆ ತಾವು ನಡೆಸಿದ್ದ ಅಪಘಾತದಲ್ಲಿ ಮೃತಪಟ್ಟಿದ್ದ ಎಮ್ಮೆ, ನಿವೃತ್ತಿಯ ಎರಡು ದಶಕದ ನಂತರ 'ಕಾಡಲಾರಂಭಿಸಿದೆ'.

ಬಾರಾಬಂಕಿ ಜಿಲ್ಲೆಯ ನಿವಾಸಿ 83 ವರ್ಷದ ಮಿಯಾನ್ ಅವರಿಗೆ, ಎಮ್ಮೆಯ ಸಾವಿಗೆ ಕಾರಣವಾಗಿದ್ದ ಅಪಘಾತ ಸಂಬಂಧ ಈಗ ಕೋರ್ಟ್ ಸಮನ್ಸ್ ತಲುಪಿದೆ. 'ಬರೇಲಿ ಕೋರ್ಟ್‌ಗೆ ವಿಚಾರಣೆಗೆ ಹಾಜರಾಗಬೇಕು. ತಪ್ಪಿದಲ್ಲಿ ನಿಮ್ಮನ್ನು ಬಂಧಿಸಬೇಕಾದೀತು' ಎಂದು ಪೊಲೀಸರು ತಿಳಿಸಿದ್ದಾರೆ. ಮಿಯಾನ್ ಅವರೀಗ ಪಾರ್ಶ್ವವಾಯು ಪೀಡಿತರು. ಏನು ಮಾಡಬೇಕು ಎಂದು ತಿಳಿಯದೇ ಕಣ್ಣೀರಿಟ್ಟಿದ್ದಾರೆ. 'ಪ್ರಕರಣ ಕೈಬಿಟ್ಟಿರಬೇಕು ಎಂದು ಭಾವಿಸಿದ್ದೆ. ಈ ವಯಸ್ಸಿನಲ್ಲಿ ಹೇಗೆ ಕಾನೂನು ಹೋರಾಟ ನಡೆಸಬೇಕು ಎಂಬುದೇ ನನಗೆ ತಿಳಿಯುತ್ತಿಲ್ಲ' ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ರಾಜಸ್ಥಾನ ಮುಖ್ಯಮಂತ್ರಿ ಕಾಲಿಗೆ ಪೆಟ್ಟು

ಜೈಪುರ (ಪಿಟಿಐ): ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ಕಾಲಿಗೆ ಪೆಟ್ಟಾಗಿದ್ದು, ಗುರುವಾರ ಇಲ್ಲಿನ ಸವಾಯಿ ಮಾನ್‌ಸಿಂಗ್ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ತೆರಳಿದರು.

ಅವರ ಎಡಕಾಲಿನ ಹೆಬ್ಬೆರಳಿನ ಮೂಳೆ ಮುರಿದಿದ್ದರೆ, ಬಲಕಾಲಿನ ಹೆಬ್ಬೆರಳಿಗೂ ಪೆಟ್ಟಾಗಿದೆ ಎಂದು ಆಸ್ಪತ್ರೆಯ ಸೂಪರಿಂಟೆಂಡೆಂಟ್ ಅಚಲ್ ಶರ್ಮಾ ತಿಳಿಸಿದ್ದಾರೆ.

ಬೈಕ್‌ನಲ್ಲಿ ಏಳು ಮಕ್ಕಳನ್ನು ಕರೆದೊಯ್ದ ವ್ಯಕ್ತಿ ಬಂಧನ

ಮುಂಬೈ (ಪಿಟಿಐ): 'ಮುಂಬೈನ ತಾರದೇವೊ ಪ್ರದೇಶದಲ್ಲಿ ಬೈಕ್ ಮೇಲೆ ಏಳು ಮಕ್ಕಳನ್ನು ಶಾಲೆಗೆ ಕರೆದೊಯ್ಯುತ್ತಿದ್ದ 40 ವರ್ಷದ ವ್ಯಕ್ತಿಯೊಬ್ಬನನ್ನು ಉದ್ದೇಶಪೂರ್ವಕವಲ್ಲದ ನರಹತ್ಯೆ ಆರೋಪದ ಮೇಲೆ ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಮುಂಬೈನ ಸೆಂಟ್ರಲ್ ಬ್ರಿಜ್ ಬಳಿ ಜೂನ್ 23ರಂದು ಆರೋಪಿಯನ್ನು ಬಂಧಿಸಲಾಗಿದೆ' ಎಂದರು. 'ಬಂಧಿತ ವ್ಯಕ್ತಿಯು ತೆಂಗಿನಕಾಯಿ ವ್ಯಾಪಾರಿ. ಮಕ್ಕಳನ್ನು ಬೈಕ್ ಮೇಲೆ ಕರೆದೊಯ್ಯುತ್ತಿದ್ದ ಸಂದರ್ಭದಲ್ಲಿ ಆತನಿಗೆ ತಡೆಯೊಡ್ಡಲಾಯಿತು. ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ 308ರ ಪ್ರಕಾರ ಹಾಗೂ ಮೋಟಾರ್ ವಾಹನಗಳ ನಿಯಮಗಳಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದರು.

ಉದ್ದ ತೋಳಿನ ಜಾಕೆಟ್: ಮನವಿಗೆ ವಿರೋಧ

ರುವನಂತಪುರ (ಪಿಟಿಐ): ಶಸ್ತ್ರಚಿಕಿತ್ಸೆ ಕೊಠಡಿಗಳಲ್ಲಿ ಉದ್ದ ತೋಳಿನ ಜಾಕೆಟ್ ಮತ್ತು ತಲೆ ಮುಚ್ಚುವ ಬಟ್ಟೆ ಧರಿಸಲು ಅನುಮತಿ ನೀಡಬೇಕೆಂದು ಕೋರಿ ಎಂಬಿಬಿಎಸ್ ಕಲಿಯುತ್ತಿರುವ ಮುಸ್ಲಿಂ ವಿದ್ಯಾರ್ಥಿನಿಯರ ಗುಂಪೊಂದು ಮನವಿ ಮಾಡಿರುವುದಕ್ಕೆ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಸೇರಿದಂತೆ ವಿವಿಧ ವೈದ್ಯಕೀಯ ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ.

'ಆಸ್ಪತ್ರೆಯಲ್ಲಿ ರೋಗಿಗಳ ಸುರಕ್ಷತೆ ಮುಖ್ಯವಾಗಿದೆ. ಇದಕ್ಕಾಗಿ ಶಸ್ತ್ರಚಿಕಿತ್ಸೆ ಕೊಠಡಿಗಳಲ್ಲಿ ಜಾಗತಿಕವಾಗಿ ಅಂಗೀಕರಿಸಿರುವ ಶಿಷ್ಟಾಚಾರದ ಪಾಲನೆ ಅಗತ್ಯ' ಎಂದು ಐಎಂಎ ಹೇಳಿದೆ.

'ವಿದ್ಯಾರ್ಥಿನಿಯರ ಈ ಬೇಡಿಕೆಯು ಅವೈಜ್ಞಾನಿಕ' ಎಂದು ಕೇರಳ ಸರ್ಕಾರಿ ವೈದ್ಯಕೀಯ ಅಧಿಕಾರಿಗಳ ಸಂಘ (ಕೆಜಿಎಂಒಎ) ತಿಳಿಸಿದೆ.

ಜುಲೈ 13–14ರಂದು ಸಭೆ ಸಾಧ್ಯತೆ

ಬೆಂಗಳೂರಿನಲ್ಲಿ ಪ್ರತಿಪಕ್ಷಗಳ ಮುಂದಿನ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಒಗ್ಗಟ್ಟಿನ ಹೋರಾಟಕ್ಕೆ ಜಂಟಿ ಕಾರ್ಯತಂತ್ರ ರೂಪಿಸಲು ವಿರೋಧ ಪಕ್ಷಗಳ ಮುಂದಿನ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ವಿರೋಧ ಪಕ್ಷಗಳ ನಾಯಕರ ಮೊದಲ ಸಭೆ ಬಿಹಾರದ ರಾಜಧಾನಿ ಪಟ್ನಾದಲ್ಲಿ ಜೂನ್ 24ರಂದು ನಡೆದಿತ್ತು. ಮುಂದಿನ ಸಭೆಯನ್ನು ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ಜುಲೈ ಎರಡನೇ ವಾರದಲ್ಲಿ ನಡೆಸಲು ತೀರ್ಮಾನಿಸಲಾಗಿತ್ತು. ಪ್ರತಿಕೂಲ ಹವಾಮಾನದ ಕಾರಣ ಸಭೆಯನ್ನು ಶಿಮ್ಲಾದ ಬದಲು ಬೆಂಗಳೂರಿನಲ್ಲಿ ನಡೆಸಲಾಗುವುದು ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಗುರುವಾರ ಪ್ರಕಟಿಸಿದ್ದಾರೆ. ಪುಣೆಯಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮುಂಗಾರಿನ ಪರಿಸ್ಥಿತಿಯಿಂದಾಗಿ ಸಭೆಯ ಜಾಗವನ್ನು ಬದಲಿಸಿದ್ದೇವೆ' ಎಂದರು.

ಮುಖ್ಯಾಂಶಗಳು

- ಭಾರಿ ಮಳೆಯ ಕಾರಣ ಶಿಮ್ಲಾದ ಬದಲು ಬೆಂಗಳೂರಿನಲ್ಲಿ ಸಭೆ
- ಜೈಪುರದಲ್ಲಿ ಸಭೆ ನಡೆಸಲು ಒಲವು ತೋರಿದ್ದ ಹಲವು ನಾಯಕರು
- ಸಭೆಯಲ್ಲಿ ಎಎಪಿ ಭಾಗವಹಿಸುವುದು ಅನುಮಾನ

'ಸಭೆಯ ದಿನಾಂಕ ಹಾಗೂ ಎರಡು ದಿನ ಸಭೆ ನಡೆಸುವ ಕುರಿತು ಶೀಘ್ರದಲ್ಲೇ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಮೂಲಗಳು ತಿಳಿಸಿವೆ.

ಶಿಮ್ಲಾದಲ್ಲಿ ಸಾಧ್ಯವಾಗದಿದ್ದರೆ ಜೈಪುರದಲ್ಲಿ ಸಭೆ ನಡೆಸುವುದು ಉತ್ತಮ ಎಂದು ವಿರೋಧ ಪಕ್ಷಗಳ ಕೆಲವು ನಾಯಕರು ಸಲಹೆ ನೀಡಿದ್ದರು. ಈ ವರ್ಷದ ಅಂತ್ಯದಲ್ಲಿ ರಾಜಸ್ಥಾನ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಈ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ. ವಿಪಕ್ಷಗಳ ಒಗ್ಗಟ್ಟಿನ ಕುರಿತು ಮತದಾರರಿಗೆ ಸಕಾರಾತ್ಮಕ ಸಂದೇಶ ಕಳುಹಿಸಲು ಜೈಪುರವನ್ನು ವೇದಿಕೆಯನ್ನಾಗಿ ಮಾಡೋಣ ಎಂದು ಕೆಲವು ನಾಯಕರು ಪ್ರತಿಪಾದಿಸಿದ್ದರು. ಕೆಲವು ನಾಯಕರ ಜತೆಗೆ ಸಮಾಲೋಚನೆ ನಡೆಸಿದ ಬಳಿಕವೇ ಬೆಂಗಳೂರಿನಲ್ಲಿ ಸಭೆ ನಡೆಸುವ ತೀರ್ಮಾನಕ್ಕೆ ಬರಲಾಗಿದೆ ಎಂದು ಮೂಲಗಳು ಹೇಳಿವೆ.

'ಸಭೆಯ ಸ್ಥಳ ಬದಲಾವಣೆಯಾಗಿರುವ ಕುರಿತು ನನಗೆ ಮಾಹಿತಿ ಇಲ್ಲ. ಜುಲೈ 13–14ರಂದು ಸಭೆ ನಡೆಸಿದರೆ ಅದರಲ್ಲಿ ಭಾಗವಹಿಸುವುದು ಕಷ್ಟ. ಅದೇ ಸಮಯದಲ್ಲಿ ಪಕ್ಷದ ಸಭೆ ಇದೆ' ಎಂದು ವಿರೋಧ ಪಕ್ಷಗಳ ಕೂಟದ ಹಿರಿಯ ಮುಖಂಡರೊಬ್ಬರು ತಿಳಿಸಿದರು.

ಶಿಮ್ಲಾದಲ್ಲಿ ಕಳೆದ ಕೆಲವು ದಿನಗಳಿಂದ ಭಾರಿ ಮಳೆಯಾಗುತ್ತಿದೆ ಹಾಗೂ ಭೂಕುಸಿತ ಉಂಟಾಗುತ್ತಿದೆ. ಜುಲೈ ತಿಂಗಳಲ್ಲಿ ಇನ್ನಷ್ಟು ಮಳೆಯಾಗುವ ಸಾಧ್ಯತೆ ಇದೆ. ಇಂತಹ ಸನ್ನಿವೇಶದಲ್ಲಿ ವಿರೋಧ ಪಕ್ಷಗಳ ನಾಯಕರು ಶಿಮ್ಲಾಕ್ಕೆ ಬರುವುದು ಕಷ್ಟ ಎಂಬ ಕಾರಣಕ್ಕೆ ಸಭೆಯ ಸ್ಥಳವನ್ನು ಬದಲಾಯಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ರಾಷ್ಟ್ರ ರಾಜಧಾನಿಯಲ್ಲಿ ಸೇವಾ ವಲಯದ ಮೇಲಿನ ನಿಯಂತ್ರಣ ಕುರಿತು ಸುಗ್ರೀವಾಜ್ಞೆ ತಂದಿರುವ ಕೇಂದ್ರ ಸರ್ಕಾರದ ವಿರುದ್ಧ ಹೋರಾಡುವ ವಿಷಯದಲ್ಲಿ ಕಾಂಗ್ರೆಸ್ ಸ್ಪಷ್ಟ ನಿಲುವು ತಾಳದಿದ್ದರೆ ಮುಂದಿನ ಸಭೆಯಲ್ಲಿ ಭಾಗವಹಿಸುವುದಿಲ್ಲ ಎಂದು ಎಎಪಿ ಈಗಾಗಲೇ ಎಚ್ಚರಿಸಿದೆ.

ಬೆಂಗಳೂರಿನ ಸಭೆಗೆ ಇನ್ನಷ್ಟು ಪಕ್ಷಗಳ ನಾಯಕರನ್ನು ಆಹ್ವಾನಿಸಲಾಗುತ್ತದೆ. ಪಟ್ನಾದಲ್ಲಿ ನಡೆದ ಸಭೆಯಲ್ಲಿ ಆರ್‌ಎಲ್‌ಡಿ ನಾಯಕರು ಭಾಗವಹಿಸಿರಲಿಲ್ಲ. ಮುಂದಿನ ಸಭೆಯಲ್ಲಿ ಈ ಪಕ್ಷದ ನಾಯಕರು ಭಾಗಿಯಾಗುವ ನಿರೀಕ್ಷೆ ಇದೆ. ಜತೆಗೆ, ಫಾರ್ವರ್ಡ್ ಬ್ಲಾಕ್, ಆರ್‌ಎಸ್‌ಪಿ, ಎಂಡಿಎಂಕೆ, ವಿಸಿಕೆ, ಮುಸ್ಲಿಂ ಲೀಗ್, ಕೇರಳ ಕಾಂಗ್ರೆಸ್ (ಮಾಣಿ) ನಾಯಕರನ್ನು ಆಹ್ವಾನಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಹರ್ಷಿತ್ ರಾಣಾ ಅಬ್ಬರದ ಶತಕ

ದುಲೀಪ್ ಟ್ರೋಫಿ: ಬೃಹತ್ ಮೊತ್ತ ಗಳಿಸಿದ ಉತ್ತರ ವಲಯ; ನಿಶಾಂತ್ ಚೆಂದದ ಬ್ಯಾಟಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಶಾಂತ್ ಸಿಂಧು ಮತ್ತು ಹರ್ಷಿತ್ ರಾಣಾ ಅವರ ಮಿಂಚಿನ ಶತಕಗಳ ಬಲದಿಂದ ಉತ್ತರ ವಲಯ ತಂಡವು ಇಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ದೊಡ್ಡ ಮೊತ್ತ ಪೇರಿಸಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನದಾಟದಲ್ಲಿ ನಿಶಾಂತ್ (150; 245ಎ, 4X18, 6X3) ಮತ್ತು ಹರ್ಷಿತ್ (ಔಟಾಗದೆ 122; 86ಎ, 4X12, 6X9) ಅವರ ಬ್ಯಾಟಿಂಗ್‌ನಿಂದಾಗಿ ತಂಡವು 136 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 540 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಇದಕ್ಕುತ್ತರವಾಗಿ ಈಶಾನ್ಯ ವಲಯವು ದಿನದಾಟದ ಅಂತ್ಯಕ್ಕೆ 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 65 ರನ್ ಗಳಿಸಿದೆ. ನಿಲೇಶ್ ಲಾಮಿಚಾನೆ (ಬ್ಯಾಟಿಂಗ್ 35) ಮತ್ತು ಲಾಂಗ್‌ಲೊನಿಯಂಬಾ ಕಿಶನ್‌ಜಿಬಾಮ್ (ಬ್ಯಾಟಿಂಗ್ 1) ಕ್ರೀಸ್‌ನಲ್ಲಿದ್ದಾರೆ.

ಪಂದ್ಯದ ಮೊದಲ ದಿನದಾಟದ ಅಂತ್ಯಕ್ಕೆ ಅರ್ಧಶತಕ ಗಳಿಸಿದ್ದ ನಿಶಾಂತ್ ಸಿಂಧು ಕ್ರೀಸ್‌ನಲ್ಲಿ ಉಳಿದಿದ್ದರು. ಗುರುವಾರ ಬೆಳಿಗ್ಗೆಯಿಂದಲೇ ಬೌಲರ್‌ಗಳನ್ನು ಕಾಡಿದರು. ನಾರಂಗ್ ಅರ್ಧಶತಕದ ಅಂಚಿನಲ್ಲಿ ಔಟಾದರು.

ಆದರೆ, ಕ್ರೀಸ್‌ಗೆ ಬಂದ ಹರ್ಷಿತ್ ರಾಣಾ ಟಿ20 ಮಾದರಿಯ ಬ್ಯಾಟಿಂಗ್ ಮಾಡಿದರು. ಅವರು ಒಂಬತ್ತು ಸಿಕ್ಸರ್ ಬಾರಿಸಿದರು. ಆದರೆ ಅವರ ಆರ್ಭಟವನ್ನು ಸಂಭ್ರಮಿಸಲು ಗ್ಯಾಲರಿಗಳಲ್ಲಿ ಪ್ರೇಕ್ಷಕರೇ ಇರಲಿಲ್ಲ. ನಿಶಾಂತ್ ಮತ್ತು ಹರ್ಷಿತ್ ಎಂಟನೇ ವಿಕೆಟ್ ಜೊತೆಯಾಟದಲ್ಲಿ 104 ರನ್ ಸೇರಿಸಿದರು. ಆದರೆ, ನಿಶಾಂತ್ ಅವರು ಶಾಂತಚಿತ್ತದಿಂದ ಆಡಿದರು.

ದುಲೀಪ್ ಟ್ರೋಫಿ ಟೂರ್ನಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಶತಕ ಗಳಿಸಿದ ಉತ್ತರ ವಲಯದ ಹರ್ಷಿತ್ ರಾಣಾ –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಸಂಕ್ಷಿಪ್ತ ಸ್ಕೋರು: ಚಿನ್ನಸ್ವಾಮಿ ಕ್ರೀಡಾಂಗಣ: ಮೊದಲ ಇನಿಂಗ್ಸ್: ಉತ್ತರ ವಲಯ: 136 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 540 (ನಿಶಾಂತ್ ಸಿಂಧು 150, ಪುಳಕಿತ್ ನಾರಂಗ್ 46, ಹರ್ಷಿತ್ ರಾಣಾ ಔಟಾಗದೆ 122, ಪೀರೊ ಜಾಮ್ ಜೊತಿನ್ ಸಿಂಗ್ 92ಕ್ಕೆ2, ಪಲ್ಜಾರ್ ತಮಾಂಗ್ 95ಕ್ಕೆ1, ದಿಪ್ಪು ಸಂಗ್ಮಾ 93ಕ್ಕೆ1, ಇಮ್ಲಿವಾಟಿ ಲೆಮ್ತೂರ್ 106ಕ್ಕೆ2, ಕಿಶನ್ ಸಿಂಗ 74ಕ್ಕೆ2) ಈಶಾನ್ಯ ವಲಯ: 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 65 (ನಿಲೇಶ್ ಲಾಮಿಚಾನೆ ಬ್ಯಾಟಿಂಗ್ 35, ರಾಂಗ್ಸೆನ್ ಜೊನಾಥನ್ 15, ಬಲ್ತೇಜ್ ಸಿಂಗ್ 32ಕ್ಕೆ2, ಸಿದ್ಧಾರ್ಥ್ ಕೌಲ್ 3ಕ್ಕೆ1)

ಕೆಎಸ್‌ಸಿಎ ಕ್ರೀಡಾಂಗಣ, ಆಲೂರು: ಮೊದಲ ಇನಿಂಗ್ಸ್: ಕೇಂದ್ರ ವಲಯ: 71.4 ಓವರ್‌ಗಳಲ್ಲಿ 182. ಪೂರ್ವ ವಲಯ: 42.2 ಓವರ್‌ಗಳಲ್ಲಿ 122 (ಸುದೀಪ್ ಘರಮಿ 27, ರಿಯಾನ್ ಪರಾಗ್ 33, ಮಣಿಶಂಕರ್ ಮುರಾಸಿಂಗ್ ಔಟಾಗದೆ 30, ಶಿವಂ ಮಾವಿ 24ಕ್ಕೆ2, ಆವೇಶ್ ಖಾನ್ 34ಕ್ಕೆ3, ಯಶ್ ಠಾಕೂರ್ 17ಕ್ಕೆ1, ಸೌರಭ್ ಕುಮಾರ್ 46ಕ್ಕೆ 3), ಎರಡನೇ ಇನಿಂಗ್ಸ್: ಕೇಂದ್ರ ವಲಯ: 25.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 64 (ಹಿಮಾಂಶು ಮಂತ್ರಿ ಬ್ಯಾಟಿಂಗ್ 25, ವಿವೇಕ್ ಸಿಂಗ್ ಬ್ಯಾಟಿಂಗ್ 34)

ಕೇಂದ್ರ ವಲಯ ತಂಡಕ್ಕೆ ಮುನ್ನಡೆ

ತಲಾ ಮೂರು ವಿಕೆಟ್ ಗಳಿಸಿದ ಆವೇಶ್ ಖಾನ್ ಮತ್ತು ಸೌರಭ್ ಕುಮಾರ್ ಅವರ ಬೌಲಿಂಗ್‌ನಿಂದಾಗಿ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಕೇಂದ್ರ ವಲಯ ತಂಡವು ಪೂರ್ವ ವಲಯದ ಎದುರು ಮೊದಲ ಇನಿಂಗ್ಸ್‌ನಲ್ಲಿ 60 ರನ್‌ಗಳ ಮುನ್ನಡೆ ಗಳಿಸಿತು.

ಮೊದಲ ದಿನದಾಟದಲ್ಲಿ ಕೇಂದ್ರ ವಲಯವು 182 ರನ್‌ಗಳಿಗೆ ಆಲೌಟ್ ಆಗಿತ್ತು. ಆದರೆ, ಅಭಿಮನ್ಯು ಈಶ್ವರನ್ ನಾಯಕತ್ವದ ಪೂರ್ವ ವಲಯ ತಂಡಕ್ಕೆ 42.2 ಓವರ್‌ಗಳಲ್ಲಿ 122 ರನ್ ಗಳಿಸಲಷ್ಟೇ ಸಾಧ್ಯವಾಯಿತು. ವೇಗಿ ಆವೇಶ್ ಖಾನ್ ಮತ್ತು ಎಡಗೈ ಸ್ಪಿನ್ನರ್ ಸೌರಭ್ ಅವರ ಶಿಸ್ತಿನ ಬೌಲಿಂಗ್ ಮುಂದೆ ಪೂರ್ವ ವಲಯ ಹಿನ್ನಡೆ ಅನುಭವಿಸಿತು. ಶಿವಂ ಮಾವಿ ಕೂಡ ಎರಡು ವಿಕೆಟ್ ಪಡೆದು ಮಿಂಚಿದರು.

ಎರಡನೇ ಇನಿಂಗ್ಸ್ ಆರಂಭಿಸಿರುವ ಕೇಂದ್ರ ತಂಡವು ದಿನದಾಟದ ಕೊನೆಗೆ 25.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 64 ರನ್ ಗಳಿಸಿದೆ. ಹಿಮಾಂಶು ಮಂತ್ರಿ (ಬ್ಯಾಟಿಂಗ್ 25) ಮತ್ತು ವಿವೇಕ್ ಸಿಂಗ್ (ಬ್ಯಾಟಿಂಗ್ 34) ಕ್ರೀಸ್‌ನಲ್ಲಿದ್ದಾರೆ. ತಂಡವು ಒಟ್ಟು 124 ರನ್‌ಗಳ ಮುನ್ನಡೆ ಸಾಧಿಸಿದೆ.

ಕೇಂದ್ರ ಕ್ರೀಡಾ ಸಚಿವಾಲಯದಿಂದ ಅನುಮತಿ

ಬಜರಂಗ್, ವಿನೇಶಾಗೆ ವಿದೇಶದಲ್ಲಿ ತರಬೇತಿ

ನವದೆಹಲಿ (ಪಿಟಿಐ): ಒಲಿಂಪಿಯನ್ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ ಮತ್ತು ವಿನೇಶಾ ಪೊಗಟ್ ಅವರು ಏಷ್ಯನ್ ಗೇಮ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್ ಸಿದ್ಧತೆಗಾಗಿ ವಿದೇಶದಲ್ಲಿ ತರಬೇತಿ ಪಡೆಯಲು ತೆರಳುವರು.

ಈ ಕುರಿತು ಕುಸ್ತಿಪಟುಗಳು ಸಲ್ಲಿಸಿದ್ದ ಪ್ರಸ್ತಾವವನ್ನು ಕೇಂದ್ರ ಕ್ರೀಡಾ ಸಚಿವಾಲಯವು ಅನುಮೋದಿಸಿದೆ. ಬಜರಂಗ್ ಅವರು ಕಿರ್ಗಿಸ್ತಾನಕ್ಕೆ ಹಾಗೂ ವಿನೇಶಾ ಹಂಗರಿಗೆ ತೆರಳುವರು. ಜುಲೈ ಮೊದಲ ವಾರದಲ್ಲಿ ಪ್ರಯಾಣಿಸಲಿದ್ದಾರೆ.

ಭಾರತ ಕುಸ್ತಿ ಫೆಡರೇಷನ್ ನಿರ್ಗಮಿತ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ಮೇಲೆ ಲೈಂಗಿಕ ಆರೋಪ ಮಾಡಿ ಪ್ರತಿಭಟನೆಗೆ ವಿನೇಶಾ ಮತ್ತು ಬಜರಂಗ್ ನೇತೃತ್ವ ವಹಿಸಿದ್ದರು. ಜೂನ್ 15ರೊಳಗೆ ಸಿಂಗ್ ಅವರನ್ನು ಬಂಧಿಸಬೇಕು ಇಲ್ಲದಿದ್ದರೆ ಮತ್ತೊಮ್ಮೆ ಬೀದಿಗಿಳಿದು ಪ್ರತಿಭಟಿಸುವುದಾಗಿ ಈಚೆಗೆ ಹೇಳಿದ್ದರು. ಆದರೆ ಇದೀಗ ಅವರು ವಿದೇಶಕ್ಕೆ ತೆರಳಲಿರುವುದರಿಂದ ಪ್ರತಿಭಟನೆ ನಡೆಯುವುದಿಲ್ಲವೆಂಬುದು ಬಹುತೇಕ ಖಚಿತ.

ಬಜರಂಗ್ ಅವರು ಕಿರ್ಗಿಸ್ತಾನ ಇಸಾಯಕ್ ಕುಲ್‌ನಲ್ಲಿ 36 ದಿನಗಳ ಕಾಲ ತರಬೇತಿ ಪಡೆಯಲಿದ್ದಾರೆ. ವಿನೇಶಾ ಅವರು ಹಂಗರಿಯ ಬಿಷ್ಕೇಕ್‌ನಲ್ಲಿ 1 ವಾರ ಮತ್ತು ಟಾಟಾದಲ್ಲಿ 18 ದಿನಗಳ ಕಾಲ ತರಬೇತಿ ಪಡೆಯುವರು. ವಿನೇಶಾ ಅವರೊಂದಿಗೆ ಫಿಜಿಯೊಥೆರಪಿಸ್ಟ್ ಅಶ್ವಿನಿ ಜೀವನ್ ಪಾಟೀಲ, ಕೋಚ್ ಸುದೇಶ್ ಮತ್ತು ಸ್ಪಾರಿಂಗ್ ಪಾರ್ಟನರ್ ಆಗಿರುವ ಸಂಗೀತಾ ಪೋಗಟ್ (ಬಜರಂಗ್ ಅವರ ಪತ್ನಿ) ಕೂಡ ತೆರಳುವರು.

ಬಜರಂಗ್ ಜೊತೆಗೆ ಫಿಜಿಯೊಥೆರಪಿಸ್ಟ್ ಅನುಜ್ ಗುಪ್ತಾ, ಕೋಚ್ ಸುಜೀತ್ ಮಾನ್, ಸಹ ಕುಸ್ತಿಪಟು ಜಿತೇಂದರ್ ಕಿನ್ಹಾ ಮತ್ತು ಸ್ಟ್ರೆಂಥ್, ಕಂಡಿಷನಿಂಗ್ ಪರಿಣತ ಖಾಜಿ ಹಸನ್ ತೆರಳುವರು.

ಒಲಿಂಪಿಕ್ ಗೋಲ್ಡ್ ಕ್ವೆಸ್ಟ್ (ಒಜಿಕ್ಯು) ಲಾಭದ ಉದ್ದೇಶವಿಲ್ಲದ ಕ್ರೀಡಾ ಪ್ರೋತ್ಸಾಹ ಪ್ರತಿಷ್ಠಾನವು ಪಾಟೀಲ, ಗುಪ್ತಾ ಮತ್ತು ಹಸನ್ ಅವರ ವೆಚ್ಚಗಳನ್ನು ಭರಿಸಲಿದೆ.

ಧರಣಿಯಲ್ಲಿ ಪಾಲ್ಗೊಂಡಿದ್ದ ಆರು ಕುಸ್ತಿಪಟುಗಳಿಗೆ ಆಯ್ಕೆ ಟ್ರಯಲ್ಸ್‌ನಲ್ಲಿ ಒಂದು ಬೌಟ್‌ನಲ್ಲಿ ಮಾತ್ರ ಭಾಗ ವಹಿಸಲು ಅವಕಾಶ ನೀಡುವುದಾಗಿ ಈ ಹಿಂದೆ ಭಾರತ ಒಲಿಂಪಿಕ್ ಸಂಸ್ಥೆಯಿಂದ ಡಬ್ಲ್ಯು ಎಫ್‌ಐಗೆ ನೇಮಕವಾಗಿರುವ ಅಡ್‌ಹಾಕ್ ಸಮಿತಿಯು ಹೇಳಿತ್ತು. ಇದರಿಂದಾಗಿ ಬೇರೆ ಕುಸ್ತಿಪಟುಗಳು ಅಸಮಾಧಾನ ವ್ಯಕ್ತಪಡಿಸಿದ್ದರು.



ವಿನೇಶಾ ಪೊಗಟ್ ಮತ್ತು ಬಜರಂಗ್ ಪೂನಿಯಾ

ವಿನಾಯಿತಿ: ಕೋಚ್‌ಗಳ ಅಸಮಾಧಾನ

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸುವ ಭಾರತ ಕುಸ್ತಿ ತಂಡದ ಆಯ್ಕೆ ಟ್ರಯಲ್ಸ್‌ನಲ್ಲಿ ಆರು ಮಂದಿ ಕುಸ್ತಿಪಟುಗಳಿಗೆ ಸಿಂಗಲ್ ಬೌಟ್ ಅವಕಾಶ ನೀಡಿರುವುದಕ್ಕೆ ದೇಶದ ಪ್ರಮುಖ ತರಬೇತುದಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಬಂಧನಕ್ಕೆ ಆಗ್ರಹಿಸಿ ನಡೆದಿದ್ದ ಧರಣಿಯಲ್ಲಿ ಮುಂಚೂಣಿಯಲ್ಲಿದ್ದ ಆರು ಪ್ರಮುಖ ಕುಸ್ತಿಪಟುಗಳಿಗೆ ಈ ರಿಯಾಯಿತಿ ನೀಡಲಾಗಿದೆ. ಇದು ಬೇರೆ ಕುಸ್ತಿಪಟುಗಳು ಮತ್ತು ಕೋಚ್‌ಗಳಲ್ಲಿ ಅಸಮಾಧಾನದ ಕಿಡಿ ಹೊತ್ತಿಸಿದೆ.

ಮೀರಟ್‌ನಲ್ಲಿ ನಡೆದ ಅನೌಪಚಾರಿಕ ಸಭೆಯಲ್ಲಿ ಅಡ್‌ಹಾಕ್ ಸಮಿತಿಯ ಮುಖ್ಯಸ್ಥ ಭೂಪೆಂದರ್ ಸಿಂಗ್ ಬಜ್ವಾ ಅವರು ರಾಷ್ಟ್ರೀಯ ಫ್ರೀಸ್ಟೈಲ್ ಕೋಚ್ ಜಗಮಂದರ್ ಸಿಂಗ್, ಗ್ರಿಕೊ ರೋಮನ್ ಕೋಚ್ ಹರಗೋವಿಂದ್ ಸಿಂಗ್ ಮತ್ತು ಮಹಿಳಾ ತಂಡದ ಕೋಚ್ ವೀರೇಂದ್ರ ಸಿಂಗ್ ದಹಿಯಾ ಅವರೊಂದಿಗೆ ಚರ್ಚಿಸಿದರು.

‘ಸಭೆಯಲ್ಲಿದ್ದ ಮೂವರು ಕೋಚ್‌ಗಳು ಬಜ್ವಾ ಅವರ ಮುಂದೆ ಆರು ಕುಸ್ತಿಪಟುಗಳಿಗೆ ನೀಡಿರುವ ವಿನಾಯಿತಿ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದಾಗಿ ಉದಯೋನ್ಮುಖ ಪ್ರತಿಭಾವಂತರಿಗೆ ಅನ್ಯಾಯವಾಗುತ್ತದೆ. ಅಖಾಡ ನಿರ್ವಹಿಸುವವರು ಮತ್ತು ಗಂಭೀರವಾಗಿ ಅಭ್ಯಾಸ ಮಾಡುವವರ ವಲಯದಲ್ಲಿ ತೀವ್ರ ಅಸಮಾಧಾನ ಭುಗಿಲೆದ್ದಿದೆ. ಇದೊಂದು ಪಕ್ಷಪಾತದ ನಿರ್ಧಾರವಾಗಿದೆಯೆಂದಿದ್ದಾರೆ’ ಎಂದು ಐಒಎ ಮೂಲಗಳು ತಿಳಿಸಿವೆ.

‘ಈ ವಿಷಯದ ಕುರಿತು ಸಮಿತಿಯು ಪರಿಶೀಲನೆ ನಡೆಸುವುದೆಂದು ಬಜ್ವಾ ಭರವಸೆ ನೀಡಿದ್ದಾರೆ’ ಎಂದೂ ತಿಳಿಸಿದ್ದಾರೆ.

ಪ್ರತಿಭಟನೆಯ ಮುಂಚೂಣಿಯಲ್ಲಿದ್ದ ವಿನೇಶಾ ಪೊಗಟ್, ಬಜರಂಗ್ ಪೂನಿಯಾ, ಸಾಕ್ಷಿ ಮಲಿಕ್, ಸತ್ಯವ್ರತ್ ಕಾದಿಯಾನ್, ಜಿತೇಂದರ್ ಕಿನ್ಹಾ ಮತ್ತು ಸಂಗೀತಾ ಪೊಗಟ್ ಅವರಿಗೆ ಈ ವಿನಾಯಿತಿ ನೀಡಲಾಗಿದೆ. ಏಷ್ಯನ್ ಗೇಮ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗಾಗಿ ಆಗಸ್ಟ್‌ನಲ್ಲಿ ನಲ್ಲಿ ಟ್ರಯಲ್ಸ್ ನಡೆಯಲಿದೆ.

ಫುಟ್‌ಬಾಲ್ ಆಟಗಾರ ಕಣಿಯನ್ ನಿಧನ

ಬೆಂಗಳೂರು: ಕರ್ನಾಟಕ ರಾಜ್ಯ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಕಣಿಯನ್ (47) ಅವರು ಗುರುವಾರ ಕಣಿಯನ್ ಹೃದಯಾಘಾತದಿಂದ ನಿಧನರಾದರು.

1997–98ರಲ್ಲಿ ಅವರು 19 ವರ್ಷದೊಳಗಿನವರ ನ್ಯಾಷನಲ್ ಫುಟ್‌ಬಾಲ್ ಕಾನ್ಫರೆನ್ಸ್ (ಎನ್‌ಎಫ್‌ಸಿ) ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ್ದರು. ಅವರು ಐಟಿಐ ಜೂನಿಯರ್ ತಂಡವನ್ನೂ ಪ್ರತಿನಿಧಿಸಿದ್ದರು. ಎಡಿಇ ಫುಟ್‌ಬಾಲ್ ಕ್ಲಬ್‌ಗಳಲ್ಲಿ ಮಿಡ್‌ಫೀಲ್ಡರ್ ಆಗಿದ್ದ ಅವರು ಗೋಲುಗಳನ್ನು ಗಳಿಸಿದ್ದರು. ವಿಂಗ್ಸ್ ಮತ್ತು ಪ್ಲೇ ಮೇಕರ್ ಎರಡಕ್ಕೂ ನಿಖರವಾದ ಪಾಸ್ ನೀಡುವ ಆಟಗಾರನಾಗಿದ್ದರು.

ಪಿಳ್ಳಣ್ಣ ಗಾರ್ಡನ್ ಫುಟ್‌ಬಾಲ್ ಕ್ಲಬ್‌ನ ಪ್ರಮುಖ ಆಟಗಾರನಾಗಿದ್ದ ಅವರು, ಸ್ಥಳೀಯ ಫುಟ್‌ಬಾಲ್ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಅವರ ಮಾರ್ಗದರ್ಶನದಲ್ಲಿ ಹಲವು ಪ್ರತಿಭೆಗಳು ಹೊರಹೊಮ್ಮಿವೆ. ಅವರಿಗೆ ತಾಯಿ, ಪತ್ನಿ, ಪುತ್ರಿ ಇದ್ದಾರೆ.

ಕಣಿಯನ್ ಅವರ ಅಂತ್ಯಕ್ರಿಯೆಯು ಶುಕ್ರವಾರ ಬೆಳಿಗ್ಗೆ 10ಕ್ಕೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಲುಸಾನ್‌ನಲ್ಲಿ ಡೈಮಂಡ್ ಲೀಗ್ ಕೂಟ ಇಂದಿನಿಂದ

ನೀರಜ್, ಶ್ರೀಶಂಕರ್ ಮೇಲೆ ಭರವಸೆ

ಲುಸಾನ್ (ಪಿಟಿಐ): ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಶುಕ್ರವಾರ ಆರಂಭವಾಗಲಿರುವ ಡೈಮಂಡ್ ಲೀಗ್ ಅಥ್ಲೆಟಿಕ್ಸ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಗಾಯದ ಸಮಸ್ಯೆಯಿಂದ ಒಂದು ತಿಂಗಳು ವಿಶ್ರಾಂತಿ ಪಡೆದಿದ್ದ ನೀರಜ್ ಅವರಿಗೆ ಪುನರಾಗಮನದ ಕೂಟವಾಗಲಿದೆ. 25 ವರ್ಷದ ನೀರಜ್ ಹೋದ ತಿಂಗಳು ದೋಹಾದಲ್ಲಿ ನಡೆದ ಡೈಮಂಡ್ ಲೀಗ್ ಮೊದಲ ಚರಣದಲ್ಲಿ 88.67 ಮೀಟರ್ ಜಾವೆಲಿನ್ ಥ್ರೋ ಮಾಡಿದ್ದರು. ಅದು ಅವರ ವೃತ್ತಿಜೀವನದ ನಾಲ್ಕನೇ ಶ್ರೇಷ್ಠ ಥ್ರೋ ಆಗಿತ್ತು. ಅದರ ನಂತರ ಮಾಂಸಖಂಡ ಬಿಗಿತದ ಸಮಸ್ಯೆಯಿಂದ ಬಳಲಿದ್ದರು.

ಜೂನ್ 4ರಂದು ನೆದರ್ಲೆಂಡ್ಸ್‌ನ ಹೆಂಗೆಲೊದಲ್ಲಿ ನಡೆದ ಎಫ್‌ಬಿಕೆ ಗೇಮ್ಸ್ ಹಾಗೂ ಫಿನ್ಲೆಂಡ್‌ನಲ್ಲಿ ಜೂನ್ 13ರಂದು ನಡೆದ ಪಾವೊ ನುರ್ಮಿ ಗೇಮ್ಸ್‌ನಲ್ಲಿ ಭಾಗವಹಿಸಿರಲಿಲ್ಲ. ಆದರೆ ಡೈಮಂಡ್ ಲೀಗ್ ಕೂಟದ ಯಾವುದೇ ಹಂತವನ್ನು ತಪ್ಪಿಸಿಕೊಳ್ಳದಿರಲು ನೀರಜ್ ನಿರ್ಧರಿಸಿದ್ದಾರೆ. ಆದ್ದರಿಂದ ಲಾಸನ್‌ಗೆ ಮರಳಿದ್ದಾರೆ.

ನೀರಜ್ ಚೋಪ್ರಾ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ನೀರಜ್ ಚೋಪ್ರಾಗೆ ಕಠಿಣ ಸ್ಪರ್ಧೆ ಎದುರಾಗುವ ನಿರೀಕ್ಷೆ ಇದೆ. ಕಣದಲ್ಲಿ ಜೆಕ್ ಗಣರಾಜ್ಯದ ಜೇಕಬ್ ವಾಡ್ಲೇಚ್, ಗ್ರೆನೆಡಾದ ವಿಶ್ವ ಚಾಂಪಿಯನ್ ಆ್ಯಂಡರ್ಸನ್ ಪೀಟರ್ಸ್, ಫಿನ್ಲೆಂಡ್‌ನ ಒಲಿವರ್ ಹಿಲ್ಯಾಂಡರ್, ಟ್ರಿನಿಡಾಡ್ ಮತ್ತು ಟೊಬ್ಯಾಗೊದ ಕೆಶಾರ್ನ್ ವಾಲ್ಕಾಟ್ ಮತ್ತು ಜರ್ಮನಿಯ ಜೂಲಿಯನ್ ವೇಬರ್ ಅವರು ಇಲ್ಲಿಯೂ ಕಣದಲ್ಲಿದ್ದಾರೆ.

ಡೈಮಂಡ್ ಲೀಗ್ ಅಂಕಪಟ್ಟಿಯಲ್ಲಿ ಎಂಟು ಪಾಯಿಂಟ್ ಗಳಿಸಿರುವ ನೀರಜ್ ಅಗ್ರಸ್ಥಾನದಲ್ಲಿದ್ದಾರೆ. ವಾಡ್ಲೇಚ್ ಏಳು ಅಂಕ ಗಳಿಸಿ ಎರಡನೇ ಮತ್ತು ಪೀಟರ್ಸ್ 6 ಅಂಕಗಳೊಂದಿಗೆ 3ನೇ ಸ್ಥಾನಗಳಲ್ಲಿದ್ದಾರೆ.

ಜುಲೈ 21 ರಂದು ಮೊರಾಕ್ಕೊ ಮತ್ತು ಆಗಸ್ಟ್ 31ರಂದು ಜೂರಿಚ್‌ನಲ್ಲಿ ಡೈಮಂಡ್ ಲೀಗ್ ಲೆಗ್‌ಗಳು ಆಯೋಜನೆಗೊಂಡಿವೆ. ಸೆಪ್ಟೆಂಬರ್ 16 ಮತ್ತು 17ರಂದು ಅಮೆರಿಕದ ಯುಗೆನ್‌ನಲ್ಲಿ ಡೈಮಂಡ್ ಲೀಗ್ ಗ್ರ್ಯಾಂಡ್ ಫೈನಲ್ ನಡೆಯಲಿದೆ.

ಭಾರತದ ಭರವಸೆಯ ಲಾಂಗ್ ಜಂಪ್ ಅಥ್ಲೀಟ್ ಮುರಳಿ ಶ್ರೀಶಂಕರ್ ಲಾಸೆನ್ ಕಣದಲ್ಲಿದ್ದಾರೆ. ಪ್ಯಾರಿಸ್‌ನಲ್ಲಿ ನಡೆದಿದ್ದ ಕೂಟದಲ್ಲಿ ಅವರು 8.09 ಮೀಟರ್ ದೂರ ಜಿಗಿತದ ಸಾಧನೆ ಮಾಡಿದ್ದರು. ಮೂರನೇ ಸ್ಥಾನ ಪಡೆದಿದ್ದರು. 24 ವರ್ಷದ ಶ್ರೀಶಂಕರ್ ತಮ್ಮ ಜಿಗಿತವನ್ನು ಮತ್ತಷ್ಟು ಉತ್ತಮಗೊಳಿಸುವ ಛಲದಲ್ಲಿದ್ದಾರೆ. ಅವರದ್ದು 8.41 ಮೀಟರ್ಸ್ ದೂರ ಜಿಗಿತದ ವೈಯಕ್ತಿಕ ದಾಖಲೆ ಇದೆ.

ಅಜಿತ್ ಅಗರ್ಕರ್

ಡಿ.ಸಿ ಸಹಾಯಕ ಕೋಚ್ ಸ್ಥಾನ ತೊರೆದ ಅಗರ್ಕರ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಯ್ಕೆ ಸಮಿತಿಯ ಮುಖ್ಯಸ್ಥರ ಆಯ್ಕೆ ರೇಸ್‌ನಲ್ಲಿ ಮುಂಚೂಣಿಯಲ್ಲಿರುವ ಮಾಜಿ ಕ್ರಿಕೆಟಿಗ ಅಜಿತ್ ಅಗರ್ಕರ್ ಅವರು, ಐಪಿಎಲ್ ಫ್ರಾಂಚೈಸಿ ಡೆಲ್ಲಿ ಕ್ಯಾಪಿಟಲ್ಸ್‌ನ ಸಹಾಯಕ ಕೋಚ್ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ಶೇನ್ ವ್ಯಾಟ್ಸನ್ ಹಾಗೂ ಅಗರ್ಕರ್ ಇನ್ನು ಮುಂದೆ ನಮ್ಮ ಸಹಾಯಕ ಸಿಬ್ಬಂದಿಯಾಗಿ ಮುಂದುವರಿಯುವುದಿಲ್ಲ ಎಂದು ಡೆಲ್ಲಿ ಕ್ಯಾಪಿಟಲ್ಸ್ ಖಚಿತಪಡಿಸಿದೆ.

‘ನಮ್ಮ ತಂಡಕ್ಕೆ ನೀವು ನೀಡಿರುವ ಕೊಡುಗೆಗಳಿಗೆ ಧನ್ಯವಾದಗಳು. ಅಜಿತ್ ಮತ್ತು ವ್ಯಾಟ್ಸೊ, ನಿಮ್ಮ ಭವಿಷ್ಯದ ಪ್ರಯತ್ನಗಳಿಗೆ ಶುಭಾಶಯಗಳು’ ಎಂದು ಫ್ರಾಂಚೈಸಿಯು ಟ್ವೀಟ್ ಮಾಡಿ ಶುಭ ಹಾರೈಸಿದೆ.

ಡೈವಿಂಗ್: ಆರಿನ್ ಮೋಸೆಸ್‌ಗೆ ಚಿನ್ನ

ಬೆಂಗಳೂರು: ಡಾಲ್ಫಿನ್ ಅಕ್ವಾಟಿಕ್ಸ್‌ನ ಆರಿನ್ ಮೋಸೆಸ್ ವ್ಯಾಸ್ ಅವರು ಎನ್‌ಜಿಆರ್ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಡೈವಿಂಗ್ ಚಾಂಪಿಯನ್‌ಷಿಪ್‌ನ ಗ್ರೂಪ್ 1ರ ಒಂದು ಮೀ. ಸ್ಪ್ರಿಂಗ್‌ಬೋರ್ಡ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

ಕೆನ್ಸಿಂಗ್ಟನ್ ಈಜುಕೊಳದಲ್ಲಿ ಗುರುವಾರ ಆರಂಭಗೊಂಡ ಚಾಂಪಿಯನ್‌ಷಿಪ್‌ನ ಗ್ರೂಪ್ 2ರ ಮತ್ತು ಗ್ರೂಪ್ 3ರ ಬಾಲಕರ ಒಂದು ಮೀ. ಸ್ಪ್ರಿಂಗ್‌ಬೋರ್ಡ್ ಸ್ಪರ್ಧೆಯಲ್ಲಿ ಕ್ರಮವಾಗಿ ಎಸ್.ಸೋಹನ್ ಸೂರಿ ಮತ್ತು ಟಿ. ಸ್ಕಂದನ್ ಪ್ರಸಾದ್ ಚಿನ್ನ ಗೆದ್ದರು.

ಬಾಲಕಿಯರ ವಿಭಾಗದ ಗ್ರೂಪ್ 2ರ ಮತ್ತು ಗ್ರೂಪ್ 3ರ ಒಂದು ಮೀ. ಸ್ಪ್ರಿಂಗ್‌ಬೋರ್ಡ್ ಸ್ಪರ್ಧೆಯಲ್ಲಿ ಕ್ರಮವಾಗಿ ಪೂರ್ವಿಕಾ ವೆಂಕಟೇಶ್ ಮತ್ತು ಹರಿಣಿ ಪ್ರದೀಪ್ ಚಿನ್ನ ಗೆದ್ದರು.

ಫಲಿತಾಂಶಗಳು: (1 ಮೀ ಸ್ಪ್ರಿಂಗ್ ಬೋರ್ಡ್) **ಬಾಲಕರು:** ಗ್ರೂಪ್ I: ಆರಿನ್ ಮೋಸೆಸ್ ವ್ಯಾಸ್ (274 ಪಾಯಿಂಟ್ಸ್, ಡಾಲ್ಫಿನ್ ಅಕ್ವಾಟಿಕ್ಸ್)-1.

ರಾಜ್ಯ ಸಬ್ ಜೂನಿಯರ್ ಹಾಗೂ ಜೂನಿಯರ್ ಡೈವಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಡಾಲ್ಫಿನ್ ಅಕ್ವಾಟಿಕ್ಸ್‌ನ ಆರ್ಯನ್ ಮೋಸೆಸ್ ವ್ಯಾಸ್‌ನ ಡೈವಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ

ಗ್ರೂಪ್ 2: ಎಸ್.ಸೋಹನ್ ಸೂರಿ (249.60 ಪಾಯಿಂಟ್ಸ್, ಡಾಲ್ಫಿನ್ ಅಕ್ವಾಟಿಕ್ಸ್)-1, ಅರ್ಣವ್ ಎ. ಕುಲಕರ್ಣಿ (ಎಬಿಬಿಎ ಸ್ಪೋರ್ಟ್ಸ್ ಕ್ಲಬ್)-2.

ಗ್ರೂಪ್ 3: ಟಿ. ಸ್ಕಂದನ್ ಪ್ರಸಾದ್ (185.10 ಪಾಯಿಂಟ್ಸ್, ಡಾಲ್ಫಿನ್ ಅಕ್ವಾಟಿಕ್ಸ್)-1, ಯುವರಾಜ್ ಸಂತೋಷ್ ಮೋಹನ್ಗೇಕರ್ (ಎಬಿಬಿಎ ಸ್ಪೋರ್ಟ್ಸ್ ಕ್ಲಬ್)-2, ಸುಬ್ಬರಾಜು ವೇದಾಂತ್ (ಡಾಲ್ಫಿನ್ ಅಕ್ವಾಟಿಕ್ಸ್)- 3. **ಬಾಲಕಿಯರು:** ಗ್ರೂಪ್ 2: ಪೂರ್ವಿಕಾ ವೆಂಕಟೇಶ್ (240.75 ಪಾಯಿಂಟ್ಸ್)- 1; ಚೈತ್ರಾ ಎಸ್. ಪ್ರಸಾದ್- 2, ಪಿ.ನಯನಾ- 3 (ಮೂವರೂ ಡಾಲ್ಫಿನ್ ಅಕ್ವಾಟಿಕ್ಸ್). ಗ್ರೂಪ್ 3: ಹರಿಣಿ ಪ್ರದೀಪ್ (115.95 ಪಾಯಿಂಟ್ಸ್)- 1, ಸಮನ್ವಿ ಅವಲಕ್ಕಿ-2, ದಿಶಾ ರಾಜ್ ಅರೆಕಲ್-3 (ಮೂವರೂ ಡಾಲ್ಫಿನ್ ಅಕ್ವಾಟಿಕ್ಸ್).

ರಹಾನೆ ಉಪನಾಯಕ; ಗಂಗೂಲಿಗೆ ಅಚ್ಚರಿ

ಆಯ್ಕೆ ಪ್ರಕ್ರಿಯೆ ಬಗ್ಗೆ ಬಿಸಿಸಿಐ ಮಾಜಿ ಅಧ್ಯಕ್ಷ ಅಸಮಾಧಾನ

ನವದೆಹಲಿ (ಪಿಟಿಐ): ‘ಹದಿನೆಂಟು ತಿಂಗಳುಗಳ ಬಳಿಕ ಭಾರತ ಟೆಸ್ಟ್ ಕ್ರಿಕೆಟ್ ತಂಡಕ್ಕೆ ಮರಳಿರುವ ಅಜಿಂಕ್ಯ ರಹಾನೆ ಅವರಿಗೆ ಉಪನಾಯಕ ಸ್ಥಾನ ನೀಡಿರುವುದು ಅಚ್ಚರಿ ಮೂಡಿಸಿದೆ’ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮಾಜಿ ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದಾರೆ.

ರಹಾನೆ ವಿಚಾರದಲ್ಲಿ ಆಯ್ಕೆದಾರರ ನಿರ್ಧಾರವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದಿರುವ ಅವರು, ಪ್ರಕ್ರಿಯೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳುವ ಅವಶ್ಯಕತೆಯಿದೆ ಎಂದು ಹೇಳಿದ್ದಾರೆ.

ಒಂದೂವರೆ ವರ್ಷದಿಂದ ತಂಡದಿಂದ ಹೊರಗುಳಿದಿದ್ದ ರಹಾನೆ, ಪ್ರಸಕ್ತ ಸಾಲಿನ ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪರ ಬ್ಯಾಟಿಂಗ್ ಲಯ ಕಂಡುಕೊಂಡಿದ್ದರು. ಅದರ ಬೆನ್ನಲ್ಲೇ ಅವರು ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯಕ್ಕಾಗಿ ಭಾರತ ತಂಡಕ್ಕೆ ಪುನರಾಯ್ಕೆ ಆಗಿದ್ದರು. ಆಸ್ಟ್ರೇಲಿಯಾ ವಿರುದ್ಧದ ಫೈನಲ್‌ನಲ್ಲಿ ರಹಾನೆ ಎರಡು ಇನಿಂಗ್ಸ್‌ಗಳಲ್ಲಿ ಕ್ರಮ ವಾಗಿ 89 ಹಾಗೂ 46 ರನ್ ಗಳಿಸಿದ್ದರು.

ಅದಾದ ಬಳಿಕ ಶಿವಸುಂದರ್ ದಾಸ್ ನೇತೃತ್ವದ ರಾಷ್ಟ್ರೀಯ ಆಯ್ಕೆ ಸಮಿತಿಯು ವೆಸ್ಟ್‌ಇಂಡೀಸ್ ಟೆಸ್ಟ್ ಸರಣಿಗೆ ಉಪ ನಾಯಕನಾಗಿ ರಹಾನೆ ಮರು ನೇಮಕ ಮಾಡಿತ್ತು.

ಈ ಕುರಿತು ಲಂಡನ್‌ನಲ್ಲಿ ಪ್ರತಿಕ್ರಿಯಿಸಿರುವ ಗಂಗೂಲಿ, ‘ಶುಭಮನ್ ಗಿಲ್ ಅವರಂತಹ ಪ್ರತಿಭಾವಂತ ಆಟಗಾರರನ್ನು ಆ ಸ್ಥಾನಕ್ಕೆ ಪರಿಗಣಿಸುವುದು ಸೂಕ್ತವಲ್ಲವೇ’ ಎಂದು ಪ್ರಶ್ನಿಸಿದ್ದಾರೆ.

‘ರಹಾನೆಗೆ ಉಪನಾಯಕ ಸ್ಥಾನ ನೀಡಿರುವುದು ತಪ್ಪಾದ ನಿರ್ಣಯ ಎಂದು ನಾನು ಹೇಳುವುದಿಲ್ಲ. ಆದರೆ, 18 ತಿಂಗಳ ಕಾಲ ತಂಡದಿಂದ ಹೊರಗುಳಿದು ಬಳಿಕ ಕೇವಲ ಒಂದು ಟೆಸ್ಟ್ ಪಂದ್ಯವನ್ನಷ್ಟೇ ಆಡಿದ ಆಟಗಾರನಿಗೆ ಆ ಸ್ಥಾನ ನೀಡಲಾಗಿದೆ. ಇದರ ಹಿಂದಿನ ಆಲೋಚನಾ ಕ್ರಮ ನನಗೆ ಅರ್ಥವಾಗುತ್ತಿಲ್ಲ. ತಂಡದಲ್ಲಿ ದೀರ್ಘಕಾಲದಿಂದ ಟೆಸ್ಟ್ ಆಡಿರುವ ರವೀಂದ್ರ ಜಡೇಜ ಅವರಂತಹ ಆಟಗಾರರು ಇದ್ದಾರೆ’ ಎಂದಿದ್ದಾರೆ.

‘ವಿಶ್ವಕಪ್: ಪಂದ್ಯಗಳ ಹಂಚಿಕೆ ಸೂಕ್ತ’

ಸೌರವ್ ಗಂಗೂಲಿ

‘ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯಗಳಿಗೆ ಮೊಹಾಲಿ ಮತ್ತು ನಾಗಪುರದಂತಹ ಸಾಂಪ್ರದಾಯಿಕ ಕೇಂದ್ರಗಳನ್ನು ಕೈಬಿಟ್ಟರೂ ಉತ್ತಮ ಕೇಂದ್ರಗಳನ್ನು ಐಸಿಸಿ ಮತ್ತು ಬಿಸಿಸಿಐ ಆಯ್ಕೆ ಮಾಡಿದೆ’ ಎಂದು ಸೌರವ್ ಗಂಗೂಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

‘ಟೂರ್ನಿಯ ವೇಳಾಪಟ್ಟಿ ಉತ್ತಮವಾಗಿದೆ ಮತ್ತು ಪಂದ್ಯಗಳ ಹಂಚಿಕೆಯೂ ಚೆನ್ನಾಗಿದೆ. ಸರಿಯಾದ ಸ್ಥಳಗಳಿಗೆ ಸರಿಯಾದ ಪಂದ್ಯಗಳನ್ನು ನಿಗದಿಮಾಡಿದೆ. ಇದು ಸ್ಪರ್ಧಾತ್ಮಕವಾದ ವಿಶ್ವಕಪ್ ಟೂರ್ನಿ ಆಗಲಿದೆ ಎಂಬ ವಿಶ್ವಾಸವಿದೆ. ಐಪಿಎಲ್ ಟೂರ್ನಿಗಳನ್ನು ಬಿಸಿಸಿಐ ಯಾವ ರೀತಿ ಆಯೋಜಿಸುತ್ತಿದೆ ಎಂಬುದು ನಮಗೆಲ್ಲ ತಿಳಿದಿದೆ’ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜಿಂಬಾಬ್ವೆಗೆ ರೋಚಕ ಜಯ

ಬುಲಾವಯೊ, (ಎಎಫ್‌ಪಿ): ಉತ್ತಮ ಹೋರಾಟದ ಪಂದ್ಯದಲ್ಲಿ ಆತಿಥೇಯ ಜಿಂಬಾಬ್ವೆ ತಂಡ 14 ರನ್‌ಗಳಿಂದ ಒಮಾನ್ ಮೇಲೆ ಜಯಗಳಿಸಿ ವಿಶ್ವ ಕಪ್ ಅರ್ಹತಾ ಟೂರ್ನಿಯ ಸೂಪರ್ ಸಿಕ್ಸ್‌ನಲ್ಲಿ ಉತ್ತಮ ಆರಂಭ ಮಾಡಿತು. ಸೀನ್ ವಿಲಿಯಮ್ಸ್ (103 ಎಸೆತಗಳಲ್ಲಿ 142) ಟೂರ್ನಿಯಲ್ಲಿ ಮೂರನೇ ಶತಕ ದಾಖಲಿಸಿದರು.

ಗುರುವಾರ ನಡೆದ ಪಂದ್ಯದಲ್ಲಿ ಜಿಂಬಾಬ್ವೆ 50 ಓವರುಗಳಲ್ಲಿ 7 ವಿಕೆಟ್‌ಗೆ 332 ರನ್ ಗಳಿಸಿತು. ಈ ಮೊತ್ತ ಬೆನ್ನಟ್ಟಿದ ಒಮಾನ್ ಹೋರಾಟ ತೋರಿದರೂ 9 ವಿಕೆಟ್‌ಗೆ 318 ರನ್ ಗಳಿಸಿ ಸ್ವಲ್ಪದರಲ್ಲೇ ಹಿಂದೆಬಿದ್ದಿತು. ಆರಂಭ ಆಟಗಾರ ಕಶ್ಯಪ ಪ್ರಜಾಪತಿ 97 ಎಸೆತಗಳಲ್ಲಿ 103 ರನ್ ಹೊಡೆದು ದಿಟ್ಟ ಪ್ರತಿರೋಧ ತೋರಿದರು.

ಲೀಗ್ ಹಂತದಲ್ಲಿ ವೆಸ್ಟ್ ಇಂಡೀಸ್ ಮತ್ತು ನೆದರ್ಲೆಂಡ್ಸ್ ಮೇಲೆ ಜಯಗಳಿಸಿದ್ದ ಜಿಂಬಾಬ್ವೆ ಈಗ ಲೀಗ್ ಪಾಯಿಂಟ್ ಪಟ್ಟಿಯಲ್ಲಿ ಮೇಲಕ್ಕೇರಿದೆ.

ಬ್ಯಾಸ್ಕೆಟ್‌ಬಾಲ್: ಸೆಮಿಗೆ ವಿಮಾನಪುರ

ಬೆಂಗಳೂರು: ರೋಹನ್ (24 ಪಾಯಿಂಟ್ಸ್), ಪೊನ್ನಪ್ಪ (21 ಪಾಯಿಂಟ್ಸ್) ಅವರ ಆಟದ ನೆರವಿನಿಂದ ವಿಮಾನಪುರ ಸ್ಪೋರ್ಟ್ಸ್ ಕ್ಲಬ್ ತಂಡವು ಎಂ.ಸಿ. ಶ್ರೀನಿವಾಸ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ‘ಬಿ’ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ದೇವಾಂಗ ಯೂನಿಯನ್ ತಂಡವನ್ನು 94–71ರಿಂದ ಗುರುವಾರ ಮಣಿಸಿ ಸೆಮಿಫೈನಲ್ ಪ್ರವೇಶಿಸಿತು.

ಮತ್ತೊಂದು ಪಂದ್ಯದಲ್ಲಿ ಕೋರಮಂಗಲ ಸ್ಪೋರ್ಟ್ಸ್ ಕ್ಲಬ್ ತಂಡವು ರಾಜ್‌ಮಹಲ್ ತಂಡವನ್ನು 86–71ರಿಂದ ಸೋಲಿಸಿತು. ಪಂದ್ಯದ ಮಧ್ಯಂತರದ ವೇಳೆಗೆ 31–32ರಿಂದ ಹಿಂದಿದ್ದ ಕೋರಮಂಗಲ ತಂಡವು ನಂತರ ಪುಟಿದೆದ್ದು, ಶಿವರಾಮ್ (28 ಪಾಯಿಂಟ್ಸ್), ಮಂಜು (21 ಪಾಯಿಂಟ್ಸ್) ಅವರ ಆಟದ ಬಲದಿಂದ ಗೆಲುವು ಸಾಧಿಸಿದರು. ಸೆಮಿಫೈನಲ್‌ನಲ್ಲಿ ವಿಮಾನಪುರ ಸ್ಪೋರ್ಟ್ಸ್ ಕ್ಲಬ್ ಮತ್ತು ಜೆಎಸ್‌ಸಿ ತಂಡ ಹಾಗೂ ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ಮತ್ತು ಕೆಎಸ್‌ಪಿ ತಂಡ ಮುಖಾಮುಖಿಯಾಗಲಿವೆ.

ಕಬಡ್ಡಿ: ಭಾರತಕ್ಕೆ ನಾಲ್ಕನೇ ಗೆಲುವು

ಬೂಸಾನ್ (ದಕ್ಷಿಣ ಕೊರಿಯಾ): ಹಾಲಿ ಚಾಂಪಿಯನ್ ಭಾರತ ತಂಡವು 11ನೇ ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಇರಾನ್ ತಂಡವನ್ನು 33–28 ಅಂಕಗಳಿಂದ ಮಣಿಸಿತು. ಇದು ಭಾರತಕ್ಕೆ ಸತತ ನಾಲ್ಕನೇ ಗೆಲುವಾಗಿದೆ.

ಇನ್ನೊಂದು ಚೈನೀಸ್ ತೈಪೆ ತಂಡವು ಜಪಾನ್ ತಂಡವನ್ನು 37–29ರಿಂದ ಸೋಲಿಸಿತು. ಮತ್ತೊಂದು ಪಂದ್ಯದಲ್ಲಿ ತೈಪೆಯು ಕೊರಿಯಾವನ್ನು ಮಣಿಸಿತು. ಭಾರತ ಶುಕ್ರವಾರ ಹಾಂಗ್‌ಕಾಂಗ್ ತಂಡದ ಸವಾಲನ್ನು ಎದುರಿಸಲಿದೆ.

ಮೈಸೂರು ರೇಸ್

ಸ್ಟೆಲ್ಲಾಂಟಿಸ್ ಗೆಲ್ಲುವ ನಿರೀಕ್ಷೆ

ಮೈಸೂರು ಕೋಲ್ಟ್ಸ್ ಟ್ರಯಲ್ ಸ್ಟೇಕ್ಸ್ 2023 ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಟೆಲ್ಲಾಂಟಿಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕ್ಯಾಲಿಫೋರ್ನಿಯಾ ಗೋಲ್ಡ್ 8, ಮೈಟ್ ಲೈಸ್ 1, ಯೂನಿಟಿ 6
2ನೇ ರೇಸ್: ನ್ಯಾಚುರಲ್ ಪ್ಲೈ 6, ಲೀಡ್ ಸಿಂಗರ್ 12, ಇನ್‌ಎಕ್ಸಾಸ್ಟಿಬಲ್ 5
3ನೇ ರೇಸ್: ಎನ್‌ಆರ್‌ಐ ಮಿಲ್ಲೇನಿಯಮ್ 3, ಎನ್‌ಆರ್‌ಐ ಬ್ಲೂ 4, ಡಿ ರೊಮಾನ್ಸ್ 6
4ನೇ ರೇಸ್: ಗೈಡಿಂಗ್ ಫೋರ್ಸ್ 1, ಅಸ್ಟರ್ 4, ಲಕ್ಕಿ ಪಾಯಿಂಟ್ 5
5ನೇ ರೇಸ್: ಸ್ಟೆಲ್ಲಾಂಟಿಸ್ 2, ಬ್ರೇವ್ ಟ್ರೂಪರ್ 3, ಲ್ಯಾಂಡ್ ಆಫ್ ಗೋಲ್ಡ್ 5
6ನೇ ರೇಸ್: ಸರ್ ಕ್ಯಾಲ್ಕುಲಸ್ 9, ಫ್ಯೂರಿಯಸ್ ಫನ್ 8, ವಿಜಯ ಸ್ಪಾರ್ಕಲ್ 13
7ನೇ ರೇಸ್: ಪರ್ಫೆಕ್ಟ್ ಜಸ್ಟೀಸ್ 2, ಐ ದಿ ಮೈಂಡ್ 3, ಮಿಷೆಲ್ ಪ್ರೈಡ್ 5

ಉತ್ತಮ ಬೆಟ್: ಕ್ಯಾಲಿಫೋರ್ನಿಯಾ ಗೋಲ್ಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ಭಾರತ ಹಾಕಿ ತಂಡಕ್ಕೆ ಆಪ್ಟನ್ ಮೈಂಡ್ ಕೋಚ್

ಪ್ಯಾಡಿ ಆಪ್ಟನ್

ನವದೆಹಲಿ (ಪಿಟಿಐ): ಕ್ರೀಡಾ ಮನೋವಿಶ್ಲೇಷಕ ಪ್ಯಾಡಿ ಆಪ್ಟನ್ ಅವರನ್ನು ಭಾರತ ಹಾಕಿ ತಂಡದ ಮೈಂಡ್ ಕೋಚ್ ಆಗಿ ನೇಮಕ ಮಾಡಲಾಗಿದೆ.

ಮುಂಬರುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಮತ್ತು ಏಷ್ಯನ್ ಗೇಮ್ಸ್ ಪೂರ್ವಭಾವಿ ಸಿದ್ಧತೆಗೆ ಅವರು ತಂಡಕ್ಕೆ ನೆರವಾಗಲಿದ್ದಾರೆ. ದಕ್ಷಿಣ ಆಫ್ರಿಕಾದ ಪ್ಯಾಡಿ, ಈ ಮೊದಲು ಭಾರತ ಕ್ರಿಕೆಟ್ ತಂಡದ ಮೆಂಟಲ್ ಕಂಡಿಷನಿಂಗ್ ಪರಿಣತರಾಗಿ ಕಾರ್ಯ ನಿರ್ವಹಿಸಿದ್ದರು.

ಬೆನ್ ಅಮೋಘ ಬ್ಯಾಟಿಂಗ್; ಇಂಗ್ಲೆಂಡ್ ದಿಟ್ಟ ಉತ್ತರ

ಸ್ಮಿತ್ ಶತಕ: ಆಸ್ಟ್ರೇಲಿಯಾ ಉತ್ತಮ ಮೊತ್ತ

ಲಂಡನ್ (ಪಿಟಿಐ/ಎಎಫ್‌ಪಿ): ಸ್ಟೀವನ್ ಸ್ಮಿತ್ ಗಳಿಸಿದ ಸುಂದರ ಶತಕದ ಬಲದಿಂದ ಆಸ್ಟ್ರೇಲಿಯಾ ತಂಡವು ಇಲ್ಲಿ ನಡೆಯುತ್ತಿರುವ ಆ್ಯಷಸ್ ಸರಣಿಯ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಮೊತ್ತ ಗಳಿಸಿತು. ಇಂಗ್ಲೆಂಡ್ ಕೂಡ ದಿಟ್ಟ ಪ್ರತಿಕ್ರಿಯೆ ನೀಡಿದೆ.

ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ಎರಡನೇ ದಿನದಾಟದಲ್ಲಿ ಸ್ಮಿತ್ (110; 184ಎ, 4X15) ಮತ್ತು ಟ್ರಾವಿಸ್ ಹೆಡ್ (77; 73ಎ (ಅವರ ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು 416 ರನ್ ಗಳಿಸಿತು. ಅದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಆತಿಥೇಯ ತಂಡವು ದಿನದಾಟದ ಅಂತ್ಯಕ್ಕೆ 61 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 278 ರನ್ ಗಳಿಸಿತು. ಸ್ಮಿತ್ ಅವರಿಗೆ ಇದು ಟೆಸ್ಟ್ ಕ್ರಿಕೆಟ್‌ನಲ್ಲಿ 32ನೇ ಶತಕವಾಗಿದೆ. ಇದರೊಂದಿಗೆ ಅವರು ಈ ಮಾದರಿಯಲ್ಲಿ 9 ಸಾವಿರ ರನ್‌ಗಳಿಸಿದ ಸಾಧನೆಯನ್ನೂ ಮಾಡಿದರು.

ಆರಂಭಿಕ ಜೋಡಿ ಜಾಕ್ ಕ್ರಾಲಿ ಮತ್ತು ಬೆನ್ ಡಕೆಟ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 91 ರನ್ ಗಳಿಸಿ ಉತ್ತಮ ಅಡಿಪಾಯ ಹಾಕಿದರು. ಆದರೆ ಆಸ್ಟ್ರೇಲಿಯಾ ಸ್ಪಿನ್ನರ್ ನೇಥನ್ ಲಯನ್ ಬೌಲಿಂಗ್‌ನಲ್ಲಿ ಜಾಕ್ ಕ್ರಾಲಿ ವಿಕೆಟ್ ಉರುಳಿತು. ವಿಕೆಟ್‌ಕೀಪರ್ ಅಲೆಕ್ಸ್ ಮಾಡಿದ ಮಿಂಚಿನ ವೇಗದ ಸ್ಟಂಪಿಂಗ್‌ನಲ್ಲಿ ಕ್ರಾಲಿ ಔಟಾದರು.

ಸ್ಟೀವನ್ ಸ್ಮಿತ್ ಶತಕ ಸಂಭ್ರಮ –ಎಎಫ್‌ಪಿ ಚಿತ್ರ

ಬೆನ್ ಜೊತೆಗೂಡಿದ ಒಲಿ ಪೋಪ್ ಅವರು ರನ್‌ಗಳಿಕೆಗೆ ವೇಗ ನೀಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರೂ 97 ರನ್ ಸೇರಿಸಿದರು. ಬೆನ್ ಶತಕದತ್ತ ದಾಪುಗಾಲಿಟ್ಟರು. ಆದರೆ, ಅವರ ಆಸೆಗೆ ಜೋಶ್ ಹ್ಯಾಜಲ್‌ವುಡ್ ಅಡ್ಡಗಾಲು ಹಾಕಿದರು. 98 ರನ್ ಗಳಿಸಿದ್ದ ಬೆನ್ ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 100.4 ಓವರ್‌ಗಳಲ್ಲಿ 416 (ಸ್ಟೀವನ್ ಸ್ಮಿತ್ 110, ಟ್ರಾವಿಸ್ ಹೆಡ್ 77, ಅಲೆಕ್ಸ್ ಕ್ಯಾರಿ 22, ಪ್ಯಾಟ್ ಕಮಿನ್ಸ್ ಔಟಾಗದೆ 22, ಒಲಿ ರಾಬಿನ್ಸನ್ 100ಕ್ಕೆ3, ಜೋಶ್ ಟಂಗ್ 98ಕ್ಕೆ3, ಜೋ ರೂಟ್ 19ಕ್ಕೆ2) ಇಂಗ್ಲೆಂಡ್: 61 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 278 (ಜ್ಯಾಕ್ ಕ್ರಾಲಿ 48, ಬೆನ್ ಡಕೆಟ್ 98, ಒಲಿ ಪೋಪ್ 42, ಹ್ಯಾರಿ ಬ್ರೂಕ್ ಬ್ಯಾಟಿಂಗ್ 45, ಬೆನ್ ಸ್ಟೋಕ್ಸ್ ಬ್ಯಾಟಿಂಗ್ 17, ಮಿಚೆಲ್ ಸ್ಟಾರ್ಕ್ 72ಕ್ಕೆ1, ಜೋಶ್ ಹ್ಯಾಜಲ್‌ವುಡ್ 52ಕ್ಕೆ1, ನೇಥನ್ ಲಯನ್ 35ಕ್ಕೆ1)

ಗ್ರ್ಯಾಂಡ್‌ಮಾಸ್ಟರ್ ದ್ರೋಣವಲ್ಲಿ ಹಾರಿಕ

‘ಮಹಿಳಾ ಚೆಸ್ ಹಿನ್ನಡೆಗೆ ಕಾರಣ ತಿಳಿಯುತ್ತಿಲ್ಲ’

ನವದೆಹಲಿ (ಪಿಟಿಐ): ಭಾರತದಲ್ಲಿ ಪುರುಷರ ಮತ್ತು ಮಹಿಳೆಯರ ಚೆಸ್ ನಡುವೆ ದೊಡ್ಡ ನಿರ್ವಾತ ಸೃಷ್ಟಿಯಾಗಿದೆ. ಇದು ಯಾಕೆಂಬುದು ಅರ್ಥವಾಗುತ್ತಿಲ್ಲ. ದೇಶದಲ್ಲಿ ಕೆಲವು ಪ್ರತಿಭಾನ್ವಿತ ಆಟಗಾರ್ತಿಯರು ಮೂಡಿಬರುತ್ತಿರುವುದರಿಂದ ಪರಿಸ್ಥಿತಿ ಸುಧಾರಿಸಬಹುದು ಎಂದು ಗ್ರ್ಯಾಂಡ್‌ಮಾಸ್ಟರ್ ದ್ರೋಣವಲ್ಲಿ ಹಾರಿಕ ಹೇಳಿದ್ದಾರೆ.

ಮಹಿಳಾ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೂರು ಬಾರಿ ಕಂಚಿನ ಪದಕ ಗೆದ್ದುಕೊಂಡಿರುವ ಮತ್ತು ಫಿಡೆ ಮಹಿಳಾ ಗ್ರ್ಯಾನ್ ಪ್ರಿ ವಿಜೇತರಾಗಿರುವ ಹಾರಿಕಾ ಕೆಲವು ವರ್ಷಗಳಿಂದ ಅನುಭವಿ ಆಟಗಾರ್ತಿ, ಗ್ರ್ಯಾಂಡ್‌ಮಾಸ್ಟರ್ ಕೊನೆರು ಹಂಪಿ ಅವರೊಂದಿಗೆ ಭಾರತದ ಮಹಿಳಾ ಚೆಸ್‌ನಲ್ಲಿ ಮುಂಚೂಣಿ ಹೆಸರಾಗಿದ್ದಾರೆ. ಹಂಪಿ ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ. ಮಹಿಳೆಯರ ಪೈಕಿ ದೇಶದಲ್ಲಿ ಇವರಿಬ್ಬರು ಮಾತ್ರ ‘ಗ್ರ್ಯಾಂಡ್‌ಮಾಸ್ಟರ್’ ಪಟ್ಟ ಹೊಂದಿದ್ದಾರೆ.

ಹಲವು ಟ್ರೋಫಿಗಳನ್ನು ಗೆದ್ದುಕೊಂಡಿರುವ ಈ ಇಬ್ಬರು ಆಟಗಾರ್ತಿಯರು, ದುಬೈನಲ್ಲಿ ನಡೆಯುತ್ತಿರುವ ಚೊಚ್ಚಲ ಗ್ಲೋಬಲ್ ಚೆಸ್ ಲೀಗ್‌ನಲ್ಲಿ (ಜಿಸಿಎಲ್) ಮುಂಬಾ ಮಾಸ್ಟರ್ಸ್ ತಂಡದಲ್ಲಿ ಜೊತೆಗೆ ಆಡುತ್ತಿದ್ದಾರೆ.

ದ್ರೋಣವಲ್ಲಿ ಹಾರಿಕ

ರಮೇಶಬಾಬು ಪ್ರಗ್ನಾನಂದ, ಅರ್ಜುನ್ ಎರಿಗೈಸಿ ಮತ್ತು ಡಿ.ಗುಕೇಶ್ ಅವರು ಪುರುಷರ ವಿಭಾಗದಲ್ಲಿ ಅಲೆಗಳನ್ನು ಎಬ್ಬಿಸುತ್ತಿದ್ದು, ಐದು ಬಾರಿಯ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಸೇರಿದಂತೆ ವಿಶ್ವದ ಘಟಾನುಘಟಿ ಆಟಗಾರರನ್ನು ಸೋಲಿಸಿದ್ದಾರೆ. ಆದರೆ ಮಹಿಳಾ ವಿಭಾಗದಲ್ಲಿ ದೇಶದ ಚಿತ್ರಣ ಉತ್ತೇಜನಕಾರಿಯಾಗಿಲ್ಲ.

‘ಈ ಕಂದರ ಏಕೆ ಉಂಟಾಗಿದೆ ಎಬುದು ನನಗೂ ಗೊತ್ತಿಲ್ಲ. ಸಾಕಷ್ಟು ಯುವ ಆಟಗಾರರು ಮುನ್ನೆಲೆಗೆ ಬರುತ್ತಿದ್ದಾರೆ. ಆದರೆ ಅತ್ಯಲ್ಪ ಆಟಗಾರ್ತಿಯರು ಭರವಸೆ ಮೂಡಿಸುತ್ತಿದ್ದಾರೆ. ಇದು ಒಳ್ಳೆಯ ಲಕ್ಷಣ. ಆದರೆ ಅವರಿಗೂ (ಮಹಿಳಾ ಆಟಗಾರ್ತಿಯರಿಗೆ) ಮುಂದೆ ಬರಲು ಸಾಕಷ್ಟು ಅವಕಾಶವಿದೆ’ ಎಂದು 2010ರ ಏಷ್ಯನ್ ಕ್ರೀಡಾಕೂಟದ ಕಂಚಿನ ಪದಕ ವಿಜೇತೆ ಹಾರಿಕಾ ಗುರುವಾರ ಆನ್‌ಲೈನ್ ಸಂವಾದದಲ್ಲಿ ಅಭಿಪ್ರಾಯಪಟ್ಟರು.

ಕೋವಿಡ್ ನಿರ್ಬಂಧಗಳ ಕಾರಣ, ಚೀನಾದ ಗುವಾಂಗ್‌ಜೌನಲ್ಲಿ ನಡೆಯಲಿರುವ ಮುಂಬರುವ ಏಷ್ಯಾಡ್‌ನಲ್ಲಿ ಭಾಗವಹಿಸುವ ಬಗ್ಗೆ ಖಚಿತ ನಿರ್ಧಾರ ಕೈಗೊಂಡಿಲ್ಲ ಎಂದು ಜಿಎಂ ಹಂಪಿ ಇತ್ತೀಚೆಗೆ ಹೇಳಿದ್ದರು. ಆದರೆ ಏಷ್ಯನ್ ಕ್ರೀಡಾಕೂಟದಲ್ಲಿ ಹಂಪಿ ಭಾಗವಹಿಸುವ ವಿಶ್ವಾಸವಿದೆ ಎಂದು ಹಾರಿಕ ಹೇಳಿದರು.

‘ಈ ವಿಷಯದಲ್ಲಿ ಸ್ವಲ್ಪ ಗೊಂದಲವಿರಬಹುದು. ಆದರೆ ಭಾಗವಹಿಸುತ್ತಿಲ್ಲ ಎಂದು ಹಂಪಿ ಹೇಳಿಲ್ಲ. ಚೀನಾದಲ್ಲಿನ ಪರಿಸ್ಥಿತಿಯ ಬಗ್ಗೆ ಯೋಚಿಸುತ್ತಿದ್ದೇನೆ ಎಂದಿದ್ದಾರೆ. ಆಡುವ ಬಗ್ಗೆ ಅವರು ಯೋಚಿಸಿರಬಹುದು’ ಎಂದು ಹಾರಿಕ ಹೇಳಿದರು.

ಮಹಿಳೆಯರ ವಿಭಾಗದಲ್ಲಿ ದೇಶದ ಇಬ್ಬರು ಗ್ರ್ಯಾಂಡ್‌ಮಾಸ್ಟರ್‌ಗಳ (ಹಂಪಿ ಮತ್ತು ತಮ್ಮ ನಡುವೆ) ನಡುವೆ ಹಿಂದೊಮ್ಮೆ ಹೋಲಿಕೆಗಳು ನಡೆದಿದ್ದವು. ಇದು ಬೇಕಾಗಿರಲಿಲ್ಲ ಎಂದು ಅವರು ಹೇಳಿದರು.

‘ಆರಂಭದಲ್ಲಿ ನಮ್ಮಿಬ್ಬರ ನಡುವೆ ಕೆಲವು ಕಾರಣಗಳಿಂದ ಯಾರು ಹೆಚ್ಚೆಂಬ ತುಲನೆಗಳು ನಡೆದಿದ್ದವು. ಆದರೆ ಈಗ ನಾವು ವೈಯಕ್ತಿಕ ಬದುಕು ಮತ್ತು ವೃತ್ತಿ ಬದುಕು ನಿರ್ವಹಿಸುವ ತಾಯಂದಿರು ಮಾತ್ರ. ಟೂರ್ನಿಗಳಲ್ಲಿ ನಾವಿಬ್ಬರು ಒಳ್ಳೆಯ ಸ್ನೇಹಿತೆಯರು’ ಎಂದರು.

ಮಹಿಳೆಯರಿಗಾಗಿ ಟೂರ್ನಿ ಹೆಚ್ಚಲಿ: ‘ಭಾರತದಲ್ಲಿ ಮಹಿಳೆಯರಿಗಾಗಿ ಚೆಸ್ ಟೂರ್ನಿಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯ ಇದೆ’ ಎಂದು ಗ್ರ್ಯಾಂಡ್ ಮಾಸ್ಟರ್ ಕೊನೇರು ಹಂಪಿ ಅಭಿಪ್ರಾಯಪಟ್ಟಿದ್ದಾರೆ.

‘ಪುರುಷರಿಗೆ ಹೋಲಿಸಿದರೆ ಮಹಿಳಾ ಚೆಸ್ ಆಟಗಾರರ ಸಂಖ್ಯೆ ಕಡಿಮೆ ಇದೆ. ಹೀಗಾಗಿ, ಯುವತಿಯರಿಗೆ ಹೆಚ್ಚಿನ ಟೂರ್ನಿಗಳು ನಡೆಯಬೇಕು. ಅಲ್ಲದೆ, ದೊಡ್ಡ ಟೂರ್ನಿಗಳಲ್ಲಿ ದೇಶದ ಚೆಸ್ ಆಟಗಾರರು ಆರ್ಥಿಕ ಸವಾಲುಗಳನ್ನು ಎದುರಿಸುತ್ತಿದ್ದು, ಅವರಿಗೆ ಹಣಕಾಸಿನ ಬೆಂಬಲದ ಅಗತ್ಯವಿದೆ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.